ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 25 ಬುಧವಾರ 2022

ಸಂಪುಟ: 43 | ಸಂಚಿಕೆ: 39 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಭೂ ಪರಿವರ್ತನೆ ಇನ್ನು ಬಲು ಸುಲಭ

ಕೇವಲ 72 ಗಂಟೆಯಲ್ಲಿ ಅನುಮತಿ

● ವಾರದಲ್ಲಿ ಸರ್ಕಾರಿ ಆದೇಶ ● ಗ್ರಾಮೀಣ ಪ್ರದೇಶದಲ್ಲಿ ಹಾಲಿ ಶುಲ್ಕ ● ಪಾಲಿಕೆ, ನಗರ ಪ್ರದೇಶದಲ್ಲಿ ಎರಡ್ಮೂರು ಪಟ್ಟು ಹೆಚ್ಚಳ ● ತಪ್ಪು ಮಾಹಿತಿ ನೀಡಿದರೆ ಭೂ ಪರಿವರ್ತನೆ ರದ್ದು, ಶುಲ್ಕವೂ ಮುಟ್ಟುಗೋಲು ● ಜಿಲ್ಲಾಧಿಕಾರಿ ಕಚೇರಿ ಏಕಗವಾಕ್ಷಿಗೆ ಅರ್ಜಿ, ಶುಲ್ಕ, ಪ್ರಮಾಣಪತ್ರ ಸಲ್ಲಿಸಿದರೆ ಕೆಲಸ ಆಯ್ತು

ಬೆಂಗಳೂರು, ಮೇ24(ಕೆಎಂಶಿ)–ಭೂ ಪರಿವರ್ತನೆಗೆ ಅನುಮತಿ ಕೋರಿ ಅರ್ಜಿ ಸಲ್ಲಿಸಿದವರಿಗೆ 72 ಗಂಟೆಗಳಲ್ಲಿ ಅನುಮತಿ ನೀಡಲು ಸರ್ಕಾರ ನಿರ್ಧರಿಸಿದೆ.



ಸುದ್ದಿಗಾರರೊಂದಿಗೆ ಮಾತನಾಡಿದ ಕಂದಾಯ ಸಚಿವ ಆರ್.ಅಶೋಕ್, ಈ ವಿಷಯ ತಿಳಿಸಿದ್ದಲ್ಲದೆ, ಭೂ ಪರಿವರ್ತನೆಗೆ ಅಧಿಕಾರಿಗಳ ಮಟ್ಟದಲ್ಲಿ ನಡೆಯುತ್ತಿದ್ದ ದೊಡ್ಡ ಪ್ರಮಾಣದ ಭ್ರಷ್ಟಾಚಾರಕ್ಕೆ ತೆರೆ ಎಳೆಯಲಾಗುತ್ತಿದೆ. ಸರ್ಕಾರದ ಈ ನಿರ್ಧಾರವನ್ನು ಇನ್ನೊಂದು ವಾರದಲ್ಲಿ ಆದೇಶ ಹೊರಡಿಸಿ, ಜಾರಿಗೊಳಿಸಲಾಗುವುದು ಎಂದರು. ಆದರೆ,



ಗ್ರಾಮೀಣ ಪ್ರದೇಶದಲ್ಲಿನ ಹಾಲಿ ಪರಿವರ್ತನಾ ಶುಲ್ಕದಲ್ಲಿ ಬದಲಾವಣೆ ಇಲ್ಲ, ಇನ್ನು ಪಾಲಿಕೆ ಮತ್ತು ನಗರ ಪ್ರದೇಶದಲ್ಲಿ ವಲಯವಾರು ದರ ನಿಗದಿಯಲ್ಲಿ ಎರಡರಿಂದ ಮೂರು ಪಟ್ಟು ಹೆಚ್ಚಳವಾಗಲಿದೆ. ಇನ್ನು ಮುಂದೆ ನಿವೇಶನ ಪರಿವರ್ತನೆ ಇಲ್ಲವೇ ಬಡಾವಣೆ ನಿರ್ಮಾಣ, ಕೈಗಾರಿಕಾ ಬಳಕೆ ಸೇರಿದಂತೆ ಯಾವುದೇ ಭೂ ಪರಿವರ್ತನೆಗೂ ಸಂಬಂಧಪಟ್ಟ ಜಿಲ್ಲಾಧಿಕಾರಿ ಕಚೇರಿಯಲ್ಲಿನ ಏಕಗವಾಕ್ಷಿಗೆ ಅರ್ಜಿ, ಶುಲ್ಕ ಹಾಗೂ ಪ್ರಮಾಣಪತ್ರ ಸಲ್ಲಿಸಿ ನಿಗದಿತ ನಮೂನೆಯಲ್ಲಿ ಅನುಮೋದನೆ ಪಡೆದುಕೊಳ್ಳಬಹುದು. ಕೈಗಾರಿಕೆ, ಮನೆ ಸೇರಿದಂತೆ ಹಲವು ಉದ್ದೇಶಗಳಿಗಾಗಿ ಕೃಷಿ ಭೂಮಿಯನ್ನು ಕೃಷಿಯೇತರ ಚಟುವಟಿಕೆಗೆ ಪರಿವರ್ತನೆ ಮಾಡುವ ಕೆಲಸ ವಿನಾ ಕಾರಣ ವಿಳಂಬವಾಗುತ್ತಿದ್ದು, ಅರ್ಜಿ ಸಲ್ಲಿಸಿದವರು ತಿಂಗಳಾನುಗಟ್ಟಲೆ ಕಾಯುವ ಪರಿಸ್ಥಿತಿ ಇದೆ. ಇಂತಹ ವಿಳಂಬದಿಂದಾಗಿ ಕೈಗಾರಿಕೆ ▶ 8ನೇ ಪುಟಕ್ಕೆ

ವಿಧಾನಸಭೆಯಿಂದ ವಿಧಾನಪರಿಷತ್‌ಗೆ ಚುನಾವಣೆ

ಬಿಜೆಪಿಯ ಸವದಿ, ಕೇಶವಪ್ರಸಾದ್, ಹೇಮಲತಾ ನಾಯಕ್, ಛಲವಾದಿ ನಾರಾಯಣಸ್ವಾಮಿ, ಕಾಂಗ್ರೆಸ್‌ನ ನಾಗರಾಜ ಯಾದವ್, ಅಬ್ದುಲ್ ಜಬ್ಬಾರ್, ಜೆಡಿಎಸ್‌ನ ಶರವಣ ಅವಿರೋಧ ಆಯ್ಕೆ ಖಚಿತ

● ಕಡೇ ದಿನ ಮೂರು ಪಕ್ಷಗಳಿಂದ ಅಭ್ಯರ್ಥಿಗಳು ಕಣಕ್ಕೆ ● ಅಧಿಕೃತ ಘೋಷಣೆಯಷ್ಟೇ ಬಾಕಿ



ಲಕ್ಷ್ಮಣ್ ಸವದಿ | ಕೇಶವಪ್ರಸಾದ್ | ಹೇಮಲತಾ | ನಾರಾಯಣ ಸ್ವಾಮಿ | ಅಬ್ದುಲ್ ಜಬ್ಬಾರ್ | ನಾಗರಾಜ ಯಾದವ್ | ಶರವಣ

ಬೆಂಗಳೂರು, ಮೇ24(ಕೆಎಂಶಿ)– ಮಾಜಿ ಉಪಮುಖ್ಯಮಂತ್ರಿ ಲಕ್ಷ್ಮಣ ಸವದಿ ಸೇರಿದಂತೆ ಏಳು ಮಂದಿ ವಿಧಾನಪರಿಷತ್ತಿಗೆ ಅವಿರೋಧ ಆಯ್ಕೆಯಾಗುವುದು ಬಹುತೇಕ ಖಚಿತವಾಗಿದೆ.

ವಿಧಾನಸಭೆಯಿಂದ ವಿಧಾನಪರಿಷತ್ತಿನ ಏಳು ಸ್ಥಾನಗಳಿಗೆ ನಡೆಯುತ್ತಿರುವ ದ್ವೈವಾರ್ಷಿಕ ಚುನಾವಣೆಗೆ ನಾಮಪತ್ರ ಸಲ್ಲಿಕೆಗೆ ಕಡೆಯ ದಿನವಾದ ಮಂಗಳವಾರ ಎಲ್ಲಾ ಪ್ರಮುಖ ರಾಜಕೀಯ ಪಕ್ಷಗಳು ವಿಧಾನಸಭೆಯಲ್ಲಿನ ತಮ್ಮ ಸದಸ್ಯ ಸಂಖ್ಯಾಬಲಕ್ಕೆ ತಕ್ಕಂತೆ ಅಭ್ಯರ್ಥಿಗಳನ್ನು ಕಣಕ್ಕಿಳಿಸುವ ಮೂಲಕ ಎಲ್ಲರ ಅವಿರೋಧ ಆಯ್ಕೆಗೆ ದಾರಿ ಮಾಡಿದೆ. ವಿಧಾನಸಭೆಯ ಬಲಾಬಲದ ಆಧಾರದ ಮೇಲೆ ಆಡಳಿತಾರೂಢ ಬಿಜೆಪಿಗೆ ನಾಲ್ಕು, ಪ್ರಮುಖ ಪ್ರತಿಪಕ್ಷ ಕಾಂಗ್ರೆಸ್‌ಗೆ 2 ಹಾಗೂ ಜೆಡಿಎಸ್‌ಗೆ 1 ಸ್ಥಾನ ದೊರೆಯಲಿದೆ. ಬಿಜೆಪಿಯು ಲಕ್ಷ್ಮಣ ಸವದಿ (ಬೆಳಗಾವಿ), ಎಸ್.ಕೇಶವ ಪ್ರಸಾದ್ (ಬೆಂಗಳೂರು ಉತ್ತರ), ಹೇಮಲತಾ ನಾಯಕ್ (ಕೊಪ್ಪಳ) ಹಾಗೂ ಛಲವಾದಿ ನಾರಾಯಣಸ್ವಾಮಿ (ಬೆಂಗಳೂರು ಗ್ರಾಮಾಂತರ) ಇವರನ್ನು ಕಣಕ್ಕಿಳಿಸಿದೆ. ಕಾಂಗ್ರೆಸ್‌ನಿಂದ ಎಂ.ನಾಗರಾಜ್ ಯಾದವ್, ಅಬ್ದುಲ್ ಜಬ್ಬಾರ್ ನಾಮಪತ್ರ ಸಲ್ಲಿಸಿದ್ದಾರೆ. ಜೆಡಿಎಸ್‌ನ ಒಂದು ಸ್ಥಾನಕ್ಕೆ ಟಿ.ಎ.ಶರವಣ ನಾಮಪತ್ರ ಸಲ್ಲಿಸಿದರು. ಈ ಬಾರಿ ಯಾವುದೇ ರಾಜಕೀಯ ಪಕ್ಷ ಹೆಚ್ಚುವರಿ ಅಭ್ಯರ್ಥಿಯನ್ನು ಕಣಕ್ಕಿಳಿಸದಿರುವ ಜೊತೆಗೆ ಪಕ್ಷೇತರ ಅಭ್ಯರ್ಥಿಗಳು ನಾಮಪತ್ರ ಸಲ್ಲಿಕೆಗೆ ಮುಂದಾಗದ ಕಾರಣ ಪ್ರಸ್ತುತ ನಾಮಪತ್ರ ಸಲ್ಲಿಸಿರುವ ▶ 8ನೇ ಪುಟಕ್ಕೆ

ಬಿ.ವೈ.ವಿಜಯೇಂದ್ರಗೆ ಮಣೆ ಹಾಕದ ವರಿಷ್ಠರು

● ಬೆಂಬಲಿಗರಲ್ಲಿ ತೀವ್ರ ಅಸಮಾಧಾನ
● ಆಪ್ತರಿಗೆ ಪಕ್ಷ ಸಂಘಟನೆ ಸಂದೇಶ

ಬೆಂಗಳೂರು, ಮೇ24(ಕೆಎಂಶಿ)–ಮಾಜಿ ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪ ಪುತ್ರ ಹಾಗೂ ರಾಜ್ಯ ಬಿಜೆಪಿ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರಿಗೆ ವರಿಷ್ಠರು ವಿಧಾನಪರಿಷತ್ ಟಿಕೆಟ್ ನಿರಾಕರಿಸಿದ್ದಾರೆ. ಇದರಿಂದ ಯಡಿಯೂರಪ್ಪ ಮತ್ತು ಅವರ ಬೆಂಬಲಿಗರು ತೀವ್ರ ಅಸಮಾಧಾನಗೊಂಡಿದ್ದರೂ ಅದನ್ನು ಬಹಿರಂಗಪಡಿಸಿಲ್ಲ, ಆದರೆ, ರಾಜ್ಯ ಬಿಜೆಪಿ 'ಎಲ್ಲವೂ ಸಂತೋಷಮಯವಾಗಿದೆ' ಎಂದು ಹೇಳುತ್ತಿದೆ. ಟಿಕೆಟ್ ನಿರಾಕರಣೆ ಆಗುತ್ತಿದ್ದಂತೆ ವಿಜಯೇಂದ್ರ ತಮ್ಮ ಬೆಂಬಲಿಗರು ಅಸಮಾಧಾನಗೊಳ್ಳದೆ ಪಕ್ಷ ಸಂಘಟನೆಯಲ್ಲಿ ▶ 8ನೇ ಪುಟಕ್ಕೆ



ರಾಜಕಾರಣದಲ್ಲಿ ಅಧಿಕಾರ, ಸ್ಥಾನವೇ ಅಂತಿಮವಲ್ಲ

ಪಕ್ಷದ ನಿರ್ಧಾರ ಗೌರವಿಸಿ, ಸೌಜನ್ಯದಿಂದ ವರ್ತಿಸುವಂತೆ ವಿಜಯೇಂದ್ರ ಮನವಿ

ಬೆಂಗಳೂರು, ಮೇ 24–ವಿಧಾನಸಭೆಯಿಂದ ವಿಧಾನ ಪರಿಷತ್ ಸ್ಥಾನಗಳಿಗೆ ನಡೆಯುವ ಚುನಾವಣೆಗೆ ಟಿಕೆಟ್ ಕೈತಪ್ಪಿದ ಬೆನ್ನಲ್ಲೇ, ರಾಜಕೀಯದಲ್ಲಿ ಅಧಿಕಾರ ಮತ್ತು ಸ್ಥಾನವೇ ಅಂತಿಮವಲ್ಲ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಪುತ್ರ ಹಾಗೂ ಪಕ್ಷದ ರಾಜ್ಯ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದ್ದಾರೆ. ಪಕ್ಷದ ನಿರ್ಧಾರ ಗೌರವಿಸಿ, ಸೌಜನ್ಯದಿಂದ ವರ್ತಿಸುವಂತೆ ತಮ್ಮ ಬೆಂಬಲಿಗರು ಮತ್ತು ಹಿತೈಷಿಗಳಿಗೆ ▶ 8ನೇ ಪುಟಕ್ಕೆ

ಲಾರಿಯಲ್ಲಿ ಸೋರುತ್ತಿತ್ತು ಚಿಲ್ಲಿ ಸಾಸ್

ಮಾರ್ಗದುದ್ದಕ್ಕೂ ಮಕ್ಕಳಾದಿ ಸುಸ್ತು!



● ಬಸ್‌ನಲ್ಲಿದ್ದವರಿಗೂ ನಾನಾ ಕಿರಿಕಿರಿ ● ಬಸ್ ನಿಂತ ಕೂಡಲೇ ದಿಕ್ಕಾಪಾಲಾಗಿ ಓಡಿದರು ● ಮಾಕುಟ್ಟ ಚೆಕ್‌ಪೋಸ್ಟ್‌ನಲ್ಲಿ ಲಾರಿ ತಡೆ, ಅಧಿಕಾರಿಗಳಿಂದ ಪರಿಶೀಲನೆ, ಮಾದರಿ ಪರೀಕ್ಷೆಗೆ ● ಬೆಂಗಳೂರಿಂದ ಎರ್ನಾಕುಲಂಗೆ ಲಾರಿ ತೆರಳುತ್ತಿತ್ತು

ಮಡಿಕೇರಿ/ವಿರಾಜಪೇಟೆ, ಮೇ 24– ಬೆಂಗಳೂರಿನಿಂದ ಕುಶಾಲನಗರ–ವಿರಾಜಪೇಟೆ ಮಾರ್ಗವಾಗಿ ಕೇರಳದ ಎರ್ನಾಕುಲಂಗೆ ಲಾರಿಯಲ್ಲಿ ಸಾಗಿಸುತ್ತಿದ್ದ ಬ್ಯಾಡಗಿ ಮೆಣಸಿನ ಕಾಯಿ (ಚಿಲ್ಲಿ) ಸಾಸ್ ರಸ್ತೆಯಲ್ಲಿ ಸೋರಿಕೆಯಾಗಿ ಕೊಡಗಿನ ವಿವಿಧೆಡೆ ಕೆಲಕಾಲ ಆತಂಕ ಸೃಷ್ಟಿಯಾಯಿತು. ಪ್ರಾರಂಭದಲ್ಲಿ ವಿಷಯುಕ್ತ ದ್ರಾವಣ ಸೋರಿಕೆಯಾಗಿದೆ ಎಂದು ಶಂಕಿಸಲಾಗಿತ್ತಾದರೂ, ಮಾಕುಟ್ಟ ಬಳಿ ಲಾರಿಯನ್ನು ತಡೆದು ಪರಿಶೀಲನೆ ನಡೆಸಿದ ಸಂದರ್ಭ ಬ್ಯಾಡಗಿ ಮೆಣಸಿನ ಕಾಯಿಯ ಸಾಸ್ ಸೋರಿಕೆಯಾಗಿರುವುದು ಖಚಿತವಾಗಿದೆ.

ಘಟನೆ ಹಿನ್ನೆಲೆ: ಕೇರಳದ ಎರ್ನಾಕುಲಂಗೆ ಕೇರಳ ನೋಂದಣಿ ಸಂಖ್ಯೆ ಹೊಂದಿದ್ದ ಲಾರಿಯಲ್ಲಿ ▶ 6ನೇ ಪುಟಕ್ಕೆ

ವಿದ್ಯಾರ್ಥಿಗಳು ಅಸ್ವಸ್ಥ

ದ್ರವದ ಘಾಟು ವಾಸನೆಗೆ ಸಿದ್ದಾಪುರ ಸಂತ ಅನ್ನಮ್ಮ ಶಾಲೆಯ ಆರು ವಿದ್ಯಾರ್ಥಿಗಳು ಅಸ್ವಸ್ಥಗೊಂಡಿದ್ದು, ಮಕ್ಕಳನ್ನು ಸಿದ್ದಾಪುರ ಸಮುದಾಯ ಆರೋಗ್ಯ ಕೇಂದ್ರಕ್ಕೆ ದಾಖಲಿಸಲಾಗಿದೆ. ಮಕ್ಕಳಲ್ಲಿ ಉಸಿರಾಟದ ತೊಂದರೆ ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಆಕ್ಸಿಜನ್ ನೀಡಲಾಗಿದೆ. ತದನಂತರ ವಿದ್ಯಾರ್ಥಿಗಳು ಚೇತರಿಸಿಕೊಂಡರು. ಸಿದ್ದಾಪುರ ಆಸ್ಪತ್ರೆಗೆ ಭೇಟಿ ನೀಡಿದ ಜಿಲ್ಲಾ ಆರೋಗ್ಯಾಧಿಕಾರಿ ಡಾ.ವೆಂಕಟೇಶ್, ವಿದ್ಯಾರ್ಥಿಗಳ ಆರೋಗ್ಯ ಪರಿಶೀಲಿಸಿದರು.

ಕೋರ್ಟ್‌ಗೆ ಹಾಜರಾಗದೇ 5 ವರ್ಷದಿಂದ ತಲೆಮರೆಸಿಕೊಂಡಿದ್ದ

ಮೈಸೂರು ಆರೋಪಿ ಸೆಲ್ಫಿಯಿಂದ ಸಿಕ್ಕಿ ಬಿದ್ದ

ಬೆಂಗಳೂರು ಮಾಲ್‌ನಲ್ಲಿ ಸ್ನೇಹಿತರೊಂದಿಗೆ ಸೆಲ್ಫಿ ಕ್ಲಿಕ್ಕಿಸಿ ಫೇಸ್‌ಬುಕ್‌ನಲ್ಲಿ ಪೋಸ್ಟ್ ಮಾಡಿ ಪೊಲೀಸರಿಗೆ ತಗ್ಲಾಕೊಂಡ!

ಮೈಸೂರು, ಮೇ 24(ಆರ್‌ಕೆ)– ಜಾಮೀನಿನ ಮೇಲೆ ಹೊರಬಂದು ಕೋರ್ಟ್ ವಿಚಾರಣೆಗೆ ಹಾಜರಾಗದೇ ಕಳೆದ ಐದು ವರ್ಷಗಳಿಂದ ತಲೆಮರೆಸಿಕೊಂಡಿದ್ದ ಮೈಸೂರಿನ ಕೊಲೆ ಆರೋಪಿ ಭಾನುವಾರ ಬೆಂಗಳೂರು ಪೊಲೀಸರಿಗೆ ಸಿಕ್ಕಿಬಿದ್ದಿದ್ದಾನೆ.



ಮಧುಸೂದನ್

ಮೈಸೂರಿನ ಕೃಷ್ಣಮೂರ್ತಿಪುರಂ ನಿವಾಸಿಯಾದ ಎಂಬಿಎ ಪದವೀಧರ ಮಧುಸೂದನ್ ಅಲಿಯಾಸ್ ಮಧು (35) ಬಂಧಿತ ಆರೋಪಿ. ಬೆಂಗಳೂರಿನ ಮಾಲ್‌ವೊಂದರಲ್ಲಿ ಸ್ನೇಹಿತನೊಂದಿಗೆ ತೆಗೆಸಿಕೊಂಡ ಸೆಲ್ಫಿ ಫೋಟೋವನ್ನು ತನ್ನ ಫೇಸ್‌ಬುಕ್‌ನಲ್ಲಿ ಪೋಸ್ಟ್ ಮಾಡಿ, ತಾನೇ ನೀಡಿದ ಸುಳಿವಿನ ಜಾಡು ಹಿಡಿದ ಆಡುಗೋಡಿ ಠಾಣೆ ಪೊಲೀಸರು ಆತನನ್ನು ಬಂಧಿಸಿದ್ದಾರೆ.

ಮೈಸೂರಿನ ಖಾಸಗಿ ಬ್ಯಾಂಕ್ ಒಂದರಲ್ಲಿ ಅಸಿಸ್ಟೆಂಟ್ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದ ಮಧುಸೂದನ್, ನಂತರ ತನ್ನ ಸ್ನೇಹಿತ ಶ್ರೀರಂಗ ಅಭಿಷೇಕ್‌ನೊಂದಿಗೆ ಸೇರಿ ಟ್ರೇಡಿಂಗ್ ಕಂಪನಿ ಆರಂಭಿಸಿದ್ದ. ಅದರಲ್ಲಿ ಸುಮಾರು 1 ಕೋಟಿ ರೂ. ನಷ್ಟವಾಗಿ ಕೈ ಸುಟ್ಟುಕೊಂಡಿದ್ದ. ಅದೇ ವೇಳೆ ಬೆಂಗಳೂರಿನ ಲಕ್ಕಸಂದ್ರ ಬಡಾವಣೆಯ ಹಿರಿಯ ನಾಗರಿಕರಾದ ಉದಯ ರಾಜ್ ಸಿಂಗ್ ಮತ್ತು ಸುಶೀಲ ದಂಪತಿ ಡೈಮಂಡ್ ನೆಕ್ಲೆಸ್ ಮಾರಾಟಕ್ಕಿದೆ ಎಂದು ಆನ್‌ಲೈನ್ ಜಾಹೀರಾತು ನೀಡಿದ್ದರು. ಅದನ್ನು ಗಮನಿಸಿದ ಮಧು ಮತ್ತು ಅಭಿಷೇಕ್, ಡೈಮಂಡ್ ನೆಕ್ಲೆಸ್ ಕಳವು ಮಾಡಲು ಪ್ಲಾನ್ ಮಾಡಿ ಇತರ ಐವರೊಂದಿಗೆ ಸಂಚು ರೂಪಿಸಿದ್ದರು. 2014ರ ಮಾರ್ಚ್ 25ರಂದು ▶ 8ನೇ ಪುಟಕ್ಕೆ

ದಕ್ಷಿಣ ಪದವೀಧರ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ 40 ಸಾವಿರ ಮತದಾರರ ವಿಳಾಸ ಅಸ್ಪಷ್ಟ

ಬಿಜೆಪಿ ವಿರುದ್ಧ ಚುನಾವಣಾ ಆಯೋಗಕ್ಕೆ ಕಾಂಗ್ರೆಸ್ ದೂರು



ಮೈಸೂರು,ಮೇ 24(ಎಂಟಿವೈ)– ದಕ್ಷಿಣ ಪದವೀಧರ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ 40 ಸಾವಿರ ಮತದಾರರ ವಿಳಾಸ ಅಸ್ಪಷ್ಟವಾಗಿದ್ದು, ಚುನಾವಣಾ ಅಕ್ರಮ ನಡೆಸಲು ಬಿಜೆಪಿ ಹುನ್ನಾರ ನಡೆಸುತ್ತಿರುವ ಶಂಕೆ ವ್ಯಕ್ತವಾಗಿರುವ ಹಿನ್ನೆಲೆಯಲ್ಲಿ ಚುನಾವಣಾ ಆಯೋಗಕ್ಕೆ ದೂರು ನೀಡಲಾಗಿದೆ ಎಂದು ಕೆಪಿಸಿಸಿ ವಕ್ತಾರ ಲಕ್ಷ್ಮಣ್ ಆರೋಪಿಸಿದ್ದಾರೆ.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮತದಾರರ ಪಟ್ಟಿಯಲ್ಲಿರುವ ಅಸ್ಪಷ್ಟ ವಿಳಾಸ ಹೊಂದಿದವರಲ್ಲಿ ಕೆಲವರು ಪದವಿ ಶಿಕ್ಷಣ ಮಾಡಿರುವ ಬಗ್ಗೆಯೂ ಅನುಮಾನ ಮೂಡಿದೆ. ದಕ್ಷಿಣ ಪದವೀಧರ ಕ್ಷೇತ್ರದಲ್ಲಿ 1.33 ಲಕ್ಷ ಮತದಾರರು ನೋಂದಣಿಯಾಗಿದ್ದು, ಅದರಲ್ಲಿ 40 ಸಾವಿರ ಮತದಾರರ ವಿಳಾಸ ಅಪೂರ್ಣವಾಗಿದೆ. ಬೋಗಸ್ ವಿಳಾಸ ನೀಡಿ ನೋಂದಣಿಯಾಗಿರುವ ಶಂಕೆ ವ್ಯಕ್ತವಾಗಿದೆ ಎಂದು ಆಪಾದಿಸಿದರು.

ಕೂಡಲೇ ಪರಿಶೀಲನೆ ನಡೆಸುವಂತೆ ಚುನಾವಣಾಧಿಕಾರಿಗಳಿಗೆ ಮನವಿ ಮಾಡಲಾಗಿದೆ. ಇದನ್ನು ಚುನಾವಣಾ ಆಯೋಗ ಗಂಭೀರವಾಗಿ ಪರಿಗಣಿಸಿ ಲೋಪ ಸರಿಪಡಿಸಬೇಕು. ದಕ್ಷಿಣ ಪದವೀಧರ ಕ್ಷೇತ್ರದಲ್ಲಿ ನೋಂದಣಿಯಾಗಿರುವ ಪ್ರತಿಯೊಬ್ಬ ಮತದಾರರ ವಿಳಾಸವನ್ನು ಪರಿಶೀಲಿಸಬೇಕು. ಒಂದು ವೇಳೆ ಪರಿಶೀಲನೆಗೆ ತಡವಾದರೂ ಚುನಾವಣೆಯನ್ನೇ ಮುಂದೂಡಬೇಕು. ಆದರೆ ಬೋಗಸ್ ಮತದಾನಕ್ಕೆ ಅವಕಾಶ ನೀಡಬಾರದು. ಮತದಾರರ ವಿಳಾಸ ಮತ್ತು ಶಿಕ್ಷಣವನ್ನು ಪರಿಶೀಲಿಸದೆ ಇದ್ದರೆ ಹೈಕೋರ್ಟ್ ಮೂಲಕ ಚುನಾವಣೆಗೆ ತಡೆಯಾಜ್ಞೆ ತರುವುದಾಗಿ ಎಚ್ಚರಿಸಿದರು.

ದೇಶದಲ್ಲಿರುವ ಎಲ್ಲಾ ಸ್ವಾಯತ್ತ ಸಂಸ್ಥೆಗಳನ್ನು ಬಿಜೆಪಿ ಸರ್ಕಾರ ದುರುಪಯೋಗಪಡಿಸಿಕೊಂಡಿದೆ. ಚುನಾವಣಾ ಆಯೋಗ ಬಿಜೆಪಿ ಏಜೆನ್ಸಿಯಂತೆ ಕೆಲಸ ಮಾಡುತ್ತಿದೆ. ಬಿಜೆಪಿ ಚುನಾವಣೆ ನೀತಿ ಸಂಹಿತೆ ಉಲ್ಲಂಘಿಸುವಲ್ಲಿ ಹೆಸರುವಾಸಿಯಾಗಿದೆ. ದಕ್ಷಿಣ ಪದವೀಧರ ಕ್ಷೇತ್ರ ವ್ಯಾಪ್ತಿಯ 4 ಜಿಲ್ಲೆಗಳಲ್ಲಿ ಸಂಘ ಪರಿವಾರದ 2 ಸಾವಿರ ಕಾರ್ಯಕರ್ತರು ಚುನಾವಣೆಯ ಕೆಲಸ ಮಾಡುತ್ತಿದ್ದು, ಅವರು ನಕಲಿ ಮತದಾನ ಮಾಡುವ ಸಾಧ್ಯತೆ ಇದೆ. ಆದ್ದರಿಂದ ಮತದಾನದ ಕೇಂದ್ರಗಳಲ್ಲಿ ಮತದಾರರ ಫೋಟೋಗಳನ್ನು ನೋಡಿ ಒಳ ಬಿಡುವಂತೆ ಒತ್ತಾಯಿಸಿದರು.

ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ್ ಮಂಡ್ಯದಲ್ಲಿ ಅಧಿಕಾರಿಗಳ ಸಭೆ ನಡೆಸಿ ಬಿಜೆಪಿಗೆ ಮತ ನೀಡುವಂತೆ ಹೇಳಿದ್ದಾರೆ. ಈ ಬಗ್ಗೆ ಸಚಿವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸುವಂತೆ ಅಲ್ಲಿನ ಜಿಲ್ಲಾಧಿಕಾರಿಗೆ ದೂರು ನೀಡಲಾಗಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಬೆಂಗಳೂರಿನಲ್ಲಿ ನಾಲ್ಕು ಜಿಲ್ಲೆ ವ್ಯಾಪ್ತಿಯ ಡಿಡಿಪಿ, ಡಿಡಿಪಿಯು ಸೇರಿದಂತೆ ಇತರೆ ಅಧಿಕಾರಿಗಳ ಸಮ್ಮುಖದಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳ ಮುಖಂಡರ ಸಭೆ ನಡೆಸಿ ತಮ್ಮ ಅಭ್ಯರ್ಥಿ ಪರ ಪ್ರಚಾರ ನಡೆಸಿದ್ದಾರೆ ಎಂದು ಆರೋಪಿಸಿದರು. ಗೋಷ್ಠಿಯಲ್ಲಿ ಕಾಂಗ್ರೆಸ್ ನಗರ ಘಟಕದ ಅಧ್ಯಕ್ಷ ಎಂ.ಮೂರ್ತಿ, ಗ್ರಾಮಾಂತರ ಘಟಕದ ಅಧ್ಯಕ್ಷ ಡಾ. ಬಿ.ಜೆ.ವಿಜಯ್ ಕುಮಾರ್, ಮುಖಂಡ ಶಿವಣ್ಣ ಇದ್ದರು.

ಸೇವಾ ಹಿರಿತನ ಪರಿಗಣಿಸಿ ಆಯ್ಕೆಗೆ ಆಗ್ರಹಿಸಿ ಕಾರ್ಮಿಕರ ಪ್ರತಿಭಟನೆ




ಮೈಸೂರು,ಮೇ 24(ಪಿಎಂ)– ಉನ್ನತ ಶಿಕ್ಷಣ ಇಲಾಖೆ ವ್ಯಾಪ್ತಿಯ ಪದವಿ ಕಾಲೇಜು ಮತ್ತು ಸ್ನಾತಕೋತ್ತರ ಕೇಂದ್ರಗಳಲ್ಲಿ ಸಿಡಿಸಿ (ಕಾಲೇಜು ಅಭಿವೃದ್ಧಿ ಸಮಿತಿ), ಗುತ್ತಿಗೆ, ಹೊರಗುತ್ತಿಗೆ ಮತ್ತು ಅನ್‌ಸ್ಕಿಲ್ಡ್‌ನಡಿ ಕೆಲಸ ಮಾಡಿರುವ ಕಾರ್ಮಿಕರ ಸೇವಾ ಹಿರಿತನ ಪರಿಗಣಿಸಿ ಮುಂದಿನ ಅವಧಿಗೆ ಆಯ್ಕೆ ಮಾಡಬೇಕೆಂದು ಆಗ್ರಹಿಸಿ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಇಲಾಖೆ ಕಾಲೇಜುಗಳ ಕಾರ್ಮಿಕರ ಸಂಘದ ಜಿಲ್ಲಾ ಸಮಿತಿ ವತಿಯಿಂದ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ವಿನೋಬಾ ರಸ್ತೆಯಲ್ಲಿರುವ ಕಾಲೇಜು ಶಿಕ್ಷಣ ಇಲಾಖೆಯ ಪ್ರಾದೇಶಿಕ ಜಂಟಿ ನಿರ್ದೇಶಕರ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಶಾಸನಬದ್ಧವಾಗಿ ಸಿಗಬೇಕಾದ ಕನಿಷ್ಠ ವೇತನವೂ ಇಲ್ಲದೇ ಕಳೆದ ಹಲವು ವರ್ಷಗಳಿಂದ ದುಡಿಯುತ್ತಿದ್ದೇವೆ. ಇದೀಗ ಟೆಂಡರ್ ಮೂಲಕ ಕಾಲೇಜುಗಳಲ್ಲಿ ನಮ್ಮ ಸೇವಾ ಹಿರಿತನ ಪರಿಗಣಿಸಿ ಹೊರಗುತ್ತಿಗೆ ಆಧಾರದಲ್ಲಿ ನೇಮಕಾತಿ ಮಾಡಿಕೊಳ್ಳಬೇಕಿತ್ತು. ಆದರೆ ಈ ಪ್ರಕ್ರಿಯೆಯಲ್ಲಿ ಈಗಾಗಲೇ ಕೆಲಸ ಮಾಡಿರುವ ಕಾರ್ಮಿಕರಿಗೆ ಆದ್ಯತೆ ನೀಡದೇ ಪ್ರಭಾವಿಗಳ ಶಿಫಾರಸ್ಸಿನಿಂದ ಬಂದವರನ್ನು ಆಯ್ಕೆ ಮಾಡಲಾಗುತ್ತಿದೆ ಎಂದು ದೂರಿದರು.

ಎಷ್ಟೋ ಕಾರ್ಮಿಕರು ವರ್ಷಾನುಗಟ್ಟಲೇ ಸೇವೆ ಸಲ್ಲಿಸಿದ್ದೇವೆ. ಇದ್ದಕ್ಕಿದ್ದಂತೆಯೇ ಎಸ್‌ಎಸ್‌ಎಲ್‌ಸಿ ಪಾಸ್ ಕಡ್ಡಾಯಗೊಳಿಸುವ ಷರತ್ತು ವಿಧಿಸಲಾಗಿದೆ. ಇದರಿಂದ ಅನೇಕ ಕಾರ್ಮಿಕರಿಗೆ ಅನ್ಯಾಯವಾಗಲಿದೆ. ಹಾಗಾಗಿ ಈ ಷರತ್ತು ಕೈಬಿಡಬೇಕು. ಉನ್ನತ ಶಿಕ್ಷಣ ಇಲಾಖೆ ಆಯುಕ್ತರು ಸೂಚಿಸಿರುವಂತೆ ಸೇವಾ ಹಿರಿತನ ಪರಿಗಣಿಸಿ ನೇಮಕಾತಿ ಮಾಡಿಕೊಳ್ಳಬೇಕು ಎಂದು ಒತ್ತಾಯಿಸಿದರು. ಕಾರ್ಮಿಕ ಮುಖಂಡ ಉಗ್ರನರಸಿಂಹೇಗೌಡ, ಎಐ ಯುಟಿಯುಸಿ ರಾಜ್ಯ ನಾಯಕಿ ಎಂ.ಉಮಾ ದೇವಿ, ಸಂಘ ಮೈಸೂರು ವಿಭಾಗೀಯ ಸಮಿತಿ ಅಧ್ಯಕ್ಷೆ ಪಿ.ಎಸ್.ಸಂಧ್ಯಾ, ಪದಾಧಿಕಾರಿಗಳಾದ ಮೀನಾಕ್ಷಿ, ರೇಖಾ, ಸುಜಾತ, ಶ್ಯಾಮಲಾ, ಕಮಲ, ಶೈಲಜಾ, ಬನ್ನಮ್ಮ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ತೂಬಿನಕೆರೆಯ ಸ್ನಾತಕೋತ್ತರ ಕೇಂದ್ರದ ರಸ್ತೆ ಬಂದ್ ತೆರವುಗೊಳಿಸಿ

ಮೈಸೂರು ವಿವಿ ಕುಲಪತಿಗಳಿಗೆ ರೈತರಿಂದ ಮನವಿ ಸಲ್ಲಿಕೆ



ಮೈಸೂರು,ಮೇ 24(ಪಿಎಂ)–ಮಂಡ್ಯ ತಾಲೂಕು ತೂಬಿನಕೆರೆಯ ಮೈಸೂರು ವಿವಿ ಸ್ನಾತಕೋತ್ತರ ಕೇಂದ್ರದ ಹಿಂಭಾಗದ ಜಮೀನುಗಳಿಗೆ ತೆರಳಲು ಅನುಕೂಲವಾಗಿದ್ದ ರಸ್ತೆ ಬಂದ್ ಮಾಡಿರುವುದನ್ನು ತೆರವುಗೊಳಿಸಿ ಅನುಕೂಲ ಕಲ್ಪಿಸುವಂತೆ ವಿವಿಯ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್ ಅವರಿಗೆ ಸದರಿ ಜಮೀನುಗಳ ರೈತರು ಮನವಿ ಸಲ್ಲಿಸಿದ್ದಾರೆ.

ರಸ್ತೆ ಬಂದ್ ಮಾಡಿರುವ ಹಿನ್ನೆಲೆಯಲ್ಲಿ ಕೃಷಿ ಸಲಕರಣೆ ಹೊತ್ತು ಬಲುದೂರ ಸುತ್ತಿ–ಬಳಸಿ ಜಮೀನುಗಳಿಗೆ ತೆರಳುವ ಪರಿಸ್ಥಿತಿ ನಿರ್ಮಾಣವಾಗಿದೆ. ವಿವಿ ಅಧಿಕಾರಿಗಳಿಗೆ ಈ ಬಗ್ಗೆ ಹಲವು ಬಾರಿ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ರೈತರ ಪರಿಸ್ಥಿತಿ ಅರ್ಥ ಮಾಡಿಕೊಂಡು ಇಲ್ಲಿನ ಮಹಿಳಾ ಹಾಸ್ಟೆಲ್‌ನ ಸಮೀಪದ ರಸ್ತೆಯಲ್ಲಿ ಸಂಚಾರಕ್ಕೆ ಅನುವು ಮಾಡಿಕೊಡಬೇಕೆಂದು ಮನವಿಯಲ್ಲಿ ಕೋರಲಾಗಿದೆ.



ಮೈಸೂರು ತಾಲೂಕಿನ ಇಲವಾಲ ಹೋಬಳಿಯ ಗುಂಗ್ರಾಲ್ ಛತ್ರ ಗ್ರಾಮದಲ್ಲಿರುವ ಶಾಸಕ ಜಿ.ಟಿ.ದೇವೇಗೌಡರ ನಿವಾಸಕ್ಕೆ ಮಂಗಳವಾರ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಭೇಟಿ ನೀಡಿ, ಮೊಮ್ಮಗಳ ನಿಧನದಿಂದ ದುಃಖತಪ್ತ ಕುಟುಂಬದ ವರ್ಗಕ್ಕೆ ಸಾಂತ್ವನ ಹೇಳಿದರು. ಈ ಸಂದರ್ಭದಲ್ಲಿ ಜಿಟಿಡಿ ಪುತ್ರ, ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ ಸೇರಿದಂತೆ ಇನ್ನಿತರ ಮುಖಂಡರು ಉಪಸ್ಥಿತರಿದ್ದರು.

ಐಪಿಎಸ್ ಅಧಿಕಾರಿ ಡಾ.ರವೀಂದ್ರನಾಥ್ ರಾಜೀನಾಮೆ ಅಂಗೀಕರಿಸಬೇಡಿ

ಡಿಸಿಆರ್‌ಇ ಡಿಜಿಪಿ ಆಗಿಯೇ ಮುಂದುವರಿಸಿ; ದಲಿತ ವೆಲ್‌ಫೇರ್ ಟ್ರಸ್ಟ್ ಒತ್ತಾಯ

ಮೈಸೂರು,ಮೇ 24(ಪಿಎಂ)– ಹಿರಿಯ ಐಪಿಎಸ್ ಅಧಿಕಾರಿ ಡಾ.ಪಿ. ರವೀಂದ್ರನಾಥ್ ರಾಜೀನಾಮೆ ಅಂಗೀಕರಿಸದೇ ಅವರನ್ನು ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯದ (ಡಿಸಿಆರ್‌ಇ) ಡಿಜಿಪಿ ಆಗಿಯೇ ಮುಂದುವರೆಸಬೇಕೆಂದು ದಲಿತ ವೆಲ್‌ಫೇರ್ ಟ್ರಸ್ಟ್ ಒತ್ತಾಯಿಸಿದೆ.



ಡಾ.ರವೀಂದ್ರನಾಥ್

ಜಿಲ್ಲಾ ಪತ್ರಕರ್ತರ ಭವನದಲ್ಲಿ ಗೋಷ್ಠಿಯಲ್ಲಿ ಮಾತನಾಡಿದ ಟ್ರಸ್ಟ್ ಅಧ್ಯಕ್ಷ ಶಾಂತರಾಜು, ಡಾ.ರವೀಂದ್ರನಾಥ್ ಮೈಸೂರು ನಗರದಲ್ಲೂ ಡಿಸಿಪಿ–1 ಆಗಿ, ಪೊಲೀಸ್ ಆಯುಕ್ತರಾಗಿ ದಕ್ಷ ಮತ್ತು ಪ್ರಾಮಾಣಿಕವಾಗಿ ಕೆಲಸ ಮಾಡಿದ್ದಾರೆ. ಡಿಸಿಆರ್‌ಇ ಡಿಜಿಪಿಆಗಿ ನಕಲಿ ಜಾತಿ ಪ್ರಮಾಣಪತ್ರ ಪ್ರಕರಣದಲ್ಲಿ ಭಾಗಿಯಾದವರ ವಿರುದ್ಧ ಕಾನೂನು ಕ್ರಮ ಕೈಗೊಂಡಿದ್ದ ಕಾರಣಕ್ಕೆ ಅವರನ್ನು ಪೊಲೀಸ್ ತರಬೇತಿ ವಿಭಾಗಕ್ಕೆ ವರ್ಗಾವಣೆ ಮಾಡಲಾಗಿತ್ತು. ಇದರಿಂದ ಬೇಸತ್ತು ರಾಜೀನಾಮೆ ನೀಡಿದ್ದಾರೆ. ಅವರ ರಾಜೀನಾಮೆ ಅಂಗೀಕರಿಸಿದರೆ ಸರ್ಕಾರದ ವಿರುದ್ಧ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.

ರವೀಂದ್ರನಾಥ್ ಪರಿಶಿಷ್ಟ ಜಾತಿ ಮತ್ತು ಪಂಗಡದ ನಕಲಿ ಪ್ರಮಾಣ ಪತ್ರ ಪಡೆದ ಸಂಬಂಧ 1,800 ಪ್ರಕರಣ ದಾಖಲಿಸಿದ್ದರು. ಅದರಲ್ಲಿ ಮುಖ್ಯವಾಗಿ ಶಾಸಕ ಎಂ.ಪಿ.ರೇಣುಕಾಚಾರ್ಯ ಪುತ್ರಿ 'ಬೇಡ ಜಂಗಮ' ಜಾತಿ ಪ್ರಮಾಣ ಪತ್ರ ಪಡೆದಿರುವುದೂ ಸೇರಿದೆ. ಜೊತೆಗೆ ನಿವೃತ್ತ ಐಪಿಎಸ್ ಅಧಿಕಾರಿ ಕೆಂಪಯ್ಯ ಅವರಿಗೂ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ನೀಡಿದ್ದರು. ನಕಲಿ ಜಾತಿ ಪ್ರಮಾಣ ಪತ್ರ ಪಡೆದವರ ವಿರುದ್ಧ ಕಠಿಣ ಕ್ರಮಕ್ಕೆ ಮುಂದಾಗಬೇಕಿದ್ದ ರಾಜ್ಯ ಬಿಜೆಪಿ ಸರ್ಕಾರ, ಪ್ರಾಮಾಣಿಕ ಅಧಿಕಾರಿ ರವೀಂದ್ರನಾಥ್ ಅವರಿಗೆ ವರ್ಗಾವಣೆ ಶಿಕ್ಷೆ ನೀಡಿತು ಎಂದು ಕಿಡಿಕಾರಿದರು.

ಅವರ ರಾಜೀನಾಮೆ ಅಂಗೀಕರಿಸದಂತೆ ಸರ್ಕಾರದ ಮೇಲೆ ಒತ್ತಡ ಹೇರದ ದಲಿತ ಸಮುದಾಯದ ಶಾಸಕರು ಮತ್ತು ಸಂಸದರ ಮನೆ ಎದುರು ಧರಣಿ ಮಾಡುತ್ತೇವೆ. ಇಡೀ ರಾಜ್ಯದಲ್ಲಿ ದಲಿತ ಸಮುದಾಯ ಸಂಘಟಿತವಾಗುತ್ತಿದ್ದು, ಮುಂದಿನ ದಿನಗಳಲ್ಲಿ ಬಿಜೆಪಿಗೆ ತಕ್ಕ ಪಾಠ ಕಲಿಸಲಿದೆ ಎಂದು ಎಚ್ಚರಿಸಿದರು. ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಡಾ.ಅಂಬೇಡ್ಕರ್ ಫೋಟೋ ತೆರವುಗೊಳಿಸಿದ ನ್ಯಾಯಾಧೀಶ ಮಲ್ಲಿಕಾರ್ಜುನಗೌಡ ವಿರುದ್ಧ ಕಠಿಣ ಕ್ರಮ ಜರುಗಿಸಲು ಆಗ್ರಹಿಸಿ ರಾಜ್ಯಾದ್ಯಂತ ಹೋರಾಟ ನಡೆಯಿತು. ಬೆಂಗಳೂರಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿದಾಗ ಸಿಎಂ ಮನವಿ ಸ್ವೀಕರಿಸಿದರು. ಆದರೆ ಈವರೆಗೂ ಮಲ್ಲಿಕಾರ್ಜುನಗೌಡ ವಿರುದ್ಧ ಸರ್ಕಾರ ಕ್ರಮ ಕೈಗೊಳ್ಳಲಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಮುಖಂಡರಾದ ಸುಂದರ್ ಡಿಸೋಜ, ಗಂಗಾಧರ್, ನುಜುಂಡಸ್ವಾಮಿ ಗೋಷ್ಠಿಯಲ್ಲಿದ್ದರು.

ಪಡಿತರ ಅಕ್ರಮ: ನ್ಯಾಯಬೆಲೆ ಅಂಗಡಿ ಅಮಾನತು

ಹೆಚ್.ಡಿ.ಕೋಟೆ, ಮೇ 24– ನಾನಾ ಅಕ್ರಮಗಳ ಹಿನ್ನೆಲೆಯಲ್ಲಿ ಹೆಚ್.ಡಿ.ಕೋಟೆ ತಾಲೂಕು ಹಳ್ಳದಮನುಗನಹಳ್ಳಿಯ ಕೃಷ್ಣೇಗೌಡ ಎಂಬುವರ ನ್ಯಾಯಬೆಲೆ ಅಂಗಡಿಯನ್ನು ವಿಚಾರಣೆ ಕಾಯ್ದಿರಿಸಿ, ಮೈಸೂರು ಜಿಲ್ಲೆ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ ಜಂಟಿ ನಿರ್ದೇಶಕರೂ ಆದ ಸಕ್ಷಮ ಪ್ರಾಧಿಕಾರ ಕುಮುದ ಶರತ್ ಅಮಾನತುಪಡಿಸಿ, ಆದೇಶಿಸಿದ್ದಾರೆ.

ಸದರಿ ನ್ಯಾಯಬೆಲೆ ಅಂಗಡಿಯ ಪಡಿತರ ಚೀಟಿದಾರರ ಹಿತದೃಷ್ಟಿಯಿಂದ ಹತ್ತಿರದ ನ್ಯಾಯಬೆಲೆ ಅಂಗಡಿಯಲ್ಲಿ ತಾತ್ಕಾಲಿಕವಾಗಿ ಪರ್ಯಾಯ ವ್ಯವಸ್ಥೆ ಮಾಡಿ, ವರದಿ ನೀಡುವಂತೆ ಹೆಚ್.ಡಿ.ಕೋಟೆ ತಹಶೀಲ್ದಾರ್‌ಗೆ ಕುಮುದ ಶರತ್ ಆದೇಶ ನೀಡಿದ್ದಾರೆ. ಕೃಷ್ಣೇಗೌಡರು ಪಡಿತರ ವಿತರಣೆಯಲ್ಲಿ ಲೋಪವೆಸಗುತ್ತಿದ್ದಾರೆ. ಅಲ್ಲದೇ ಹೆಚ್ಚುವರಿ ದಾಸ್ತಾನನ್ನು ಮನೆಯಲ್ಲಿ ಶೇಖರಿಸುತ್ತಿದ್ದಾರೆ ಎಂದು ಗಿರೀಶ್ ಎಂಬುವವರು ನೀಡಿದ ದೂರಿನ ಹಿನ್ನೆಲೆಯಲ್ಲಿ ತನಿಖೆ ನಡೆಸಿದ ನಂತರ ಮೇಲ್ನೋಟಕ್ಕೆ ಆರೋಪಗಳಲ್ಲಿ ಸತ್ಯವಿದೆ ಎಂಬ ಕಾರಣಕ್ಕೆ ಆಹಾರ ಇಲಾಖೆ ಜಂಟಿ ನಿರ್ದೇಶಕರು ಈ ಕ್ರಮ ಕೈಗೊಂಡಿದ್ದಾರೆ.

ಸ್ಥಳ ಪರಿಶೀಲನೆ ವೇಳೆ ಬಯೋಮೆಟ್ರಿಕ್ ಪಡೆದ ತಕ್ಷಣ ಪಡಿತರವನ್ನು ಪಡಿತರ ಚೀಟಿದಾರರಿಗೆ ನೀಡದೇ, ಅದನ್ನು ಕಾಳಸಂತೆಯಲ್ಲಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಉದ್ದೇಶದಿಂದ ತನ್ನ ಮನೆಯಲ್ಲಿ ಅಕ್ರಮವಾಗಿ ಶೇಖರಿಸಿರುವುದು, ಪಡಿತರ ಚೀಟಿದಾರರಿಂದ 5 ರಿಂದ 10 ರೂ. ಹಣ ವಸೂಲಿ ಮಾಡಿರುವುದು. ಪಡಿತರ ಚೀಟಿದಾರರಿಗೆ ಸರ್ಕಾರ ನಿಗದಿಪಡಿಸಿದ ಪ್ರಮಾಣವನ್ನು ವಿತರಿಸದೇ ಕಡಿಮೆ ಪ್ರಮಾಣ ನೀಡಿರುವುದು. ಅಲ್ಲದೇ ಅನ್ನಭಾಗ್ಯ ಯೋಜನೆ ರಾಗಿಯನ್ನು ಪಡಿತರ ಚೀಟಿದಾರರಿಗೆ ವಿತರಿಸದೇ ಇಲ್ಲವೇ ಕಡಿಮೆ ವಿತರಿಸಿ, ಉಳಿದ ದಾಸ್ತಾನನ್ನು ಪಕ್ಕದ ಮನೆಯಲ್ಲಿ ಶೇಖರಿಸಿಟ್ಟಿರುವುದು ಹಾಗೂ ಪಡಿತರ ಚೀಟಿದಾರರೊಂದಿಗೆ ಸೌಜನ್ಯದಿಂದ ವರ್ತಿಸದೇ ಇರುವುದು ಸಾಬೀತಾದ ಹಿನ್ನೆಲೆಯಲ್ಲಿ ಕೃಷ್ಣೇಗೌಡರ ನ್ಯಾಯಬೆಲೆ ಅಂಗಡಿಯನ್ನು ಅಮಾನತುಪಡಿಸಿ ಆದೇಶ ಹೊರಡಿಸಲಾಗಿದೆ.

ಕ್ರೈಸ್ಟ್ ದ ಕಿಂಗ್ ಪ್ರೌಢಶಾಲೆಗೆ ಶೇ.98 ಫಲಿತಾಂಶ

ಮೈಸೂರು, ಮೇ 24–ಮೈಸೂರಿನ ಲಕ್ಷ್ಮೀಪುರಂನ ಕ್ರೈಸ್ಟ್‌ದ ಕಿಂಗ್ ಪ್ರೌಢ ಶಾಲೆಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.98.05 ಫಲಿತಾಂಶ ಬಂದಿದೆ.

ಕುಮಾರಿ ಪ್ರೀತಿ ಎನ್. 622 ಅಂಕಗಳನ್ನು ಗಳಿಸಿ ಶಾಲೆಗೆ ಪ್ರಥಮ ಸ್ಥಾನ ಗಳಿಸಿದ್ದಾಳೆ. ಅನನ್ಯ ಎಂ.619, ಮೋನಿಕಾ ಎಂ.ಆರ್. ಮತ್ತು ಲಿಖಿತ ಕುಮಾರ ಸ್ವಾಮಿ 618 ಅಂಕ ಪಡೆದಿದ್ದಾರೆ. 53 ಅತ್ಯುನ್ನತ ಶ್ರೇಣಿ, 88 ಪ್ರಥಮ ಶ್ರೇಣಿ ಹಾಗೂ 10 ವಿದ್ಯಾರ್ಥಿನಿಯರು ದ್ವಿತೀಯ ಶ್ರೇಣಿ ಪಡೆದಿದ್ದಾರೆ. ಪ್ರಥಮ ಭಾಷೆ–4, ದ್ವಿತೀಯ ಭಾಷೆ–5, ತೃತೀಯ ಭಾಷೆ–5, ಗಣಿತ–4, ವಿಜ್ಞಾನ–5, ಸಮಾಜ ವಿಜ್ಞಾನ–15, ವಿದ್ಯಾರ್ಥಿನಿಯರು ಪೂರ್ಣ ಅಂಕಗಳನ್ನು ಪಡೆದಿದ್ದಾರೆ ಎಂದು ಶಾಲಾ ಮುಖ್ಯೋಪಾಧ್ಯಾಯರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದಿನಿಂದ ಮೈಸೂರಲ್ಲಿ ಸಂಚಾರ ಪೊಲೀಸರ ವಿಶೇಷ ಕಾರ್ಯಾಚರಣೆ

ಸಂಚಾರ ನಿಯಮ ಉಲ್ಲಂಘಿಸಿದವರ ವಿರುದ್ಧ ಪ್ರಕರಣ ದಾಖಲು: ಪೊಲೀಸ್ ಆಯುಕ್ತರ ಎಚ್ಚರಿಕೆ





ಮೈಸೂರು, ಮೇ 24(ಆರ್‌ಕೆ)– ಮೈಸೂರು ನಗರದಲ್ಲಿ ನಾಳೆ (ಮೇ 25)ಯಿಂದ ಸಂಚಾರ ನಿಯಮ ಉಲ್ಲಂಘನೆ ವಿರುದ್ಧ ಸಂಚಾರ ಠಾಣೆ ಪೊಲೀಸರು, ವಿಶೇಷ ಕಾರ್ಯಾಚರಣೆ ನಡೆಸಲಿದ್ದಾರೆ. ದಿನದಿಂದ ದಿನಕ್ಕೆ ಸಂಚಾರ ನಿಯಮ ಉಲ್ಲಂಘಿಸಿ ವಾಹನ ಚಾಲನೆ ಮಾಡುವವರ ಸಂಖ್ಯೆ ಹೆಚ್ಚಾಗುತ್ತಿದ್ದು, ಅದರಿಂದ ಅಪಘಾತಗಳು ಸಂಭವಿಸಿ ಸಾವು–ನೋವುಗಳಾಗುತ್ತಿವೆಯಲ್ಲದೇ, ಸುಗಮ ಸಂಚಾರಕ್ಕೂ ಅಡ್ಡಿಯಾಗುತ್ತಿರುವುದನ್ನು ತಪ್ಪಿಸಿ ಸಾರ್ವಜನಿಕರ ಸುರಕ್ಷತೆಗಾಗಿ ಬುಧವಾರದಿಂದ ಮೈಸೂರು ನಗರದಾದ್ಯಂತ ವಿಶೇಷ ತಪಾಸಣೆ ನಡೆಸುವಂತೆ ಸಂಚಾರ ಪೊಲೀಸರಿಗೆ ನಿರ್ದೇಶನ ನೀಡಿರುವುದಾಗಿ ನಗರ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಹೆಲ್ಮೆಟ್, ಸೀಟ್ ಬೆಲ್ಟ್ ಧರಿಸದೇ ವಾಹನ ಚಾಲನೆ ಮಾಡುವುದು, ತ್ರಿಬಲ್ ರೈಡಿಂಗ್, ಡ್ರೈವಿಂಗ್ ಮಾಡುವಾಗ ಮೊಬೈಲ್ ಬಳಕೆ, ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುವುದು, ಸಿಗ್ನಲ್ ಜಂಪ್, ಅಜಾಗರೂಕತೆ, ಅತೀ ವೇಗದ ಚಾಲನೆ, ನೋ ಪಾರ್ಕಿಂಗ್ ಸ್ಥಳದಲ್ಲಿ ವಾಹನ ನಿಲುಗಡೆಯಂತಹ ಕಣ್ಣಿಗೆ ಕಾಣುವ ಉಲ್ಲಂಘನೆ (Visible Violation) ವಿರುದ್ಧ ಪ್ರಕರಣ ದಾಖಲಿಸಿ ದಂಡ ವಿಧಿಸುವ ಜೊತೆಗೆ ವಾಹನಗಳನ್ನು ಜಪ್ತಿ ಮಾಡಲಾಗುತ್ತದೆ ಎಂದು ತಿಳಿಸಿದರು.

ಮೈಸೂರು ಕಾಂಗ್ರೆಸ್ ಕಚೇರಿಯಲ್ಲಿ ದಿ. ರಾಜೀವ್ ಗಾಂಧಿ ಸ್ಮರಣೆ



ಮೈಸೂರು, ಮೇ 24(ಎಂಟಿವೈ)– ದೇಶದ ಅಭಿವೃದ್ಧಿಗೆ ಕಡಿಮೆ ಅವಧಿಯಲ್ಲಿ ಹೆಚ್ಚು ಕೊಡುಗೆ ನೀಡಿದ ಕೀರ್ತಿ ಮಾಜಿ ಪ್ರಧಾನಿ ದಿ.ರಾಜೀವ್‌ಗಾಂಧಿ ಅವರಿಗೆ ಸಲ್ಲುತ್ತದೆ ಎಂದು ಮಾಜಿ ಸಂಸದ, ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಮೈಸೂರು ನಗರ ಹಾಗೂ ಗ್ರಾಮಾಂತರ ಕಾಂಗ್ರೆಸ್ ವತಿಯಿಂದ ಆಯೋಜಿಸಿದ್ದ ಮಾಜಿ ಪ್ರಧಾನಿ ದಿ.ರಾಜೀವ್ ಗಾಂಧಿ ಅವರ 32ನೇ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ರಾಜೀವ್ ಗಾಂಧಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿದ ಬಳಿಕ ಮಾತನಾಡಿದ ಅವರು, ರಾಜೀವ್‌ಗಾಂಧಿ ಅವರು ಆಕಸ್ಮಿಕವಾಗಿ ರಾಜಕಾರಣಕ್ಕೆ ಬಂದರು. ಮಾಜಿ ಪ್ರಧಾನಿ ಇಂದಿರಾ ಗಾಂಧಿಯವರ ಪ್ರಾಣತ್ಯಾಗದ ಬಳಿಕ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ 411 ಲೋಕಸಭಾ ಸ್ಥಾನವನ್ನು ಗೆಲ್ಲಿಸಿ ಇತಿಹಾಸ ಸೃಷ್ಟಿಸಿದ ರಾಜೀವ್ ಗಾಂಧಿ ಅವರನ್ನು ಕಾಂಗ್ರೆಸ್ ಪಕ್ಷ ಒಮ್ಮತದಿಂದ ಪ್ರಧಾನ ಮಂತ್ರಿ ಮಾಡಿತು ಎಂದರು.

ಮೈಸೂರು ಗ್ರಾಮಾಂತರ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್ ಮಾತನಾಡಿದರು. ಕಾರ್ಯಕ್ರಮದಲ್ಲಿ ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಮಾಜಿ ಮೇಯರ್ ಟಿ.ಬಿ.ಚಿಕ್ಕಣ್ಣ, ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಲತಾ ಸಿದ್ಧಶೆಟ್ಟಿ, ಪಾಲಿಕೆ ಸದಸ್ಯ ಲೋಕೇಶ್ ಪಿಯಾ, ಮುಖಂಡರಾದ ಎಂ.ಶಿವಣ್ಣ, ಉತ್ತನಹಳ್ಳಿ ಶಿವಣ್ಣ, ಪ್ರದೀಪ್ ಕುಮಾರ್, ಈಶ್ವರ್‌ಚಕ್ಕಡಿ, ಮೈಸೂರು ಬಸವಣ್ಣ, ಕಾಳಯ್ಯ ಇನ್ನಿತರರು ಇದ್ದರು.

ಗ್ರಾಮೀಣ ಡಾಕ್ ಸೇವಕ್ ಹುದ್ದೆಗೆ ಅರ್ಜಿ ಆಹ್ವಾನ

ಮೈಸೂರು,ಮೇ 24–ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ ವತಿಯಿಂದ ಭಾರತೀಯ ಅಂಚೆ ಇಲಾಖೆಯಲ್ಲಿ ಗ್ರಾಮೀಣ ಡಾಕ್ ಸೇವಕ್ ಹುದ್ದೆಗಳ ಭರ್ತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.



ವಿದ್ಯಾರ್ಹತೆ: ಎಸ್‌ಎಸ್‌ಎಲ್‌ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕು, 18ರಿಂದ 40 ವರ್ಷ ವಯೋಮಿತಿ ಹೊಂದಿದ್ದು, ಎಸ್.ಸಿ ಹಾಗೂ ಎಸ್.ಟಿ ಅವರಿಗೆ 5 ವರ್ಷ, ಓಬಿಸಿ–3, ಅಂಗವಿಕಲ ಅಭ್ಯರ್ಥಿಗಳು ಸಾಮಾನ್ಯ ವರ್ಗ –10 ವರ್ಷಗಳು, ಅಂಗವಿಕಲ ಅಭ್ಯರ್ಥಿಗಳು ಓಬಿಸಿ 13 ವರ್ಷಗಳು, ಅಂಗವಿಕಲ ಅಭ್ಯರ್ಥಿಗಳು ಎಸ್.ಸಿ ಹಾಗೂ ಎಸ್.ಟಿ –15 ವರ್ಷಗಳ ವಯೋಮಿತಿ ಸಡಿಲಿಕೆ ಇರುತ್ತದೆ. ಅರ್ಜಿ ಶುಲ್ಕವು 100 ರೂ.ಗಳಿದ್ದು ಎಸ್.ಸಿ ಹಾಗೂ ಎಸ್.ಟಿ, ಮಹಿಳಾ ಅಭ್ಯರ್ಥಿಗಳು, ಅಂಗವಿಕಲ ಅಭ್ಯರ್ಥಿಗಳಿಗೆ ಅರ್ಜಿ ಶುಲ್ಕದಲ್ಲಿ ವಿನಾಯಿತಿ ನೀಡಲಾಗುವುದು. ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಆನ್‌ಲೈನ್ http://indiapostgdsonline.gov.in ಮೂಲಕ ಜೂನ್ 5ರೊಳಗಾಗಿ ಅರ್ಜಿ ಸಲ್ಲಿಸಬಹುದು. ಮಾಹಿತಿಗಾಗಿ ನಗರದ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಸಹಾಯಕ ನಿರ್ದೇಶಕರನ್ನು ಅಥವಾ ದೂ.ಸಂ: 0821–2489972 ಸಂಪರ್ಕಿಸಬಹುದು.

ಚಾಮುಂಡೇಶ್ವರಿ ದರ್ಶನ ಪಡೆದ ಪರಿಷತ್ ಸಭಾಪತಿ ರಘುನಾಥರಾವ್ ಮಲಕಾಪುರೆ



ಮೈಸೂರು, ಮೇ 24(ಆರ್‌ಕೆ)– ವಿಧಾನಪರಿಷತ್ ಸಭಾಪತಿ ರಘುನಾಥರಾವ್ ಮಲಕಾಪುರೆ ಮಂಗಳವಾರ ಬೆಳಗ್ಗೆ ಮೈಸೂರಿನ ಚಾಮುಂಡಿ ಬೆಟ್ಟಕ್ಕೆ ತೆರಳಿ ತಾಯಿ ಚಾಮುಂಡೇಶ್ವರಿ ದರ್ಶನ ಪಡೆದರು. ಬೆಂಗಳೂರಿಂದ ಬೆಳಗ್ಗೆ 9.45 ಗಂಟೆಗೆ ಮೈಸೂರಿಗೆ ಆಗಮಿಸಿದ ಅವರು, ದೇವಿಯ ದರ್ಶನ ಪಡೆದರು. ಮುಜರಾಯಿ ತಹಸೀಲ್ದಾರ್ ಸಿ.ಜಿ.ಕೃಷ್ಣ, ಪ್ರಧಾನ ಅರ್ಚಕ ಡಾ.ಶಶಿಶೇಖರ ದೀಕ್ಷಿತ್ ಹಾಗೂ ಮಣೆಗಾರ ನಾಗರಾಜ್ ಅವರು ಸಭಾಪತಿಗಳನ್ನು ಆತ್ಮೀಯವಾಗಿ ಬರಮಾಡಿಕೊಂಡು ದೇವರ ದರ್ಶನ ಮಾಡಿಸಿ ಬೀಳ್ಕೊಟ್ಟರು. ಈ ಸಂದರ್ಭ ಕೆ.ಆರ್.ಠಾಣೆ ಪೊಲೀಸರು ಬಂದೋಬಸ್ತ್ ವ್ಯವಸ್ಥೆ ಮಾಡಿದ್ದರು.

ಪಿಹೆಚ್.ಡಿ ಪದವೀಧರರು



ಜಿ.ಪ್ರಕಾಶ

ಮೈಸೂರು, ಮೇ 24– ಡಾ. ಹೆಚ್.ಡಿ. ರೇವಣಸಿದ್ದಪ್ಪ ಅವರ ಮಾರ್ಗದರ್ಶನದಲ್ಲಿ ಜಿ.ಪ್ರಕಾಶ ಅವರು ರಸಾಯನಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.



ಎಸ್.ಮನೋಜ್

ಡಾ.ಎಂ.ಪ್ರಭು ಅವರ ಮಾರ್ಗದರ್ಶನದಲ್ಲಿ ಎಸ್.ಮನೋಜ್ ಅವರು ರೋಲ್ ಆಫ್ ಕಮರ್ಷಿಯಲ್ ಬ್ಯಾಂಕ್ಸ್ ಇನ್ ಫೈನಾನ್ಸಿಯಲ್ ಎಂಪವರ್‌ಮೆಂಟ್ ಆಫ್ ವೀಕರ್ಸ್ ಸೆಕ್ಷನ್ಸ್' ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.



ಕೆ.ಉಮಾ


ಡಾ.ರೇಚಣ್ಣ ಅವರ ಮಾರ್ಗದರ್ಶನದಲ್ಲಿ ಕೆ.ಉಮಾ ಅವರು ಮಾರ್ಕೆಟಿಂಗ್ ಆಫ್ ಆರ್ಗ್ಯಾನಿಕ್ ಪ್ರಾಡಕ್ಟ್ಸ್ ಇನ್ ಕರ್ನಾಟಕ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾ ಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.



ಎಸ್.ಶಿಲ್ಪಾ

ಡಾ. ರೇಚಣ್ಣ ಅವರ ಮಾರ್ಗದರ್ಶನದಲ್ಲಿ ಎಸ್.ಶಿಲ್ಪಾ ಅವರು ಇಂಪ್ಲಿಮೆಂಟೇಷನ್ ಆಫ್ ಐಎನ್‌ಡಿ ಆಸ್ ಇನ್ ಕಮರ್ಷಿಯಲ್ ಅಂಡ್ ಇಂಡಸ್ಟ್ರೀಯಲ್ ಎಂಟರ್‌ಪ್ರೈಸಸ್ ಇನ್ ಇಂಡಿಯಾ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

25.05.2022 ಬುಧವಾರ, ಮಳೆ ನಕ್ಷತ್ರ : ರೋಹಿಣಿ 25.05.2022 ರಿಂದ 07.06.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ
ತಿಥಿ: ದಶಮಿ, ನಕ್ಷತ್ರ : ಉಭಾ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

■ **ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು, ಕನ್ನಡ ವಿಭಾಗ ಮತ್ತು ಐಕ್ಯೂಎಸಿ:** ಸಾಹಿತ್ಯ ಮತ್ತು ಜೀವನ ಮೌಲ್ಯ ಕುರಿತು ಮಹಾರಾಜ ಕಾಲೇಜು ಕನ್ನಡ ಸಹ ಪ್ರಾಧ್ಯಾಪಕ ಡಾ.ಕೆಂಪೇಗೌಡ ಅವರಿಂದ ಉಪನ್ಯಾಸ, ಅಧ್ಯಕ್ಷತೆ: ಮಹಾಜನ ಪ್ರಥಮ ದರ್ಜೆ ಕಾಲೇಜು ಪ್ರಿನ್ಸಿಪಾಲ್ ಡಾ.ಜಯಕುಮಾರಿ, ಉಪಸ್ಥಿತರು: ಕನ್ನಡ ವಿಭಾಗದ ಮುಖ್ಯಸ್ಥ ಡಾ.ತಿಮ್ಮೇಗೌಡ, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಮೈಸೂರು ಜಿಲ್ಲಾ ಪ್ರಾಕೃತಿಕ ಚಿಕಿತ್ಸಾ ಪರಿಷತ್, ಮಂಡ್ಯ ಜಿಲ್ಲಾ ವಿದ್ಯಾರ್ಥಿ ಬಳಗ ಟ್ರಸ್ಟ್:** ಉಚಿತ ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ಮಂಡ್ಯ ಜಿಲ್ಲಾ ವಿದ್ಯಾರ್ಥಿ ಬಳಗ ಟ್ರಸ್ಟ್, ಮಾರುತಿ ಟೆಂಪಲ್ ರಸ್ತೆ, ಸರಸ್ವತಿಪುರಂ, ಬೆಳಗ್ಗೆ 10.30 ರಿಂದ.

■ **ಅವಧೂತ ದತ್ತಪೀಠ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 80ನೇ ಜನ್ಮ ದಿನೋತ್ಸವ, ಬೆಳಗ್ಗೆ 8ಕ್ಕೆ ಹನುಮಜಯಂತಿ : ಕಾರ್ಯಸಿದ್ಧಿ ಆಂಜನೇಯ ದೇವಾಲಯದಲ್ಲಿ ವಿಶೇಷ ಅರ್ಚನೆ, ಹನುಮಾನ್ ಹೋಮ, ಶ್ರೀಚಕ್ರಪೂಜೆ, ಬೆಳಗ್ಗೆ 10ಕ್ಕೆ ಚೈತನ್ಯಾರ್ಚನೆ : ವಿವಿಧ ಕ್ಷೇತ್ರಗಳ ಗಣ್ಯರಿಗೆ ಸನ್ಮಾನ, ನಾದನಿಧಿ : ವಿದ್ವಾನ್ ತಿರುವಾರೂರ್ ಭಕ್ತವತ್ಸಲಂ (ಮೃದಂಗ), ಪ್ರವಚನ ನಿಧಿ : ಶ್ರೀ ಆಕೆಳ್ಳ ವಿಭೀಷಣ ಶರ್ಮ, ತಿರುಪತಿ (ಪ್ರವಚನ), ಆಸ್ಥಾನ ವಿದ್ವಾನ್ : ಟ್ರಿಚಿ ಶ್ರೀ ಕೆ. ರಮೇಶ್ (ಕರ್ನಾಟಕ ಸಂಗೀತ), ಆಸ್ಥಾನ ವಿದ್ವಾನ್ : ಡಾ. ಎಂ. ಸೂರ್ಯಪ್ರಸಾದ್ (ಸಂಗೀತ), ಆಸ್ಥಾನ ವಿದುಷಿ: ಕೆ. ಶೇಷಲತಾ ಕೊಸುರಿ (ಕರ್ನಾಟಕ ಸಂಗೀತ), ಆಸ್ಥಾನ ವಿದ್ವಾನ್ : ಹೆಚ್.ವಿ. ನಾಗರಾಜರಾವ್ (ಬರಹಗಾರರು), ಪ್ರಾಣಿಬಂಧು : ಡಾ. ವಸೀಂ ಮಿರ್ಜಾ, ಸಂಜೆ 6.30ಕ್ಕೆ ಹಿಂದೂಸ್ಥಾನಿ ಸಂಗೀತ : ವಿದುಷಿ ಕೌಶಿಕೀ ಚಕ್ರವರ್ತಿ ಅವರಿಂದ. ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ಊಟಿ ರಸ್ತೆ.

■ **ಮೈಸೂರು ಉತ್ಸವ :** ವಸ್ತುಪ್ರದರ್ಶನ, ಸ್ಥಳ: ಜೆಎಸ್‌ಎಸ್ ಮೈದಾನ, ದೊಡ್ಡಕೆರೆ ಮೈದಾನದ ಪಕ್ಕ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಅಮೃತ ಸ್ವಾತಂತ್ರ್ಯ ಮಾಲಿಕೆಯಲ್ಲಿ ವಸಾಹತು ಕಾಲದ ಕಾನೂನುಗಳು–ಬಾನುಲಿ ಸರಣಿ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ, 9.00 ಸ್ವಾತಂತ್ರ್ಯ ಅಮೃತ ಮಹೋತ್ಸವದ ವಿಶೇಷ ಕಾರ್ಯಕ್ರಮ, 9.30 ಆಕಾಶವಾಣಿಯೊಂದಿಗೆ ಸ್ವಾತಂತ್ರ್ಯ ಚಳವಳಿಯ ಪಯಣ–ಬಾನುಲಿ ಸರಣಿ, 10.00 ಹಿಂದೂಸ್ಥಾನಿ ಸಂಗೀತ–ಬೇಗಂ ಪರ್ವೀನ್ ಸುಲ್ತಾನ ಮತ್ತು ಉಸ್ತಾದ್ ಮೊಹಮ್ಮದ್ ದಿಲ್ಷದ್ ಖಾನ್–ಯುಗಳ ಗಾಯನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.05 ವನಿತಾ ವಿಹಾರ, 12.30 ದೇವರನಾಮ–ಶೇಷಗಿರಿ ದಾಸರು, ಮಾಲತಿ ಶರ್ಮಾ, 12.45ಲಾಕ್‌ಡೌನ್ ಕಥಾನಾಟಕ, ಲಾಕ್‌ಡೌನ್ ಕಥೆಗಳನ್ನಾಧರಿಸಿದ ಸರಣಿ "ಸ್ವಾಭಿಮಾನಿ ಅಜ್ಜಿ". ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ, 1.20 ಭಾವಗೀತೆ, 3.00 ಲಯ ಸಂಭ್ರಮ–ತಾಳ, ಲಯ ರಸಾಸ್ವಾದ. ಪರಿಕಲ್ಪನೆ ಮತ್ತು ಪ್ರಸ್ತುತಿ–ಎಚ್.ಎಲ್.ಶಿವಶಂಕರಸ್ವಾಮಿ, ನಿರ್ಮಾಣ–ಎಸ್.ಸುಬ್ರಹ್ಮಣ್ಯ, 4.00 ಮಹಿಳಾರಂಗ–ಸ್ತ್ರೀ ಚೇತನ–ನೇರ ಫೋನ್–ಇನ್ ಕಾರ್ಯಕ್ರಮದಲ್ಲಿ ಭಾಗವಹಿಸುವವರು ಹೆಚ್.ಟಿ. ಕಮಲಾ, 4.30 ಚಟ್‌ಪಟ್ ಚುರುಮುರಿ, ಪ್ರಸ್ತುತಿ–ಪಿ.ಸಿ.ಮಳಿಮಠ್ ಮತ್ತು ಕೆ.ಬಿ.ಮೀನಾ, 5.45 ಹಾಡು ಹೇಳಿದ ಕಥೆ, ಪ್ರಸ್ತುತಿ– ಡಾ.ಮೈಸೂರು ಉಮೇಶ್, 6.50 ಕೃಷಿರಂಗ–ಕಿಸಾನ್‌ವಾಣಿ, ಕೃಷಿ ವಿಜ್ಞಾನ ಅಧ್ಯಯನಕ್ಕೆ ಅವಕಾಶಗಳು ಕುರಿತು ಡಾ.ಎಂ.ಪಿ.ರಾಜಣ್ಣ ಅವರೊಡನೆ ಸಂದರ್ಶನ, 9.05ಕ್ಷಿತಿಜ Literacy ಗುರು–ಸಾಹಿತ್ಯ ದಿಗ್ಗಜರೊಂದಿಗೆ ಸಂವಾದ, 10.30ಹಳ್ಳಿ ಹಾಡು, ಪ್ರಸ್ತುತಿ– ಅಬ್ದುಲ್ ರಶೀದ್

ಪರಿಷ್ಕೃತ ಪಠ್ಯದಲ್ಲಿ ನನ್ನ ಕಥನ ಸೇರಿಸಿರದಿದ್ದರೆ ಸಂತೋಷ; ಸೇರಿದ್ದರೆ ನನ್ನ ಒಪ್ಪಿಗೆ ಇಲ್ಲ

● ಸಾಹಿತಿ ದೇವನೂರ ಮಹಾದೇವ ಸ್ಪಷ್ಟನೆ ● ನಾಡಿನ ಆರೋಗ್ಯವಂತ ಮನಸ್ಸುಗಳ ಜೊತೆ ನಾನಿರಲು ಬಯಸುತ್ತೇನೆ

ಮೈಸೂರು, ಮೇ 24– ಹಾಲಿ ನಡೆಯುತ್ತಿರುವ ಪಠ್ಯ ಪುಸ್ತಕ ಪರಿಷ್ಕರಣೆ ಪ್ರಕ್ರಿಯೆ ಸಂಬಂಧ ನಾಡಿನ ಹೆಸರಾಂತ ಸಾಹಿತಿ ದೇವನೂರ ಮಹಾದೇವ ಅವರು ಪ್ರತಿಕ್ರಿಯೆ ನೀಡಿದ್ದು, ಪಠ್ಯ ಪುಸ್ತಕದಲ್ಲಿ ನನ್ನ ಕಥನದ ಭಾಗ ಸೇರಿಸಿರದಿದ್ದರೆ ಸಂತೋಷ. ಒಂದು ವೇಳೆ ಸೇರಿದ್ದರೆ ಅದಕ್ಕೆ ನನ್ನ ಒಪ್ಪಿಗೆ ಇಲ್ಲ ಎಂದಿದ್ದಾರೆ.



ಈ ಬಗ್ಗೆ ಪತ್ರಿಕೆಗಳಿಗೆ ಪ್ರಕಟಣೆ ನೀಡಿರುವ ಅವರು, ಪಠ್ಯ ಪರಿಷ್ಕರಣೆಯ ವಾದ ವಿವಾದಗಳು ನಡೆಯುತ್ತಿದೆ. ಹತ್ತನೇ ತರಗತಿ ಕನ್ನಡ ಪಠ್ಯಪುಸ್ತಕದಲ್ಲಿ ನನ್ನದೂ ಒಂದು ಕಥನ ಸೇರಿದೆ ಎನ್ನಲಾಗುತ್ತಿದೆ. ಪಠ್ಯದಲ್ಲಿ ಕೆಲವು ಸಲ ಸೇರಿದ್ದನ್ನು ಕೈ ಬಿಡುವುದು, ಮತ್ತೆ ಸೇರಿಸುವುದು ಇತ್ಯಾದಿ ಗಳಿಗೆ ಗಳಿಗೆಗೂ ಬದಲಾಗುತ್ತಿದೆ. ಈ ನಡುವೆ ನನ್ನ ಕಥನದ ಭಾಗ ಪಠ್ಯದಲ್ಲಿ ಸೇರಿಸಿರದಿದ್ದರೆ ನನಗೆ ಹೆಚ್ಚು ಸಂತೋಷವಾಗುತ್ತದೆ. ಸೇರಿದ್ದರೆ ಅದಕ್ಕೆ ನನ್ನ ಒಪ್ಪಿಗೆ ಇಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಅಲ್ಲದೆ, ಈ ಹಿಂದೆ ಹಳೇ ಪಠ್ಯಕ್ಕೆ ನೀಡಿದ್ದ ಅನುಮತಿಯನ್ನು ಹಿಂತೆಗೆದುಕೊಂಡಿದ್ದೇನೆ ಎಂದು ಹೇಳಿದ್ದಾರೆ.

ಅದಕ್ಕೆ ಕಾರಣವನ್ನೂ ನೀಡಿರುವ ಅವರು, ಈ ಹಿಂದೆ ಪಠ್ಯಗಳಲ್ಲಿದ್ದ ಎಲ್.ಬಸವರಾಜು, ಎ.ಎನ್. ಮೂರ್ತಿರಾವ್, ಪಿ. ಲಂಕೇಶ್, ಸಾರಾ ಅಬೂಬಕರ್ ಮುಂತಾದವರ ಕತೆ, ಲೇಖನಗಳನ್ನು ಕೈ ಬಿಡಲಾಗಿದೆ ಎಂದರೆ, ಯಾರು ಕೈ ಬಿಟ್ಟಿದ್ದಾರೋ ಅವರಿಗೆ ಕನ್ನಡ ನಾಡು–ನುಡಿ–ಸಂಸ್ಕೃತಿ ಬಗ್ಗೆ ಏನೇನೂ ತಿಳಿದಿಲ್ಲ ಎಂತಲೇ ಅರ್ಥ ಎಂದಿದ್ದಾರೆ.

ಪಠ್ಯಪುಸ್ತಕ ಸಮಿತಿಯ ಅಧ್ಯಕ್ಷ ರೋಹಿತ್ ಚಕ್ರತೀರ್ಥ ಅವರು ತನಗೆ ಲೇಖಕರ ಜಾತಿ ತಿಳಿದಿಲ್ಲ ಎನ್ನುತ್ತಾರೆ! ಭಾರತದಂತಹ ಸಂಕೀರ್ಣ ದೇಶದಲ್ಲಿ ಪ್ರಜ್ಞಾಪೂರ್ವಕವಾಗಿ ಜಾತಿಯನ್ನು ಗುರುತಿಸದಿದ್ದರೆ ಅಲ್ಲಿ ಸಹಜವಾಗಿ ಶೇ.90ರಷ್ಟು ಅವರ ಜಾತಿಯವರೇ ತುಂಬಿಕೊಳ್ಳುತ್ತಾರೆ. ಅವರವರ ಅಡಿಗೆ ಮನೆ ವಾಸನೆ ಪ್ರಿಯವಾಗುವಂತೆ! ಹೀಗಾಗಿ, ಭಾರತದ ಬಹುತ್ವ, ಪಾರ್ಟಿಸಿಪೇಟರಿ ಪ್ರಜಾಪ್ರಭುತ ಕಣ್ಮರೆಯಾಗುತ್ತಿದೆ. ಇದು ಈಗಿನದ್ದಲ್ಲ. ಡಾ. ಮುರಳಿ ಮನೋಹರ ಜೋಷಿಯವರು ಕೇಂದ್ರ ಶಿಕ್ಷಣ ಸಚಿವರಾಗಿದ್ದ ಕಾಲದಿಂದಲೂ ನಡೆದುಕೊಂಡು ಬಂದಿದೆ. ಚಾತುರ್ವರ್ಣ ಹಿಂದೂ ಪ್ರಭೇದದ ಆರೆಸ್ಸೆಸ್ ಸಂತಾನವಾದ ಬಿಜೆಪಿ ಆಳ್ವಿಕೆಯಲ್ಲಿ ಮೊದಲು ಕೈಹಾಕುವುದೇ ಶಿಕ್ಷಣ ಮತ್ತು ಇತಿಹಾಸಗಳ ಕುತ್ತಿಗೆಗೆ. ಇಲ್ಲೂ ಇದೇ ಆಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಈ ಪಠ್ಯಗಳೆಲ್ಲಾ ಪ್ರಕಟವಾದ ಮೇಲೆ ಅವುಗಳನ್ನು ಪರಿಶೀಲಿಸಿ, ಅಲ್ಲಿನ ತಪ್ಪು ಮತ್ತು ಕೊರತೆಗಳನ್ನು ತುಂಬಲು, ನಮ್ಮ ಶಾಲಾ ಮಕ್ಕಳಿಗೆ ಪರ್ಯಾಯ ಪಾಠಗಳನ್ನು ಪೂರಕ ವಿಷಯಗಳನ್ನು ಮುಖ್ಯವಾಗಿ ಸಂವಿಧಾನವನ್ನು ಬಿತ್ತರಿಸುವ ವಾಟ್ಸ್‌ಅಪ್, ಇಮೇಲ್ ಆನ್‌ಲೈನ್ ಕ್ಲಾಸ್ ಇತ್ಯಾದಿಗಳನ್ನು ರೂಪಿಸಲು ಆಲೋಚಿಸುತ್ತಿರುವ ನಾಡಿನ ಆರೋಗ್ಯವಂತ ಮನಸ್ಸುಗಳ ಜೊತೆ ನಾನಿರಲು ಬಯಸುತ್ತೇನೆ ಎಂದು ದೇವನೂರ ಮಹಾದೇವ ತಿಳಿಸಿದ್ದಾರೆ.

ಕಲಿಕೆಗೆ ಸಹಕಾರಿಯಾದ ತಂತ್ರಜ್ಞಾನ

ಶಾಂತಲಾ ವಿದ್ಯಾಪೀಠದಲ್ಲಿ 'ರೋಬೋಟಿಕ್ಸ್ ಅಂಡ್ ಕೋಡಿಂಗ್ ಲ್ಯಾಬ್' ಅಳವಡಿಕೆ

● ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಚಾಲನೆ
● ವಿದ್ಯಾರ್ಥಿಗಳ ಬೌದ್ಧಿಕ ಸಾಮರ್ಥ್ಯ ಅರಿತು ಬೋಧನೆಗೆ ಸಹಕಾರಿ

ಮೈಸೂರು, ಮೇ 24(ಎಸ್‌ಬಿಡಿ)– ಎಲ್ಲಾ ಕ್ಷೇತ್ರಗಳಲ್ಲೂ ಅತ್ಯಾಧುನಿಕ ತಂತ್ರಜ್ಞಾನ ಬಳಕೆಯೊಂದಿಗೆ ಸುಧಾರಣೆ ಕಾಣುತ್ತಿರುವ ಈ ಸಂದರ್ಭದಲ್ಲಿ ಶಿಕ್ಷಣದಲ್ಲೂ ಸಾಕಷ್ಟು ಬದಲಾವಣೆಯಾಗುತಿದ್ದು, ಮೈಸೂರಿನ ಖಾಸಗಿ ಶಾಲೆಯೊಂದರಲ್ಲಿ ಮಕ್ಕಳ ವಿಸ್ತಾರ ಕಲಿಕೆಗೆ ಪೂರಕವಾದ 'ರೋಬೋಟಿಕ್ಸ್ ಅಂಡ್ ಕೋಡಿಂಗ್ ಲ್ಯಾಬ್' ಅಳವಡಿಸಿಕೊಳ್ಳಲಾಗಿದೆ.

ಮೈಸೂರಿನ ಸಿದ್ಧಾರ್ಥನಗರ ಶೀಲ ಮಾರ್ಗದಲ್ಲಿರುವ ಶಾಂತಲಾ ವಿದ್ಯಾಪೀಠ ಸಂಸ್ಥೆಯಲ್ಲಿ ನಿರ್ಮಿಸಿರುವ ಬಿದ್ಯುತ್(bidyut) 'ರೋಬೋಟಿಕ್ಸ್ ಅಂಡ್ ಕೋಡಿಂಗ್ ಲ್ಯಾಬ್' ಅನ್ನು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಮಂಗಳವಾರ ಉದ್ಘಾಟಿಸಿ, ಶಿಕ್ಷಕರು ಹಾಗೂ ಮಕ್ಕಳೊಂದಿಗೆ ಕೆಲ ಕಾಲ ಸಮಾಲೋಚನೆ ನಡೆಸುವ ಮೂಲಕ ವಿಶೇಷ ಲ್ಯಾಬ್ ಕಾರ್ಯ ನಿರ್ವಹಣೆ ಹಾಗೂ ಪ್ರಯೋಜನದ ಬಗ್ಗೆ ವಿವರಣೆ ಪಡೆದರು. ಈ ವ್ಯವಸ್ಥೆಯನ್ನು ಅಳವಡಿಸಿಕೊಂಡಿರುವ ದೇಶದ ಮೊದಲ ಶಾಲೆ ಎಂದು ಶಾಲಾ ಆಡಳಿತ ಮಂಡಳಿಯವರು ತಿಳಿಸಿದ್ದಾರೆ.

ಐಸಿಎಸ್‌ಇ ಪಠ್ಯಕ್ರಮ ಒಳಗೊಂಡ ಶಾಂತಲಾ ವಿದ್ಯಾಪೀಠದಲ್ಲಿ ಎಲ್‌ಕೆಜಿಯಿಂದ ಹತ್ತನೇ ತರಗತಿ ವರೆಗೆ 500ಕ್ಕೂ ಹೆಚ್ಚು ವಿದ್ಯಾರ್ಥಿಗಳಿದ್ದು, ಕಲಿಕೆ ಬಗ್ಗೆ ಆಸಕ್ತಿ ಹೆಚ್ಚಿಸಿ ಪರಿಣಾಮಕಾರಿಯಾಗಿ ವಿಷಯ ಅರ್ಥೈಸುವ ಉದ್ದೇಶದಿಂದ 'ರೋಬೋಟೊಕ್ಸ್ ಅಂಡ್ ಕೋಡಿಂಗ್ ಲ್ಯಾಬ್' ಆರಂಭಿಸಲಾಗಿದೆ. ಅತ್ಯಾಕರ್ಷಕವಾದ ಮೂರು ಪುಟ್ಟ ರೋಬೋಟ್‌ಗಳಿಗೆ ತರಗತಿಗೆ ಅನುಗುಣವಾಗಿ ಪ್ರೋಗ್ರಾಮ್‌ಗಳನ್ನು ಅಳವಡಿಸಲಾಗಿದೆ. ಎಲ್‌ಕೆಜಿಯಿಂದ ಎರಡನೇ ತರಗತಿ ವಿದ್ಯಾರ್ಥಿಗಳಿಗೆ ಹಾಡು, ಕತೆ, ಮನರಂಜನೆಯ ಮೂಲಕ ಅಕ್ಷರಾಭ್ಯಾಸ, ಪ್ರಾಯೋಗಿಕ ಕಲಿಕೆ, ಪ್ರಾಥಮಿಕ ಹಂತದ ವಿದ್ಯಾರ್ಥಿಗಳಿಗೆ ಪಠ್ಯೇತರ ಚಟುವಟಿಕೆ, ಪ್ರೌಢಶಾಲೆ



ಮೈಸೂರಿನ ಸಿದ್ಧಾರ್ಥನಗರದ ಶಾಂತಲಾ ವಿದ್ಯಾಪೀಠ ಸಂಸ್ಥೆಯಲ್ಲಿ 'ರೋಬೋಟಿಕ್ಸ್ ಅಂಡ್ ಕೋಡಿಂಗ್ ಲ್ಯಾಬ್' ಅನ್ನು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಮಂಗಳವಾರ ಉದ್ಘಾಟಿಸಿದ ಬಳಿಕ ರೋಬೋಟ್ ಹಿಡಿದು ಪರಿಶೀಲಿಸಿದರು. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಸಂಸದ ಪ್ರತಾಪ್ ಸಿಂಹ ಮತ್ತಿತರರಿದ್ದರು.

ವಿದ್ಯಾರ್ಥಿಗಳ ಭೌತಿಕ ಮಟ್ಟಕ್ಕೆ ತಕ್ಕಂತೆ ಬೋಧನೆ ಜತೆಗೆ ನಾನಾ ಬಗೆಯ ಪ್ರಾಯೋಗಿಕ ಚಟುವಟಿಕೆಗಳ ಬಗ್ಗೆ ಚಿತ್ರ ಸಹಿತ ವಿವರಿಸಿ, ವಿದ್ಯಾರ್ಥಿಗಳನ್ನು ಪ್ರೇರೇಪಿಸುತ್ತದೆ. ಪ್ರಾತ್ಯಕ್ಷಿಕೆ ತಯಾರಿಸಲು ಬೇಕಾದ ಕಚ್ಚಾ ಸಾಮಗ್ರಿಗಳನ್ನು ಲ್ಯಾಬ್‌ನಲ್ಲಿ ಒದಗಿಸಲಾಗಿದೆ.

ರೋಬೋಟ್ ಮುಖದಲ್ಲಿ ಅಳವಡಿಸಿರುವ 8X6 ಸೆಂ.ಮೀ. ಅಳತೆಯ ಟಚ್ ಸ್ಕ್ರೀನ್ ಮಾನಿಟರ್‌ನಲ್ಲಿ ಮುಖಭಾವ ತೋರಿಸುವುದರೊಂದಿಗೆ ಮಾತು, ಹಾಡಿಗೆ ತಕ್ಕಂತೆ ಕೈಗಳ ಚಲನೆ ಮಾಡುವುದರಿಂದ ಮಕ್ಕಳಿಗೆ ಆಕರ್ಷಣೆಯಾಗಿದೆ. ವಿದ್ಯಾರ್ಥಿಗಳ ಪ್ರಶ್ನೆಗಳಿಗೂ ಉತ್ತರ ನೀಡುವುದರ ಜೊತೆಗೆ ಕೌಶಲ, ಕಲಿಕಾಮಟ್ಟ ವೃದ್ಧಿಗೆ ನೆರವಾಗಿದೆ. ಒಂದೊಂದು ತರಗತಿಗೆ 45 ನಿಮಿಷಗಳನ್ನು ಲ್ಯಾಬ್‌ನಲ್ಲಿ ಕಲಿಕೆಗೆ ಮೀಸಲಿಡಲಾಗಿದೆ. ಈ ವೇಳೆ ಶಿಕ್ಷಕರೊಬ್ಬರು ನಿಗಾ ವಹಿಸಲಿದ್ದಾರೆ. ಹೊಸ ಶಿಕ್ಷಣ ನೀತಿಯ 'ಸ್ಟೀಮ್ (STEAM) ಎಜುಕೇಷನ್'ಗೆ ಪೂರಕವಾಗಿದೆ ಎಂದು ಸಚಿವರು ಇತರೆ ಗಣ್ಯರಿಗೆ ವಿವರಿಸಿದರು.

ಶಿಕ್ಷಣಕ್ಕೆ ಬಿಜೆಪಿ ಆದ್ಯತೆ: ವೇದಿಕೆ ಸಮಾರಂಭದಲ್ಲಿ ಸಚಿವ ಬಿ.ಸಿ.ನಾಗೇಶ್ ಮಾತನಾಡಿ, ಬಿಜೆಪಿ ಅಧಿಕಾರಕ್ಕೆ ಬಂದಾಗಲೆಲ್ಲಾ ಶಿಕ್ಷಣ ಕ್ಷೇತ್ರಕ್ಕೆ ಆದ್ಯತೆ ನೀಡಲಾಗಿದೆ. ಅಟಲ್ ಬಿಹಾರಿ ವಾಜಪೇಯಿ ಅವರು ಪ್ರಧಾನಮಂತ್ರಿಯಾಗಿದ್ದಾಗ ಶಿಥಿಲಾವಸ್ಥೆ ಹಂತ ತಲುಪಿದ್ದ ಸರ್ಕಾರಿ ಶಾಲೆಗಳನ್ನು ಸರ್ವ ಶಿಕ್ಷಣ ಅಭಿಯಾನದ ಮೂಲಕ ಅಭಿವೃದ್ಧಿಪಡಿಸಿದರು. ಶಿಕ್ಷಣ ಕ್ಷೇತ್ರದಲ್ಲಿನ ಪುಟ್ಟ ಪ್ರಯತ್ನಗಳಿಂದಾಗಿ ಭಾರತ ವಿಶ್ವದ ಭೂಪಟದಲ್ಲಿ ಗುರುತಿಸಿಕೊಂಡಿದೆ. ಪ್ರಧಾನಿ ಮೋದಿ ಅವರ ನೇತೃತ್ವದಲ್ಲಿ ವಿದ್ಯಾರ್ಥಿ ಕೇಂದ್ರ ಶಿಕ್ಷಣಕ್ಕೆ ಪ್ರಾಮುಖ್ಯತೆ ನೀಡಲಾಗಿದೆ. ಪ್ರಯೋಗ–ಪ್ರಾತ್ಯಕ್ಷಿಕೆಗಳ ಮೂಲಕ ವಿದ್ಯಾರ್ಥಿಗಳು ಪ್ರಶ್ನೆಗಳಿಗೆ ಉತ್ತರವನ್ನು ತಾವೇ ಕಂಡುಕೊಳ್ಳಲು ಪ್ರೇರಣೆ ನೀಡಲಾಗುತ್ತಿದೆ. ಈ ನಿಟ್ಟಿನಲ್ಲಿ ಶಾರದಾ ವಿದ್ಯಾಪೀಠದಲ್ಲಿ 'ರೋಬೋಟಿಕ್ಸ್ ಅಂಡ್ ಕೋಡಿಂಗ್ ಲ್ಯಾಬ್' ನಿರ್ಮಿಸಿರುವುದು ಶ್ಲಾಘನಾರ್ಹ ಹಾಗೂ ಸಂತೋಷದ ಸಂಗತಿ ಎಂದರು.

ಪ್ರಜಾಪ್ರಭುತ್ವದಲ್ಲಿ ಪ್ರಜೆಗಳೇ ಪ್ರಭುಗಳು, ನಿಮ್ಮ ಸಮಸ್ಯೆಗಳ ಬಗ್ಗೆ ಸರ್ಕಾರದ ಮುಂದೆ ಪ್ರಶ್ನಿಸಿ, ಪರಿಹರಿಸಲು ಸಮರ್ಥರಿರುವವರನ್ನು ಆಯ್ಕೆ ಮಾಡಬೇಕು. ದಕ್ಷಿಣ ಪದವೀಧರ ಕ್ಷೇತ್ರ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಪಕ್ಷದ ನಿಷ್ಠಾವಂತ ಸಾಮಾನ್ಯ ಕಾರ್ಯಕರ್ತ ಮೈ.ವಿ.ರವಿಶಂಕರ್‌ಗೆ ಆಶೀರ್ವದಿಸಬೇಕೆಂದು ಇದೇ ವೇಳೆ ಮನವಿ ಮಾಡಿಕೊಂಡರು.

ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಸಂಸದ ಪ್ರತಾಪ್ ಸಿಂಹ, ಶಾಸಕ ಎಸ್.ಎ.ರಾಮದಾಸ್, ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, ಬಿಜೆಪಿ ಮುಖಂಡ ರಘು ಆರ್.ಕೌಟಿಲ್ಯ, ನಗರ ಪಾಲಿಕೆ ಸದಸ್ಯೆ ರೂಪಾ, ನಾಮನಿರ್ದೇಶಿತ ಸದಸ್ಯ ರಮೇಶ್, ಖಾಸಗಿ ಶಿಕ್ಷಣ ಸಂಸ್ಥೆಗಳ ಸಂಘದ ಪ್ರಧಾನ ಕಾರ್ಯದರ್ಶಿ ಶಶಿಕುಮಾರ್, ಶಾರದಾ ವಿದ್ಯಾಪೀಠ ಸಂಸ್ಥೆ ಅಧ್ಯಕ್ಷೆ ಶಾರದಾ, ಕಾರ್ಯದರ್ಶಿ ಎಂ.ಎಸ್.ಸಂತೋಷ್‌ಕುಮಾರ್, ಬಿದ್ಯುತ್ ಸಂಸ್ಥೆಯ ರಾಹುಲ್ ಮತ್ತಿತರರು ಉಪಸ್ಥಿತರಿದ್ದರು.

ಫ್ಲೆಕ್ಸ್ ತೆರವು ವಿಚಾರಕ್ಕೆ ಆಲತ್ತೂರಲ್ಲಿ ಮತ್ತೆ ಗುಂಪು ಘರ್ಷಣೆ

ಗುಂಡ್ಲುಪೇಟೆ,ಮೇ24(ಸೋಮ್.ಜಿ)–ಫ್ಲೆಕ್ಸ್ ತೆರವು ವಿಚಾರಕ್ಕೆ ಎರಡು ಗುಂಪುಗಳ ನಡುವೆ ಘರ್ಷಣೆ ಸಂಭವಿಸಿ ತಾಲೂಕಿನ ಆಲತ್ತೂರು ಗ್ರಾಮದಲ್ಲಿ ಉದ್ರಿಕ್ತ ಪರಿಸ್ಥಿತಿ ಉಂಟಾಗಿದೆ.

ಗ್ರಾಮದಲ್ಲಿ ಮೂರು ದಿನದ ಹಿಂದೆ ಬಸವ ಜಯಂತಿಯನ್ನು ಅದ್ಧೂರಿಯಾಗಿ ಆಚರಿಸಲಾಗಿತ್ತು. ಕಾರ್ಯಕ್ರಮ ಹಿನ್ನೆಲೆಯಲ್ಲಿ ಗ್ರಾಮದಲ್ಲಿ ಫ್ಲೆಕ್ಸ್‌ಗಳನ್ನು ಅಳವಡಿಸಲಾಗಿತ್ತು. ಕಾರ್ಯಕ್ರಮ ಮುಗಿದ ನಂತರ ಬಸವೇಶ್ವರರ ಹಾಗೂ ಇದರ ಎದುರಿಗೆ ಅಳವಡಿಸಿದ್ದ ಕೆಂಪೇಗೌಡರ ಫ್ಲೆಕ್ಸ್‌ಗಳನ್ನು ತೆರವುಗೊಳಿಸುವ ವಿಚಾರಕ್ಕೆ ಸಂಬಂಧಿಸಿದಂತೆ ಎರಡು ಗುಂಪುಗಳ ನಡುವೆ ಗಲಾಟೆ ನಡೆದಿದೆ. ಇದರಿಂದಾಗಿ ಗ್ರಾಮದಲ್ಲಿ ಉದ್ವಿಗ್ನ ಪರಿಸ್ಥಿತಿ ಉಂಟಾಗಿತ್ತು.



ಕೊನೆಗೆ ಪಟ್ಟಣದ ತಾಲೂಕು ಕಚೇರಿಯಲ್ಲಿ ತಹಸೀಲ್ದಾರ್ ರವಿಶಂಕರ್ ಹಾಗೂ ಪೊಲೀಸ್ ಅಧಿಕಾರಿಗಳು, ಎರಡು ಸಮುದಾಯದ ಮುಖಂಡರ ಶಾಂತಿ ಸಭೆ ನಡೆದು, ಪ್ರಮುಖ ವೃತ್ತದಲ್ಲಿ ಅಳವಡಿಸಿರುವ ಬಸವೇಶ್ವರರ ಹಾಗೂ ಕೆಂಪೇಗೌಡರ ತಲಾ ಒಂದು ಫ್ಲೆಕ್ಸ್ ಹೊರತುಪಡಿಸಿ, ಉಳಿದ ಎಲ್ಲವನ್ನೂ ತೆರವುಗೊಳಿಸಲಾಯಿತು. ಈ ನಡುವೆ ಗ್ರಾಮದ ವ್ಯಕ್ತಿಯೊಬ್ಬರ ಮೇಲೆ ಏಕಾಏಕಿ ಕೆಲವರು ದಾಳಿ ನಡೆಸಿದ್ದು, ಅವರನ್ನು ಕೂಡಲೇ ಬಂಧಿಸುವಂತೆ ಆಗ್ರಹಿಸಿ, ಪಟ್ಟಣದ ವಿಶ್ವಗುರು ಬಸವೇಶ್ವರ ವೃತ್ತದಲ್ಲಿ ನೂರಾರು ಮಂದಿ ಇಂದು ಅಹೋರಾತ್ರಿ ಪ್ರತಿಭಟನೆ ನಡೆಸುತ್ತಿದ್ದಾರೆ. ಇವರನ್ನು ಮನ ವೊಲಿಸುವ ಪ್ರಯತ್ನವನ್ನು ಪೋಲೀಸರು ಮಾಡುತ್ತಿದ್ದಾರೆ. ಆದರೆ ಸ್ಥಳಕ್ಕೆ ಡಿವೈಎಸ್ಪಿ ಆಗಮಿಸಬೇಕೆಂದು ಪ್ರತಿಭಟನಾಕಾರರು ಪಟ್ಟು ಹಿಡಿದಿದ್ದಾರೆ. ಮುನ್ನೆಚ್ಚರಿಕಾ ಕ್ರಮವಾಗಿ ಗ್ರಾಮದಲ್ಲಿ ಭಾರೀ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ.

ಭ್ರಷ್ಟ ಬಿಜೆಪಿ ಸರ್ಕಾರ ಕಿತ್ತೊಗೆಯಲು ಕಾಂಗ್ರೆಸ್‌ನಿಂದ ಮಾತ್ರ ಸಾಧ್ಯ: ಸಿದ್ದರಾಮಯ್ಯ

● ಗೆದ್ದವರ ಹಿಂದೆ ಹೋಗುವ ಜೆಡಿಎಸ್‌ನಿಂದ ಬಿಜೆಪಿ ಸೋಲಿಸಲಾಗದು
● ಮಧು ಮಾದೇಗೌಡರ ಗೆಲುವಿಗೆ ಶ್ರಮಿಸಲು ಪಕ್ಷದ ಮುಖಂಡರಿಗೆ ಕಿವಿಮಾತು

ಮೈಸೂರು, ಮೇ 24(ಎಂಕೆ)– ರಾಜ್ಯ ಬಿಜೆಪಿ ಸರ್ಕಾರ ಭ್ರಷ್ಟಾಚಾರದಲ್ಲಿ ಸರ್ವವ್ಯಾಪಿ, ಸರ್ವ ಸ್ಪರ್ಶಿಯಾಗಿದೆಯೇ ಹೊರತು ಅಭಿವೃದ್ಧಿಯಲ್ಲಲ್ಲ. ಭ್ರಷ್ಟ ಬಿಜೆಪಿ ಸರ್ಕಾರವನ್ನು ಕಿತ್ತೊಗೆಯಲು ಕಾಂಗ್ರೆಸ್‌ನಿಂದ ಮಾತ್ರವೇ ಸಾಧ್ಯ. ಈ ನಿಟ್ಟಿನಲ್ಲಿ ದಕ್ಷಿಣ ಪದವೀಧರ ಕ್ಷೇತ್ರ ಹಾಗೂ ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗಳ ಗೆಲುವಿಗೆ ಶ್ರಮಿಸುವಂತೆ ಕಾಂಗ್ರೆಸ್ ಮುಖಂಡರಿಗೆ ವಿಪಕ್ಷ ನಾಯಕರೂ ಆದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆ ನೀಡಿದರು.



ನಗರ ಖಾಸಗಿ ಹೋಟೆಲ್‌ನಲ್ಲಿ ಮೈಸೂರು ನಗರ ಮತ್ತು ಜಿಲ್ಲಾ ಕಾಂಗ್ರೆಸ್ ಸಮಿತಿ ಹಾಗೂ ಚಾಮರಾಜನಗರ ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ಆಯೋಜಿಸಿದ್ದ 'ದಕ್ಷಿಣ ಪದವೀಧರ ಕ್ಷೇತ್ರ ಚುನಾವಣಾ ಪೂರ್ವಭಾವಿ ಸಭೆ'ಯಲ್ಲಿ ಮಾತನಾಡಿದ ಅವರು, ಚುನಾವಣೆಯಲ್ಲಿ ಗೆದ್ದವರ ಹಿಂದೆ ಹೋಗುವ ಜೆಡಿಎಸ್‌ನಿಂದ ಬಿಜೆಪಿ ಸೋಲಿಸಲು ಸಾಧ್ಯವಿಲ್ಲ. ಕಾಂಗ್ರೆಸ್‌ನಿಂದಷ್ಟೇ ಬಿಜೆಪಿ ಕಿತ್ತೊಗೆಯಲು ಸಾಧ್ಯ ಎಂದು ಹೇಳಿದರು.

ರಾಜ್ಯದಲ್ಲಿ ಕಾಂಗ್ರೆಸ್ ಪರ ಉತ್ತಮ ರಾಜಕೀಯ ವಾತಾವರಣವಿದೆ. ರಾಜ್ಯದಲ್ಲಿ ಸ್ಪರ್ಧೆ ಇರುವುದು ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ಮಾತ್ರ. ಬಿಜೆಪಿಯವರು ದೇಶವನಷ್ಟೇ ಅಲ್ಲ ರಾಜ್ಯವನ್ನು ಹಾಳು ಮಾಡಿದ್ದಾರೆ. ಗುತ್ತಿಗೆದಾರರ ಸಂಘದವರು ರಾಜ್ಯ ಸರ್ಕಾರದ ಯಾವುದೇ ಕೆಲಸದ ಗುತ್ತಿಗೆ ನೀಡಲು 40 ಪರ್ಸೆಂಟ್ ಕಮಿಷನ್ ನೀಡಬೇಕಾಗಿದೆ. ಇದರ ವಿರುದ್ಧ ಕ್ರಮಕೈಗೊಳ್ಳುವಂತೆ ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದದ್ದು ಕರ್ನಾಟಕ ಇತಿಹಾಸದಲ್ಲಿ ಇದೇ ಮೊದಲು. ನಾನು ಮುಖ್ಯಮಂತ್ರಿಯಾಗಿದ್ದಾಗ ಕಮಿಷನ್ ಕೇಳುತ್ತಿದ್ದ ಬಗ್ಗೆ, ಒಂದು ಪೈಸೆ ಕೊಟ್ಟಿದ್ದೇವೆ ಎಂದು ಯಾರಾದರೂ ಗುತ್ತಿಗೆದಾರರು ಎಂದು ಹೇಳಲಿ ನೋಡೋಣ ಎಂದು ಸವಾಲೆಸೆದ ಸಿದ್ದರಾಮಯ್ಯ, ಗುತ್ತಿಗೆದಾರರು ಪತ್ರ ಬರೆದು ವರ್ಷವಾಗುತ್ತಿದೆ. ಆದರೆ ಪ್ರಧಾನಿ ಮೋದಿಯವರು ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಕಿಡಿಕಾರಿದರು.

ಬಿಜೆಪಿ ಸರ್ಕಾರದ 3 ವರ್ಷದ ಆಡಳಿತದಲ್ಲಿ ಬಡಜನರಿಗೆ ಒಂದೇ ಒಂದು ಮನೆ ನೀಡಿಲ್ಲ. ಲಂಚ ಇಲ್ಲದೆ ಏನೂ ನಡೆಯಲ್ಲ ಎಂಬಂತಾಗಿದೆ. ಪಿಎಸ್‌ಐ ಹುದ್ದೆಗೆ 30–70 ಲಕ್ಷ ರೂ., ಲಂಚ. ಪ್ರತಿವರ್ಷ 70–75 ಸಾವಿರ ಕೋಟಿ ಸಾಲ ಮಾಡುತ್ತಿದ್ದಾರೆ. ಈ ವರ್ಷದ ಮಾರ್ಚ್ ತಿಂಗಳಲ್ಲಿ ರಾಜ್ಯದ ಸಾಲ 5 ಲಕ್ಷದ 18 ಸಾವಿರ ಕೋಟಿಯಾಗಿದೆ. ಉದ್ಯೋಗ ಸೃಷ್ಟಿ ಇಲ್ಲ. ಬೆಲೆ ಏರಿಕೆ ಹೆಚ್ಚಾಗುತ್ತಲೇ ಇದೆ. ಕಳೆದೆರಡು ತಿಂಗಳಲ್ಲಿ ಪೆಟ್ರೋಲ್, ಡಿಸೇಲ್ ಬೆಲೆಯನ್ನು ಸುಮಾರು 11 ರೂ., ಜಾಸ್ತಿ ಮಾಡಿ, ಈಗ 9 ರೂ., ಕಡಿಮೆ ಮಾಡಿ ನಾವು ಕಡಿಮೆ ಮಾಡಿದ್ದೇವೆ ಎಂದು ತಮ್ಮ ಬೆನ್ನನ್ನು ತಾವೇ ತಟ್ಟಿಕೊಳ್ಳುತ್ತಿದ್ದಾರೆ ಎಂದು ಲೇವಡಿ ಮಾಡಿದರು.

ಬಿಜೆಪಿಯವರೇ ಅಧಿಕಾರದಲ್ಲಿದ್ದರೆ ದೇಶ, ರಾಜ್ಯ ಉಳಿಯುತ್ತಾ? ಅಭಿವೃದ್ಧಿಯಾಗುತ್ತಾ? ಎಂಬುದನ್ನು ಯೋಚಿಸಬೇಕಾಗಿದೆ. ಎಸ್‌ಸಿ–ಎಸ್‌ಟಿ, ಅಲ್ಪಸಂಖ್ಯಾತರ ಅನುದಾನ ಕಡಿಮೆ ಮಾಡಿದ್ದಾರೆ. ಏನೂ ಕೆಲಸ ಮಾಡದೆ ಸುಮ್ಮನೆ ಆ ಕೆಲಸ, ಈ ಕೆಲಸ ಮಾಡುತ್ತಿದ್ದೇವೆ ಎಂದು ಹೇಳಿಕೊಂಡು ತಿರುಗಾಡುತ್ತಾರೆ. ಜಾತಿ–ಧರ್ಮದ ಹೆಸರಿನಲ್ಲಿ ಜನರನ್ನು ಎತ್ತಿಕಟ್ಟಿ ತಮ್ಮ ತಪ್ಪುಗಳನ್ನು ಮರೆ ಮಾಚುತ್ತಿದ್ದಾರೆ. ಅದಕ್ಕಾಗಿಯೇ ಬಿಜೆಪಿಯನ್ನು ಸೋಲಿಸಬೇಕು. ಸೋಲಿಸುವುದಷ್ಟೇ ಅಲ್ಲ ಸಂಪೂರ್ಣವಾಗಿ ಕಿತ್ತು ಹಾಕಬೇಕು. ಅದಕ್ಕೆ ದಕ್ಷಿಣ ಪದವೀಧರ ಕ್ಷೇತ್ರ ಚುನಾವಣೆ ಮುನ್ಸೂಚನೆಯಾಗಿದೆ ಎಂದು ಹೇಳಿದರು.

ಮೊದಲ ಪ್ರಾಶಸ್ತ್ಯ ಮತಕ್ಕೆ ಮನವಿ ಮಾಡಿ: ಬೂತ್, ಗ್ರಾಪಂ ಮಟ್ಟದಲ್ಲಿ ಮನೆ ಮನಗೆ ತೆರಳಿ ಪಕ್ಷದ ಅಭ್ಯರ್ಥಿ ಮಧು ಜಿ. ಮಾದೇಗೌಡ ಪರ ಪ್ರಚಾರ ಮಾಡಿ, ಮೊದಲ ಪ್ರಾಶಸ್ತ್ಯದ ಮತ ನೀಡುವಂತೆ ಮನವಿ ಮಾಡಬೇಕು. ಬಿಜೆಪಿ ಸರ್ಕಾರದ ಭ್ರಷ್ಟಾಚಾರವನ್ನು ಮತದಾರರಿಗೆ ತಿಳಿಸಿ. 13 ಸಾವಿರ ವಿದ್ಯಾರ್ಥಿಗಳು, ಸಾವಿರಕ್ಕೂ ಹೆಚ್ಚು ಸಿಬ್ಬಂದಿಗಳನ್ನು ಒಳಗೊಂಡ ಶಿಕ್ಷಣ ಸಂಸ್ಥೆಗಳನ್ನು ಮುನ್ನೆಡೆಸುತ್ತಿರುವ ಮಧು ಜಿ. ಮಾದೇಗೌಡ, ಅವರ ತಂದೆ ಜಿ.ಮಾದೇಗೌಡರಂತೆಯೇ ಶೈಕ್ಷಣಿಕ ಕ್ಷೇತ್ರದಲ್ಲಿ ಸೇವೆ ಮಾಡುತ್ತಿದ್ದಾರೆ. ಅವರನ್ನು ಗೆಲ್ಲಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದು ಹೇಳಿದರು.

ನಾಮಪತ್ರ ಸಲ್ಲಿಕೆ: ನಾಳೆ(ಮೇ 25) ಬೆಳಿಗ್ಗೆ 10.30ಕ್ಕೆ ಜಿಲ್ಲಾ ಕಾಂಗ್ರೆಸ್ ಕಚೇರಿಯಿಂದ ಪ್ರಾದೇಶಿಕ ಆಯುಕ್ತ ಕಚೇರಿಯವರೆಗೂ ಕಾಲ್ನಡಿಗೆಯಲ್ಲಿ ಮಧು ಜಿ. ಮಾದೇಗೌಡರ ನಾಮಪತ್ರ ಸಲ್ಲಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸ್ಥಳೀಯ ಶಾಸಕರು, ಮಾಜಿ ಶಾಸಕರು, ಮಾಜಿ ಸಂಸದರು, ಮುಖಂಡರು, ಕಾರ್ಯಕರ್ತರು ಭಾಗವಹಿಸಬೇಕು ಎಂದು ತಿಳಿಸಿದರು.

ಗಂಭೀರವಾಗಿ ಪರಿಗಣಿಸಿ: ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ ಮಾತನಾಡಿ, ದಕ್ಷಿಣ ಪದವೀಧರ ಕ್ಷೇತ್ರ ಚುನಾವಣೆಯನ್ನು ಗಂಭೀರವಾಗಿ ಪರಿಗಣಿಸಬೇಕಾಗಿದೆ. ಶೈಕ್ಷಣಿಕ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿರುವ ಅಭ್ಯರ್ಥಿ ಮಧು ಮಾದೇಗೌಡ ಅವರ ಪರವಾಗಿ ತಳಮಟ್ಟದಿಂದ ಮತಯಾಚನೆ ಮಾಡಬೇಕಾಗಿದೆ. ಶೈಕ್ಷಣಿಕ ಅಭಿವೃದ್ಧಿ ಕಾಂಗ್ರೆಸ್ ನೀಡಿರುವ ಕೊಡುಗೆಯಷ್ಟು ಬಿಜೆಪಿ ನೀಡಿಲ್ಲ ಎಂಬುದನ್ನು ತಿಳಿಸುವ ಕೆಲಸವಾಗಬೇಕಾಗಿದೆ. ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಶೈಕ್ಷಣಿಕ ಕ್ರಾಂತಿಯೇ ಆಗಿದೆ ಎಂದು ಹೇಳಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಮಾಜಿ ಸಚಿವರಾದ ಹೆಚ್.ಸಿ.ಮಹದೇವಪ್ಪ, ಚೆಲುವನಾರಾಯಣಸ್ವಾಮಿ, ಪುಟ್ಟರಂಗಶೆಟ್ಟಿ ಕೆ.ವೆಂಕಟೇಶ್, ಮಾಜಿ ಶಾಸಕರಾದ ಎಂ.ಕೆ. ಸೋಮಶೇಖರ್, ಕಳಲೆ ಕೇಶವಮೂರ್ತಿ, ಎ.ಆರ್.ಕೃಷ್ಣಮೂರ್ತಿ, ಜಯಣ್ಣ ಪುಟ್ಟಸಿದ್ದ ಶೆಟ್ಟಿ ಶಾಸಕರಾದ ಹೆಚ್.ಪಿ.ಮಂಜುನಾಥ್, ಯತೀಂದ್ರ ಸಿದ್ದರಾಮಯ್ಯ, ಅನಿಲ್ ಚಿಕ್ಕಮಾದು, ನರೇಂದ್ರ, ಎಂಎಲ್‌ಸಿ ಡಾ.ತಿಮ್ಮಯ್ಯ, ಮಾಜಿ ಸಂಸದರಾದ ಎಂ.ಶಿವಣ್ಣ, ಸಿದ್ದರಾಜು, ನಗರಾಧ್ಯಕ್ಷ ಆರ್.ಮೂರ್ತಿ, ಜಿಲ್ಲಾಧ್ಯಕ್ಷ ಬಿ.ಜೆ.ವಿಜಯ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಜೂ.21, ಮೈಸೂರಿಗೆ ಪ್ರಧಾನಿ ಮೋದಿ ಭೇಟಿ ಹಿನ್ನೆಲೆ: ಅಂತಾರಾಷ್ಟ್ರೀಯ ಯೋಗ ದಿನೋತ್ಸವ ಯಶಸ್ಸಿಗೆ ಸಿದ್ಧತೆ

ಶಾಸಕರು, ಸಂಸದರು, ಯೋಗ ಸಂಸ್ಥೆಗಳ ಮುಖ್ಯಸ್ಥರೊಳಗೊಂಡು ಸಮಿತಿ ರಚನೆ

ಮೇ 30ರಂದು ಮೈಸೂರಿಗೆ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಭೇಟಿ; ನಂತರ ಬೃಹತ್ ಯೋಗ ಪ್ರದರ್ಶನದ ಸ್ಥಳ ನಿಗದಿ: ಸೋಮಶೇಖರ್



ಮೈಸೂರು, ಮೇ 24 (ಆರ್‌ಕೆಬಿ) – ಅಂತಾರಾಷ್ಟ್ರೀಯ ಯೋಗ ದಿನೋತ್ಸವದಲ್ಲಿ ಭಾಗವಹಿಸಲು ಜೂ.21ರಂದು ಮೈಸೂರಿಗೆ ಪ್ರಧಾನಿ ನರೇಂದ್ರ ಮೋದಿ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಯೋಗ ದಿನಾಚರಣೆಯ ಸಿದ್ಧತೆಗಳು, ಇನ್ನಿತರೆ ಕಾರ್ಯಕ್ರಮಗಳ ರೂಪುರೇಷೆಗಳ ಕುರಿತಂತೆ ಸಮಿತಿ ರಚಿಸಿ ತೀರ್ಮಾನಿಸಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ತಿಳಿಸಿದರು.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಯೋಗ ಪ್ರದರ್ಶನದ ಸ್ಥಳ ಇನ್ನೂ ಅಂತಿಮಗೊಳಿಸಲಾಗಿಲ್ಲ. ಏಕೆಂದರೆ ಪ್ರಧಾನಿ ಕಚೇರಿ ವಿಶೇಷ ರಕ್ಷಣಾ ಗುಂಪು ಮತ್ತು ಕೇಂದ್ರ ಆಯುಷ್ ಸಚಿವಾಲಯದ ಹಿರಿಯ ಅಧಿಕಾರಿಗಳು ನಿರ್ಧರಿಸುತ್ತಾರೆ ಎಂದರು.

ಹಾಲಿ ತೀರ್ಮಾನಿಸಿರುವಂತೆ ಮೈಸೂರು ಅರಮನೆ ಮತ್ತು ಮೈಸೂರು ರೇಸ್ ಕೋರ್ಸ್ ಎರಡು ಸ್ಥಳಗಳಾಗಿದ್ದು, ಅಂತಿಮ ನಿರ್ಧಾರವನ್ನು ಶೀಘ್ರದಲ್ಲೇ ತೆಗೆದುಕೊಳ್ಳಲಾಗುವುದು. ಅದಕ್ಕೂ ಮುನ್ನ ಪ್ರಧಾನಮಂತ್ರಿಗಳ ವಿಶೇಷ ರಕ್ಷಣಾ ದಳ, ಮತ್ತು ಎಸ್‌ಪಿಜಿ ಅಧಿಕಾರಿಗಳು ಮೈಸೂರಿಗೆ ಭೇಟಿ ನೀಡಲಿದ್ದಾರೆ. ಅವರು ಸೂಕ್ತ ಸ್ಥಳಗಳನ್ನು ಪರಿಶೀಲಿಸಿ ಅಂತಿಮ ನಿರ್ಧಾರ ಕೈಗೊಳ್ಳಲಿದ್ದಾರೆ. ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಅವರು ಮೇ 30ರಂದು ಮೈಸೂರಿಗೆ ಭೇಟಿ ನೀಡಲಿದ್ದು, ಪೂರ್ವ ಸಿದ್ಧತೆಗಳ ಮೇಲ್ವಿಚಾರಣೆ ನಡೆಸಲಿದ್ದಾರೆ. ಅವರೊಂದಿಗೆ ಸಮಾಲೋಚಿಸಲಾಗುವುದು ಎಂದು ಹೇಳಿದರು.

ಅಂತಾರಾಷ್ಟ್ರೀಯ ಯೋಗ ದಿನೋತ್ಸವದ ಬೃಹತ್ ಯೋಗ ಪ್ರದರ್ಶನಕ್ಕೆ ಸಂಬಂಧಿಸಿದಂತೆ ಉಸ್ತುವಾರಿ ಸಚಿವರ ನೇತೃತ್ವದಲ್ಲಿ ಶಾಸಕರು, ಸಂಸದರು, ಎಲ್ಲಾ ಪಕ್ಷದ ಜನಪ್ರತಿನಿಧಿಗಳು, ಯೋಗ ಸಂಸ್ಥೆಗಳ ಮುಖ್ಯಸ್ಥರಗಳನ್ನು ಒಳಗೊಂಡ ಸಮಿತಿ ರಚಿಸಲಾಗುವುದು. ಕಾರ್ಯಕ್ರಮದ ತಯಾರಿಯಲ್ಲಿ ಯಾವುದೇ ಲೋಪ ಆಗದಂತೆ ಕಾರ್ಯಕ್ರಮ ರೂಪಿಸಲಾಗುವುದು ಎಂದು ತಿಳಿಸಿದರು.

ಪ್ರಧಾನಿ ಮೋದಿಯವರು ಈ ಬೃಹತ್ ಯೋಗ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಮೈಸೂರು ವಿಶ್ವದ ಗಮನ ಸೆಳೆಯುವಂತಾಗಲಿದೆ. ಇದರಿಂದ ಮೈಸೂರಿನ ಪ್ರವಾಸೋದ್ಯಮದ ಆಕರ್ಷಣೆ ಹೆಚ್ಚಲಿಗೆ ಎಂದು ಹೇಳಿದರು.

ಪ್ರಧಾನಿ ಭೇಟಿ ಸಂದರ್ಭದಲ್ಲಿ ಮೈಸೂರಿನ ರಸ್ತೆಗಳ ದಯನೀಯ ಪರಿಸ್ಥಿತಿಯ ಬಗ್ಗೆ ಮಾಧ್ಯಮದವರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ವಿದೇಶದಿಂದ ಮೇ 26ರಂದು ವಾಪಸಾದ ಬಳಿಕ ಈ ಕುರಿತು ಅವರ ಗಮನ ಸೆಳೆಯಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ಮೈಸೂರು–ಕೊಡಗು ಸಂಸದ ಪ್ರತಾಪ್‌ಸಿಂಹ, ಶಾಸಕರಾದ ಎಸ್.ಎ.ರಾಮದಾಸ್, ಎಲ್.ನಾಗೇಂದ್ರ, ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, ಬಿಜೆಪಿ ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ, ಮಾಧ್ಯಮ ವಕ್ತಾರ ಕೇಬಲ್ ಮಹೇಶ್ ಉಪಸ್ಥಿತರಿದ್ದರು.

ಮೈಸೂರಿಗೂ ಪ್ಯಾರಿಸ್ ರೀತಿ ಪ್ರವಾಸಿಗರನ್ನು ಆಕರ್ಷಿಸುವ ಶಕ್ತಿ ಇದೆ: ಸಂಸದ ಪ್ರತಾಪ್‌ಸಿಂಹ

ಮೈಸೂರನ್ನು ಪ್ಯಾರಿಸ್ ಮಾಡುವುದಾಗಿ ಪ್ರಧಾನಿ ಹೇಳಿದ್ದರಲ್ಲ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಮೈಸೂರು–ಕೊಡಗು ಸಂಸದ ಪ್ರತಾಪ್‌ಸಿಂಹ, ಮೈಸೂರಿಗೆ ಪ್ಯಾರಿಸ್ ರೀತಿ ಪ್ರವಾಸಿಗರನ್ನು ಆಕರ್ಷಿಸುವ ಶಕ್ತಿ ಇದೆ. ಅದಕ್ಕೆ ಪೂರಕವಾಗಿ ಸಂಪರ್ಕಗಳ ಅಭಿವೃದ್ಧಿಗೆ ಪ್ರಧಾನಿಗಳು ಒತ್ತು ನೀಡಿದ್ದಾರೆ.

ಆದರೆ ಪ್ಯಾರಿಸ್ ರೀತಿ ಮಾಡುತ್ತೇನೆಂದಲ್ಲ. ಪ್ಯಾರಿಸ್‌ನಲ್ಲಿರುವ ಐಫೆಲ್ ಟವರ್‌ನಿಂದ ಹಿಡಿದು ಮ್ಯೂಸಿಯಂ, ಪ್ಯಾಲೆಸ್ ಇದೆ. ಅವೆಲ್ಲವನ್ನೂ ನಿರ್ಮಿಸಲು 400 ವರ್ಷ ಹಿಡಿದಿದೆ.

ಯಾರೋ ರಾಜಕಾರಣಿಯ ಹೇಳಿಕೆಗೆ ಕಿವಿಗೊಡುವ ಅಗತ್ಯವಿಲ್ಲ. ಮೈಸೂರು ಸಹ ಪ್ಯಾರಿಸ್ ರೀತಿ 2014 ರಲ್ಲಿ ಅತೀ ಹೆಚ್ಚು ಪ್ರವಾಸಿಗರನ್ನು ಆಕರ್ಷಿಸುವ ಸ್ಥಳವಾಗಿತ್ತು. ಈಗ ಅದು ಲಂಡನ್ ಓವರ್‌ಟೇಕ್ ಮಾಡಿದೆ. ಹಾಗಾಗಿ ಮೈಸೂರಿಗೂ ಪ್ರವಾಸಿಗರನ್ನು ಆಕರ್ಷಿಸುವ ಶಕ್ತಿ ಇದೆ ಎಂದು ಹೇಳಿದ್ದು, ಅದಕ್ಕೆ ಪೂರಕವಾಗಿ ಇಷ್ಟೊಂದು ಅಭಿವೃದ್ಧಿ ಕೆಲಸಗಳನ್ನು ಮಾಡುತ್ತಿದ್ದೇವೆ ಎಂದರು.

ಮೈಸೂರಿನಲ್ಲಿ ಜೂ.21ರಂದು ನಡೆಸಲು ಉದ್ದೇಶಿಸಿರುವ ಅಂತಾರಾಷ್ಟ್ರೀಯ ಯೋಗ ದಿನೋತ್ಸವ ಆಚರಣೆ ಸಂಬಂಧ ಮಾಹಿತಿ ನೀಡಲೆಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಮಂಗಳವಾರ ಬೆಳಗ್ಗೆ 9 ಗಂಟೆಗೆ ಸುದ್ದಿಗೋಷ್ಠಿ ಕರೆದಿದ್ದರು. ಆದರೆ, ನಿಗದಿತ ಸಮಯಕ್ಕಿಂತ ಒಂದು ಗಂಟೆಯಷ್ಟು ತಡವಾಗಿ ಆಗಮಿಸಿದ ಅವರು ಕೇವಲ 7 ನಿಮಿಷದಲ್ಲಿ ಸುದ್ದಿಗೋಷ್ಠಿ ಪೂರ್ಣಗೊಳಿಸಿ ಹಿಂತಿರುಗಿದರು.

ಲಾರಿ–ಬಸ್ ನಡುವೆ ಭೀಕರ ಅಪಘಾತ; 8 ಸಾವು, 26 ಮಂದಿಗೆ ಗಾಯ

ಹುಬ್ಬಳ್ಳಿ, ಮೇ 24– ಲಾರಿ ಮತ್ತು ಪ್ರಯಾಣಿಕ ಬಸ್ ನಡುವೆ ಮುಖಾಮುಖಿ ಡಿಕ್ಕಿಯಾಗಿದ್ದು, 8 ಮಂದಿ ಸಾವನ್ನಪ್ಪಿ, 26 ಮಂದಿ ಗಾಯಗೊಂಡಿದ್ದಾರೆ. ಹುಬ್ಬಳ್ಳಿಯ ತಾರಿಹಾಳ ಬೈಪಾಸ್‌ನಲ್ಲಿ ದುರಂತ ಸಂಭವಿಸಿದೆ. ಗಾಯಗೊಂಡಿರುವ 26 ಮಂದಿಯನ್ನು ಕಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ.



ಕೊಲ್ಹಾಪುರದಿಂದ ಬೆಂಗಳೂರಿಗೆ ತೆರಳುತ್ತಿದ್ದ ನ್ಯಾಷನಲ್ ಟ್ರಾವೆಲ್ಸ್ ಬಸ್, ಅಕ್ಕಿ ಸಾಗಣೆ ಮಾಡುತ್ತಿದ್ದ ಲಾರಿಗೆ ಡಿಕ್ಕಿಯಾದ ಪರಿಣಾಮ ಲಾರಿಯಲ್ಲಿದ್ದ ಚಾಲಕ, ಕ್ಲೀನರ್ ಸೇರಿದಂತೆ ಮೂವರು ಮೃತಪಟ್ಟರು. ಖಾಸಗಿ ಬಸ್‌ನಲ್ಲಿದ್ದ ನಾಲ್ವರು ಮೃತಪಟ್ಟರು. ಕಿಮ್ಸ್ ಆಸ್ಪತ್ರೆಗೆ ಹುಬ್ಬಳ್ಳಿ–ಧಾರವಾಡದ ಪೊಲೀಸ್ ಆಯುಕ್ತ ಲಾಬೂರಾವ್ ಭೇಟಿ ನೀಡಿ, ಗಾಯಾಳುಗಳಿಗೆ ಸಾಂತ್ವನ ಹೇಳಿದರು.

ನಕ್ಕರೆ ಅದೇ ಸ್ವರ್ಗ

ಹೆಂಡತಿ : "ನೀವೇನು ಮದುವೆ ಸರ್ಟಿಫಿಕೇಟ್ ಮಗುಚಿ ಮಗುಚಿ ನೋಡುತ್ತಿದ್ದೀರಿ? ಏನು ವಿಷಯ?"

ಗಂಡ : "ಇದರಲ್ಲಿ expiry date ಇದೆಯೇ ಎಂದು ನೋಡುತ್ತಿದ್ದೇನೆ"

ಮೈಸೂರು ಮಿತ್ರ

ಬುಧವಾರ, 25 ಮೇ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಆಸೆಗಳ ಬೆನ್ನತ್ತಿ ಬದುಕನ್ನು ದುಃಖವಾಗಿಸುವುದರ ಬದಲು, ಇದ್ದುದರಲ್ಲಿಯೇ ತೃಪ್ತಿಪಟ್ಟು, ಸಂತೋಷ ಪಡೋಣ –ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಯಾದವೇಂದ್ರ ದನ ಕಾದ, ರಾಘವೇಂದ್ರ ರಾಜ್ಯವಾಳಿದ

ನಿಮ್ಮ ಪತ್ರಗಳು

ತೈಲ ದರ ಇಳಿಕೆ ಸ್ವಾಗತಾರ್ಹ

ಮಾನ್ಯರೆ,



ಕಚ್ಚಾ ತೈಲ ಉತ್ಪನ್ನಗಳಾದ ಪೆಟ್ರೋಲ್ ಮತ್ತು ಡೀಸೆಲ್ ಜನರ ಅತ್ಯಂತ ಅವಶ್ಯ ಇಂಧನಗಳಾಗಿವೆ. ಕಾರು, ಬೈಕ್ ಗಳಿಗೆ ಜನ ದಾಸರಾಗಿದ್ದು, ನಡೆದಾಡುವುದನ್ನೇ ಮರೆತಂತೆ ಕಾಣುತ್ತದೆ. ಒಂದು ವೇಳೆ ನವೀಕರಿಸ ಲಾಗದ ಕಚ್ಚಾ ತೈಲ ಉತ್ಪನ್ನಗಳು ಖಾಲಿಯಾದರೆ ಜನ ಜೀವನವನ್ನು ಊಹಿಸಿಕೊಳ್ಳುವುದು ಕಷ್ಟವಾಗುತ್ತದೆ.

ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಹೆಚ್ಚಾದರೆ ದಿನ ನಿತ್ಯದ ವಸ್ತುಗಳ ಬೆಲೆ ಗಗನಕ್ಕೇರುತ್ತದೆ. ಸರಕು ಸೇವೆಗಳು, ದಿನಸಿ ಪದಾರ್ಥಗಳು, ತರಕಾರಿ, ಔಷಧಗಳು, ಬಸ್ ಪ್ರಯಾಣ ದರ ಹೀಗೆ ಪ್ರತಿಯೊಂದರ ಬೆಲೆ ಹೆಚ್ಚಾಗಿ ಜೀವನ ನಡೆಸುವುದು ದುಸ್ತರವಾಗುತ್ತದೆ.

ಪ್ರಸ್ತುತ ಕೇಂದ್ರ ಸರ್ಕಾರ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಅಬಕಾರಿ ಸುಂಕವನ್ನು ಕ್ರಮವಾಗಿ ಪೆಟ್ರೋಲ್ 9 ರೂ ಮತ್ತು ಡೀಸೆಲ್ ಬೆಲೆ 6 ಲೀಟರ್‌ಗೆ ಇಳಿಸಿರುವುದು ಮತ್ತು ಉಜ್ವಲ ಯೋಜನೆಯಡಿಯಲ್ಲಿನ ಅಡುಗೆ ಅನಿಲ ದರವನ್ನು 200 ರೂ. ಕಡಿಮೆ ಮಾಡಿರುವುದು ಜನಸಾಮಾನ್ಯರಿಗೆ ಕೊಂಚ ನೆಮ್ಮದಿಯನ್ನು ನೀಡಿದೆ.

ಇದಕ್ಕೆ ಪೂರಕವಾಗಿ ರಾಜ್ಯಗಳು ಸುಂಕವನ್ನು ಕಡಿಮೆ ಮಾಡಿದರೆ ಪೆಟ್ರೋಲ್ ಮತ್ತು ಡೀಸೆಲ್ ದರ ಇನ್ನೂ ಕಡಿಮೆಯಾಗುವ ಸಾಧ್ಯತೆಯಿದೆ. ತೈಲ ಬೆಲೆ ಹೆಚ್ಚಾದರೆ ಸರ್ಕಾರವನ್ನು ದೂಷಿಸುವ ನಾವು, ಅದೇ ತೈಲ ದರ ಕಡಿಮೆಯಾದಾಗ ಸರ್ಕಾರದ ಕ್ರಮವನ್ನು ಅಭಿನಂದಿಸುವುದು ನಮ್ಮ ಕರ್ತವ್ಯವಾಗಿದೆ.

ಅವಶ್ಯವಿದ್ದ ಕಡೆ ಮಾತ್ರ ವಾಹನಗಳನ್ನು ಬಳಸಿ ಪೆಟ್ರೋಲ್ ಮತ್ತು ಡೀಸೆಲ್ ಅನ್ನು ಮಿತವಾಗಿ ಬಳಸುವ ಮೂಲಕ ಜವಾಬ್ದಾರಿಯುತ ನಾಗರಿಕರಾಗೋಣ. ತೈಲ ದರ ಇಳಿಕೆಗೆ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸುತ್ತಾ, ತೈಲದರ ಸ್ಥಿರವಾಗಿರುವಂತೆ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಅಗ್ರಹಿಸೋಣ.

–ರಾ ಸುಮ ಭಟ್, ಚಿಕ್ಕಮಗಳೂರು.

ಬಸ್ ತಂಗುದಾಣ ತೆರವುಗೊಳಿಸಿ

ಮಾನ್ಯರೆ,

ಇತ್ತೀಚೆಗೆ ಮೈಸೂರಿನ ಅತ್ಯಂತ ಹಳೆಯ ಅಗ್ರಹಾರದ ವಾಣಿ ವಿಲಾಸ ಮಾರುಕಟ್ಟೆಯ ಒಂದು ಭಾಗ ಬಿರುಕು ಬಿಟ್ಟು, ಕುಸಿದಿದೆ. ಅದೃಷ್ಟವಶಾತ್ ಅಂದು ಬಾರೀ ಮಳೆ ಇದ್ದುದರಿಂದ ಹತ್ತಿರ ದಲ್ಲೇ ಇದ್ದ ಬಸ್ ನಿಲ್ದಾಣದಲ್ಲಿ ಜನ ಇರಲಿಲ್ಲ. ಹಾಗಾಗಿ ಯಾವುದೇ ಅಪಾಯ ಸಂಭವಿಸಲಿಲ್ಲ. ಅದೇ ರೀತಿ ಅಗ್ರಹಾರ ವೃತ್ತದಲ್ಲಿ ಟಾಂಗಾ ಸ್ಟ್ಯಾಂಡ್ ಬಳಿ ಇರುವ ಕಂಠಿ ಮಲ್ಲಣ್ಣ ಬಸ್ ಶೆಲ್ಟರ್ ಅತ್ಯಂತ ಶಿಥಿಲಾವಸ್ಥೆಯಲ್ಲಿದ್ದು ಯಾವಾಗ ಬೇಕಾದರೂ ಕುಸಿಯಬಹುದು. ಬಸ್‌ಗಾಗಿ ಕಾಯುವ ಪ್ರಯಾಣಿಕರು ಜೋರಾಗಿ ಮಳೆ ಬಂದಾಗ ಇಲ್ಲೇ ಆಶ್ರಯ ಪಡೆ ಯುತ್ತಾರೆ.

ಸಂಬಂಧಪಟ್ಟ ಅಧಿಕಾರಿಗಳು ಶೀಘ್ರವಾಗಿ ಈ ನಿಲ್ದಾಣವನ್ನು ತೆರವುಗೊಳಿಸಿ ಅದೇ ಜಾಗದಲ್ಲಿ ಸುಸಜ್ಜಿತ ಬಸ್ ಶೆಲ್ಟರ್ ನಿರ್ಮಿಸಬೇಕೆಂದು ಮನವಿ.

– ನೊಂದ ಪ್ರಯಾಣಿಕರು, ಮೈಸೂರು.

ಸ್ಫೂರ್ತಿದಾಯಕ ವಿಜಯ

ಮಾನ್ಯರೆ,

ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಶಿಪ್‌ನಲ್ಲಿ ನಿಖತ್ ಝರೀನ್ 52 ಕೆಜಿ ವಿಭಾಗದ ಫೈನಲ್‌ನಲ್ಲಿ ಥಾಯ್ಲೆಂಡ್‌ನ ಬಾಕ್ಸರ್ ಜಿಟ್‌ಪಾಂಗ್ ಜುಟಮಾಸ್ ಅವರನ್ನು ಸೋಲಿಸಿ ಚಿನ್ನದ ಪದಕ ಪಡೆದು ದೇಶಕ್ಕೆ ಕೀರ್ತಿ ತಂದುಕೊಟ್ಟಿದ್ದಾರೆ. ಈ ಮೂಲಕ ಮೇರಿ ಕೋಮ್ ಗೆದ್ದ ನಂತರದ ಚಿನ್ನದ ಪದಕ ಇದಾಗಿದೆ. ಸರಿಯಾದ ಸೌಲಭ್ಯಗಳು ಇಲ್ಲದೆ ಅನೇಕ ಸವಾಲುಗಳನ್ನು ಮೆಟ್ಟಿ ನಿಂತು ಸಾಧನೆ ಮಾಡಿ ಯುವ ಕ್ರೀಡಾಪಟುಗಳಿಗೆ ಸ್ಫೂರ್ತಿಯಾಗಿದ್ದಾರೆ. ಇದೇ ರೀತಿ ದೇಶದಲ್ಲಿ ಅನೇಕ ಪ್ರತಿಭಾವಂತ ಕ್ರೀಡಾಪಟುಗಳು ಇದ್ದಾರೆ. ಅವರನ್ನು ಗುರುತಿಸಿ ಪ್ರೋತ್ಸಾಹಿಸುವ ಕೆಲಸವನ್ನು ಸರ್ಕಾರಗಳು ಮಾಡಬೇಕು.

–ಚನ್ನಕೇಶವ ಜಿ.ಕೆ, ತರೀಕೆರೆ

ತಾಯಿ ನೆಲದಲ್ಲಿ ಪಂಡಿತ ಸಮಾಜಕ್ಕೆ ರಕ್ಷಣೆ ಇಲ್ಲವೆ?

ಮಾನ್ಯರೆ,

ಇತ್ತೀಚೆಗೆ ಕಾಶ್ಮೀರದಲ್ಲಿ ಸರಕಾರಿ ನೌಕರ ರಾಹುಲ್ ಭಟ್ ಎನ್ನುವ ಅಮಾಯಕ ಕಾಶ್ಮೀರಿ ಪಂಡಿತನನ್ನು ಅವರು ಕೆಲಸ ಮಾಡುವ ಕೊಠಡಿಗೆ ನುಗ್ಗಿ ಕೊಲೆ ಮಾಡಿದ ಘಟನೆ ಜರುಗಿದೆ. ಸಾವಿರಾರು ಕಾಶ್ಮೀರಿ ಪಂಡಿತರ ಹತ್ಯೆ ಮಾಡಿ ಕೆಲವರ ಜಾತಿ ಪರಿವರ್ತನೆ ಮಾಡಿ, ಅವರು ಕಾಶ್ಮೀರವನ್ನೇ ತೊರೆಯುವಂತೆ ಮಾಡಿದ್ದರು. ಕೇಂದ್ರ ಸರ್ಕಾರ 370ನೇ ವಿಧಿಯನ್ನು ಹಿಂಪಡೆದ ನಂತರ ಅಲ್ಲಿ ಶಾಂತಿ ನೆಲೆಸಿತ್ತು. ತಮ್ಮ ತಾಯಿ ನೆಲವನ್ನು ಬಿಟ್ಟು ಹೊರ ಬಂದಿದ್ದ ಕಾಶ್ಮೀರಿ ಪಂಡಿತ ಸಮಾಜದವರು ಇತ್ತೀಚೆಗೆ ಕಾಶ್ಮೀರಕ್ಕೆ ಹಿಂತಿರುಗಲಾರಂಭಿಸಿದ್ದಾರೆ. ಪುನಃ ಅವರನ್ನು ಹೆದರಿಸುವ ಉದ್ದೇಶದಿಂದ ರಾಹುಲ್ ಭಟ್ ಎಂಬ ಅಮಾಯಕ ಸರ್ಕಾರಿ ನೌಕರನ ಹತ್ಯೆ ಮಾಡಲಾಗಿದೆ.

ಇತರ ಯಾವುದೇ ಜಾತಿ ಧರ್ಮದವರ ಕೊಲೆ ಆದಾಗ, ದೌರ್ಜನ್ಯ ಆದಾಗ ಹಲವು ಬುದ್ಧಿಜೀವಿಗಳು, ಪೀತ ಪತ್ರಕರ್ತರು ಪುಟಗಟ್ಟಲೇ ಬರೆಯುತ್ತಾರೆ. ಗಂಟಲು ಕಿತ್ತು ಬರುವಂತೆ ಹೇಳಿಕೆ ನೀಡುತ್ತಾರೆ. ಆದರೆ ರಾಹುಲ್ ಭಟ್ ಕೊಲೆ ಆದಾಗ ಯಾವ ರಾಜಕೀಯ ಪಕ್ಷವಾಗಲೀ, ರಾಜಕಾರಣಿಗಳಾಗಲೀ ಪ್ರತಿಭಟಿಸಲಿಲ್ಲ. ತಮ್ಮ ತಾಯಿ ನೆಲದಲ್ಲಿ ಪಂಡಿತ್ ಸಮಾಜಕ್ಕೆ ರಕ್ಷಣೆ ಇಲ್ಲದಿದ್ದಲ್ಲಿ ಅವರು ಯಾವ ದೇಶಕ್ಕೆ ಹೋಗಬೇಕು. ಇದಕ್ಕೆ ಪರಿಹಾರವಿಲ್ಲವೆ? ಈ ಸಮಾಜ ಇದರ ಬಗ್ಗೆ ಚಿಂತಿಸುವುದೇ?

– ಮಜೂರು ರಘುವೀರ ಪುರಾಣಿಕ, ಸಿದ್ಧಾರ್ಥನಗರ, ಮೈಸೂರು.

ಕೆಟ್ಟುನಿಂತಿರುವ ಟ್ರಾಫಿಕ್ ಸಿಗ್ನಲ್‌ಗಳು


ಮಾನ್ಯರೆ,



ಮೈಸೂರಿನ ಹೃದಯ ಭಾಗದಲ್ಲಿರುವ ಟ್ರಾಫಿಕ್ ಸಿಗ್ನಲ್‌ಗಳು ಸರಿಯಾಗಿ ಕಾರ್ಯ ನಿರ್ವಹಿಸದೇ ಕೆಟ್ಟು ನಿಂತಿದ್ದರೂ ಸಂಬಂಧಪಟ್ಟವರ ಗಮನಕ್ಕೆ ಬಂದಿಲ್ಲ ಎಂದು ತಿಳಿಯುತ್ತದೆ.

ಮೈಸೂರಿನ ಕೆ.ಆರ್. ವೃತ್ತದ ನಾಲ್ಕು ಬದಿಯ ಪಾದಚಾರಿಗಳಿಗೆ ಮಾರ್ಗಸೂಚಿಸುವ ಸಿಗ್ನಲ್‌ಗಳು ಕಾರ್ಯ ನಿರ್ವಹಿಸದೇ ಹಲವಾರು ದಿನಗಳಾಗಿವೆ. ಪಾದಚಾರಿಗಳು ರಸ್ತೆ ಕ್ರಾಸ್ ಮಾಡಲು ಸರಿಯಾಗಿ ಸಿಗ್ನಲ್ ಇಲ್ಲದೇ ಗೊಂದಲದಲ್ಲಿಯೇ ರಸ್ತೆ ದಾಟಬೇಕಾದ ಅನಿವಾರ್ಯತೆ ಇದೆ. ವಾಹನ ಚಾಲಕರು ಈ ಭಾಗಗಳಲ್ಲಿ ವೇಗವಾಗಿ ಚಲಿಸುವ ಕಾರಣ ಅಪಘಾತಗಳು ಆಗುವ ಸಾಧ್ಯತೆಗಳು ಹೆಚ್ಚಿವೆ. ಯಾವುದಾದರೂ ಅಪಘಾತಗಳು ಸಂಭವಿಸುವ ಮುನ್ನ ಎಚ್ಚೆತ್ತು ಸಿಗ್ನಲ್ ಲೈಟ್‌ಗಳನ್ನು ಸರಿಪಡಿಸುವುದು ಒಳಿತು. ಇಲ್ಲವಾದಲ್ಲಿ ಸಂಭವಿಸುವ ಅಪಘಾತಗಳಿಗೇ ಪೊಲೀಸ್ ಇಲಾಖೆಯೇ ಹೊಣೆಯಾಗಬೇಕಾಗುತ್ತದೆ.

–ಎಸ್.ರವಿ, ವಕೀಲ, ಮೈಸೂರು.



ಡಾ. ಹೆಚ್.ವಿ. ನಾಗರಾಜರಾವ್
ಮೈಸೂರು

ಸಂಸ್ಕೃತಿ ಚಿಂತನಾ

ವೇದ–ಶಾಸ್ತ್ರ–ಜ್ಞಾನ ಕಲೆಗಳ ತವರುಮನೆ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ

ಭಾರತ ದೇಶದ ಸಂಸ್ಕೃತಿಯ ಆಧಾರಸ್ತಂಭಗಳೆಂದರೆ ವೇದಗಳು, ಶಾಸ್ತ್ರಗಳು, ಪುರಾಣಗಳು ಮತ್ತು ಕಲೆಗಳು. ಇಂದಿನ ಪ್ರಪಂಚ ಕೇವಲ ಧನಾರ್ಜನೋನ್ಮುಖವಾಗಿ ಅವುಗಳನ್ನೆಲ್ಲ ಮರೆಯುವ ಸ್ಥಿತಿಗೆ ತಲುಪಿದೆ. ವೇದ ಶಾಸ್ತ್ರ ಪರಿಣತರಾದ ಪಂಡಿತರ ಮನೆಯ ಮಕ್ಕಳೂ ಆಧುನಿಕ ಜೀವನದ ಸೆಳೆತಕ್ಕೆ ಸಿಕ್ಕಿ ಉದ್ಯೋಗವನ್ನು ದೊರಕಿಸುವ ವಿದ್ಯೆಗಳನ್ನೇ ಕಲಿತು ತಮ್ಮ ಬೇರುಗಳನ್ನು ಮರೆಯುತ್ತಿದ್ದಾರೆ. ಇಂದು ವೇದಗಳ ಕಂಠಪಾಠ ಮಾಡಿದವರು, ಉಪನಿಷತ್ತುಗಳನ್ನು ಸ್ಪಷ್ಟವಾಗಿ ವ್ಯಾಖ್ಯಾನಿಸಬಲ್ಲವರು, ಶಾಸ್ತ್ರ ವಾಕ್ಯಾರ್ಥಗಳನ್ನು ಮಾಡಬಲ್ಲವರು ವಿರಳಾತಿವಿರಳ. ಪಾಣಿನಿ, ಜೈಮಿನಿ, ಗೌತಮ, ಕಣಾದ, ಕಪಿಲ, ವ್ಯಾಸ ಮುಂತಾದ ಮಹಾಮನೀಷಿಗಳ ಗ್ರಂಥಗಳನ್ನು ವಿದೇಶಿ ವಿದ್ವಾಂಸರ ಅನುವಾದಗಳಿಂದ ಮಾತ್ರ ತಿಳಿದುಕೊಳ್ಳುವ ದುರವಸ್ಥೆಗೆ ನಾವು ತಲುಪಿದ್ದೇವೆ. ಅಸ್ಮಿತೆಯನ್ನು ಎಂದರೆ ನಮ್ಮತನವನ್ನು ಕಳೆದುಕೊಂಡವರಾಗುತ್ತಿದ್ದೇವೆ ಎಂಬ ಭಯ ಆವರಿಸುತ್ತಿದೆ.

ಯದಾಯದಾ ಹಿ ಧರ್ಮಸ್ಯ
ಗ್ಲಾನಿರ್ಭವತಿ ಭಾರತ ।
ಅಭ್ಯುತ್ಥಾನಮಧರ್ಮಸ್ಯ
ತದಾತ್ಮಾನಂ ಸೃಜಾಮ್ಯಹಮ್ ॥

ಎಂದು ಭಗವಂತನು ಆಶ್ವಾಸನೆಯನ್ನು ಕೊಟ್ಟಿರುವಂತೆ ಧರ್ಮವನ್ನು ಉಳಿಸಲು ಭಗವದ್ವಿಭೂತಿಗಳು ಆವಿರ್ಭವಿಸುತ್ತಾರೆ. ಅಂತಹವರ ಪ್ರಭಾವವೂ ಪ್ರಭಾವವಲಯವೂ ಜಗತ್ತಿನಲ್ಲಿ ಬದಲಾವಣೆಯನ್ನೂ ಪ್ರಜೆಗಳ ಮನಸ್ಸಿನಲ್ಲಿ ಪರಿವರ್ತನೆಯನ್ನೂ ತರುತ್ತದೆ. ಹಾಗೆ ಇಪ್ಪತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಕಾಣಿಸಿಕೊಂಡ ಅನುಭಾವಿ ಅವಧೂತರು ಶ್ರೀಗಣಪತಿ ಸಚ್ಚಿದಾನಂದ ಮಹಾಸ್ವಾಮಿಗಳು. ಅವರು ವೇದೋಕ್ತವಾದ ಕ್ರತುಶಕ್ತಿಯ ಮಾನವಾಕಾರ. ಅವರ ಸಂಕಲ್ಪ ಭಗವದಿಚ್ಛೆಯ ಪೂರ್ಣಾಭಿವ್ಯಕ್ತಿ. ಇಂದು ನಾವು ಮೈಸೂರಿ ನಲ್ಲಿ ಕಾಣುತ್ತಿರುವ ಭವ್ಯವೂ ದಿವ್ಯವೂ ಆದ ಆಶ್ರಮ, ಭಾರತ ದೇಶದ ನಾನಾ ನಗರ ಗಳಲ್ಲಿ ಬೆಳಗುತ್ತಿರುವ ಅದರ ಶಾಖೆಗಳು, ಪ್ರಪಂಚದ ನಾನಾ ದೇಶಗಳಲ್ಲಿ ಶೋಭಿಸು ತ್ತಿರುವ ಕೇಂದ್ರಗಳು, ಇವೆಲ್ಲ ಈ ತೇಜಸ್ಸಿನ ಅದ್ಭುತ ಅಭಿವ್ಯಕ್ತ ಸ್ವರೂಪಗಳು.

ಸಹಸ್ರಾರು ಜನರು ಶ್ರೀ ಸ್ವಾಮಿಪಾದರಿಂದ ಪ್ರೇರಿತರಾಗಿ ಸನ್ಮಾರ್ಗವನ್ನು ಆಶ್ರಯಿಸಿದ್ದಾರೆ, ಜ್ಞಾನಿಗಳಾಗಿದ್ದಾರೆ, ವಿಜ್ಞಾನಿಗಳಾಗಿದ್ದಾರೆ. ಕಲೆಯಲ್ಲಿ ಹಿಮವ ದ್ವಿಂಧ್ಯಗಳಂತೆ ಬೆಳೆದಿದ್ದಾರೆ. ಗಂಗಾನದಿ ಹರಿಯುವುದರಿಂದ ಹೇಗೆ ಲಕ್ಷಾಂತರ ಪ್ರಾಣಿಗಳೂ ಪಕ್ಷಿಗಳೂ ಮನುಷ್ಯರೂ ಬಾಳಿ ಬದುಕುವಂತೆ, ಶ್ರೀ ಗಣಪತಿ ಸಚ್ಚಿದಾನಂದ ಶ್ರೀಗಳ ಅಸ್ತಿತ್ವವೇ ನೂರಾರು ಕಲಾವಿದರ, ಸಹಸ್ರಾರು ವಿದ್ವಾಂಸರ ವಿಕಾಸಕ್ಕೆ ಮುಖ್ಯ ಕಾರಣವಾಗಿದೆ.

ಶ್ರೀ ಗಣಪತಿ ಸಚ್ಚಿದಾನಂದಾಶ್ರಮ ದ್ವಾರದಿಂದಲೇ ನಮ್ಮ ಮನೋಭಾವ ಸ್ವಾರ್ಥದ ಸಂಕೋಲೆಯನ್ನು ಕಳಚಿ ದಿವ್ಯ ಲೋಕದ ಏಕಾತ್ಮತೆಯನ್ನು ಸವಿಯತೊಡಗುತ್ತದೆ. ಆಶ್ರಮದಲ್ಲಿ ಪಕ್ಷಿಗಳ ಕಲರವ ವೇದಧ್ವನಿಯೊಡನೆ ಸಂಗಮಿಸುತ್ತದೆ. ಆಶ್ರಮ ಧೇನುಗಳ ಅಂಬಾರವ ಮಂತ್ರ ಘೋಷದೊಡನೆ ಸೇರುತ್ತದೆ. ಅಲ್ಲಿ ಅಧ್ಯಯನ ಮಾಡುವ ನಿರ್ಮಲ ಹೃದಯದ ವಟುಗಳ ನೋಟ ಕಲಿಯುಗದ ನಮ್ಮನ್ನು ಕೃತಯುಗಕ್ಕೊಯ್ಯುತ್ತದೆ. ಅಧ್ಯಾಪಕರ ಗಂಭೀರ ಕಂಠದ ಉದಾತ್ತಾನುದಾತ್ತಸ್ವರಿತಗಳ ಉಚ್ಚಾರಣೆ ವಶಿಷ್ಠ–ವಿಶ್ವಾಮಿತ್ರ–ವಾಮದೇವರೆಂಬ ಮಹರ್ಷಿಗಳ ನೆನಪನ್ನು ತರುತ್ತದೆ. ತರ್ಕ–ಮೀಮಾಂಸಾ– ವ್ಯಾಕರಣ–ವೇದಾಂತ ಶಾಸ್ತ್ರಗಳಲ್ಲಿ ನಡೆಯುವ ಚರ್ಚೆಗಳು ಮಾಹಿಷ್ಮತೀ, ವಾರಾಣಾಸೀ, ಉಜ್ಜಯಿನೀ ನಗರಗಳಲ್ಲಿ ನಡೆಯುತ್ತಿದ್ದ ವಿದ್ವತ್ಸಂಸತ್ತುಗಳಂತಿರುತ್ತವೆ.

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮಿಗಳಿಗೆ ಸಾಮವೇದದಲ್ಲಿರುವ ಶ್ರದ್ಧೆ ಪ್ರೀತಿಗಳೇ ಶಾಸ್ತ್ರೀಯ ಸಂಗೀತದಲ್ಲೂ ಇವೆ. ಖ್ಯಾತ ನಾಮರಾದ ದೇಶ–ವಿದೇಶಗಳ ಕಲಾವಿದರು ಈ ಆಶ್ರಮದಲ್ಲಿ ತಮ್ಮ ಪ್ರಾವೀಣ್ಯವನ್ನು ಮೆರೆಸಿದ್ದಾರೆ. ವೇದಗಳ ಘನಪಾಠಕ್ಕೆ ಸಂದ ಸಮ್ಮಾನ ಇಲ್ಲಿ ಸಂಗೀತಕ್ಕೂ ಸಂದಿದೆ. ಜನಪದ ಕಲಾವಿದರೂ ಇಲ್ಲಿ ಸಮ್ಮಾನಿತರಾಗಿದ್ದಾರೆ. ವೇದಗಳ ವಿದ್ವಾಂಸರಿಗೆ **ವೇದನಿಧಿ** ಎಂಬ ಬಿರುದನ್ನೂ, ಸಂಗೀತ ವಿದ್ವಾಂಸರಿಗೆ **ನಾದನಿಧಿ** ಎಂಬ ಬಿರುದನ್ನೂ ನೀಡಿ ಈ ಆಶ್ರಮವು ಗೌರವಿಸಿದೆ.

ಭಗವದ್ಗೀತೆ ಶ್ರೀಗಳ ಪ್ರಿಯಗ್ರಂಥ. ಅದನ್ನು



ಕಂಠಪಾಠ ಮಾಡಿದ ವಿದ್ಯಾರ್ಥಿಗಳಿಗೆ ಪದಕಗಳನ್ನೂ, ಬಹುಮಾನಗಳನ್ನೂ ಕೊಟ್ಟು ಪ್ರೋತ್ಸಾಹಿಸುತ್ತಿದ್ದಾರೆ. ಭಗವದ್ಗೀತೆಯ ಪರೀಕ್ಷೆಗಳು ನಿಯತವಾಗಿ ಸಚ್ಚಿದಾನಂದಾಶ್ರಮದಲ್ಲಿ ನಡೆಯುತ್ತಿವೆ. ಇದು ಮುಂದುವರಿದು ಭಗವದ್ಗೀತಾ ಭಾಷ್ಯದ ಸಂಪೂರ್ಣಾಧ್ಯಯನವನ್ನು ಮಾಡುವಂತಾಗಲಿ ಎಂಬುದು ಮಹಾ ಸ್ವಾಮಿಗಳ ಆಶಯವಾಗಿದೆ.

ಎಂಬತ್ತನೆಯ ಜನ್ಮ ದಿನೋತ್ಸವ

ಈ ವರ್ಷ (2022) ಶ್ರೀ ಗಣಪತಿ ಸಚ್ಚಿದಾನಂದ ಮಹಾಸ್ವಾಮಿಗಳ ಎಂಬತ್ತನೆಯ ಜನ್ಮ ದಿನೋತ್ಸವವನ್ನು ಅದ್ಧೂರಿಯಿಂದ ಆಚರಿಸಲಾಗುತ್ತಿದೆ. ರಾಜ್ಯದ ಮುಖ್ಯಮಂತ್ರಿಗಳು, ಸಚಿವರು, ಹರಿಯಾಣ ರಾಜ್ಯದ ರಾಜ್ಯಪಾಲರು ಭಾಗವಹಿಸುತ್ತಿದ್ದಾರೆ. ಮೇ ತಿಂಗಳಿನ ಕೊನೆಯ ವಾರದಲ್ಲಿ ವೇದಶ್ರವಣ, ಸಂಗೀತಾಕರ್ಣನ ಇವೆಲ್ಲ ಸಂಸ್ಕೃತಿ ಪ್ರಿಯರಿಗೆ ಲಭ್ಯ. ದೇಶದ ನಾನಾ ಭಾಗಗಳಿಂದ ಬಂದ ನೂರಾರು ವಿದ್ವಾಂಸರನ್ನು ಕಾಣುವ ಭಾಗ್ಯ. ವಿವಿಧ ಹೋಮಗಳು, ಲೋಕಕಲ್ಯಾಣಕ್ಕಾಗಿ ಪೂರ್ಣಾಹುತಿ, ವಿದ್ಯೆಯ ಪ್ರೋತ್ಸಾಹಕ್ಕಾಗಿ ವಿದ್ವತ್ ಸಮ್ಮಾನ. ದೇಶದ ನಾನಾ ಮಠಗಳ ಯತಿವರ್ಯರ ಆಗಮನ ಮತ್ತು ಸಮಾಗಮ, ವಿಚಾರ ಮಂಥನ. ಮಹಾಮಾತೆ ಜಯಲಕ್ಷ್ಮೀ ಪುರಸ್ಕಾರಗಳ ವಿತರಣೆ ಇವೆಲ್ಲ ಸಂಸ್ಕೃತಿಯ ಮತ್ತು ಧರ್ಮದ ವೃದ್ಧಿಗಾಗಿ. ಮಹಾಸ್ವಾಮಿಗಳು ಪ್ರಪಂಚದ ನಾನಾ ಮೂಲೆಗಳಿಂದ ಬಂದ ಭಕ್ತರನ್ನು ಅನುಗ್ರಹಿಸಿ ಅಧ್ಯಾತ್ಮ ಮಾರ್ಗದರ್ಶನವನ್ನು ಮಾಡುವ ದೃಶ್ಯ ಚಿರಸ್ಮರಣೀಯ.

> "ಭಗವದ್ಗೀತೆ ಶ್ರೀಗಳ ಪ್ರಿಯಗ್ರಂಥ. ಅದನ್ನು ಕಂಠಪಾಠ ಮಾಡಿದ ವಿದ್ಯಾರ್ಥಿಗಳಿಗೆ ಪದಕಗಳನ್ನೂ, ಬಹುಮಾನಗಳನ್ನೂ ಕೊಟ್ಟು ಪ್ರೋತ್ಸಾಹಿಸುತ್ತಿದ್ದಾರೆ. ಭಗವದ್ಗೀತೆಯ ಪರೀಕ್ಷೆಗಳು ನಿಯತವಾಗಿ ಸಚ್ಚಿದಾನಂದಾಶ್ರಮದಲ್ಲಿ ನಡೆಯುತ್ತಿವೆ. ಇದು ಮುಂದುವರಿದು ಭಗವದ್ಗೀತಾ ಭಾಷ್ಯದ ಸಂಪೂರ್ಣಾಧ್ಯಯನವನ್ನು ಮಾಡುವಂತಾಗಲಿ ಎಂಬುದು ಮಹಾ ಸ್ವಾಮಿಗಳ ಆಶಯವಾಗಿದೆ.

ಈ ಶುಭ ಸಮಾರಂಭದಲ್ಲಿ ಮೇ ಇಪ್ಪತ್ತಾರನೆಯ ತಾರೀಖು (26.5.2022) ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮಿಗಳು ರಚಿಸಿರುವ ಗೀತಾಸ್ವರ ಪ್ರಸ್ತಾರ ಎಂಬ ಭಗವದ್ಗೀತೆಯ ವಿಸ್ತೃತ ವ್ಯಾಖ್ಯಾನವನ್ನೂ, ಇನ್ನೊಂದು ಸಂಕ್ಷಿಪ್ತ ವಿವರಣೆಯನ್ನೂ ಮತ್ತು ಪೂಜ್ಯರ ಎಂಬತ್ತು ಭಜನೆಗಳ ನ್ನೊಳಗೊಂಡಿರುವ ಕೀರ್ತನ ಚಂದ್ರಿಕಾ ಎಂಬ ಆಲ್ಬಂ ಅನ್ನೂ ಲೋಕಾರ್ಪಣೆಗೊಳಿಸಲಾಗುವುದು.

ಶ್ರೀಬಾಲಸ್ವಾಮಿಗಳು

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮಿಗಳ ಅವಧೂತ ದತ್ತಪೀಠದ ಉತ್ತರಾಧಿಕಾರಿಗಳಾಗಿರುವ ಶ್ರೀ ದತ್ತ ವಿಜಯಾನಂದ ಸ್ವಾಮಿಗಳು ವೇದಶಾಸ್ತ್ರಗಳಲ್ಲಿ ಅಪಾರ ಪಾಂಡಿತ್ಯವನ್ನು ಗಳಿಸಿರುವ ಘನ ವಿದ್ವಾಂಸರು. ಬಹುಭಾಷಾವಿದರಾದ ಶ್ರೀದತ್ತ ವಿಜಯಾನಂದರು ದೇಶ ಭಾಷೆಗಳಲ್ಲೂ ದೇವ ಭಾಷೆ ಸಂಸ್ಕೃತದಲ್ಲೂ ನಿರ್ದೋಷವಾಗಿ, ನಿರರ್ಗಳವಾಗಿ ಮಾತನಾಡಬಲ್ಲ ಶ್ರೇಷ್ಠ ವಾಗ್ಮಿಗಳು. ಶ್ರೀ ದತ್ತ ವಿಜಯಾನಂದ ತೀರ್ಥರ ಉಪನ್ಯಾಸವನ್ನು ಕೇಳುವುದೆಂದರೆ ಉತ್ತಮ ಶಾಸ್ತ್ರೀಯ ಸಂಗೀತ ಕಛೇರಿಯನ್ನು ಕೇಳಿದಂತೆ.

ಜ್ಞಾನಭಕ್ತಿ ಕರ್ಮಯೋಗಗಳ ಸಂಗಮ

ಭಗವದ್ಗೀತೆಯಲ್ಲಿ ಬೋಧಿಸಲಾಗಿರುವ ಜ್ಞಾನಯೋಗ, ಭಕ್ತಿಯೋಗ, ಕರ್ಮಯೋಗ ಎಂಬ ಯೋಗತ್ರಯದ ಸಂಗಮವನ್ನು ಸಮನ್ವಯವನ್ನೂ ಶ್ರೀ ಗಣಪತಿ ಸಚ್ಚಿದಾನಂದಾಶ್ರಮದಲ್ಲಿ ಕಾಣುತ್ತೇವೆ. ವೇದಶಾಸ್ತ್ರಗಳ ಅಧ್ಯಯನದಲ್ಲಿ ಜ್ಞಾನ, ಶ್ರೀದತ್ತ–ವೆಂಕಟೇಶ್ವರ–ಆಂಜನೇಯ ಮುಂತಾದ ದೇವಾಲಯ ಸಮುಚ್ಚಯದಲ್ಲಿ ಭಕ್ತಿ, ಕಾರ್ಯಾಲಯ, ಅತಿಥಿಗಳ ಆರಾಧನೆಯ ಚಟುವಟಿಕೆಗಳಲ್ಲಿ ಮತ್ತು ಗ್ರಂಥ ಪ್ರಕಟಣೆಯಲ್ಲಿ ಕರ್ಮಯೋಗ. ಹೀಗೆ ಮುಪ್ಪುರಿಗೊಂಡ ಅಧ್ಯಾತ್ಮ ಸಾಧನೆಯ ಕೇಂದ್ರವಾಗಿರುವ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ ಜಿಜ್ಞಾಸು ಗಳನ್ನೂ ಮುಮುಕ್ಷುಗಳನ್ನೂ ಸೂಜಿಗಲ್ಲಿನಂತೆ ಆಕರ್ಷಿಸುತ್ತಿರುವುದರಲ್ಲಿ ಆಶ್ಚರ್ಯವೇನಿಲ್ಲ. ಪುಷ್ಪ ಭರಿತವಾಗಿ ಪರಿಮಳವನ್ನು ಸುತ್ತಲೂ ಚೆಲ್ಲುತ್ತಿರುವ ವೃಕ್ಷವು ಭೃಂಗಗಳನ್ನು ತನ್ನತ್ತ ಸೆಳೆ ಯುವುದು ಸ್ವಾಭಾವಿಕವಲ್ಲವೆ?

"ಯಥಾ ಸಂಪುಷ್ಪಿತಸ್ಯ ವೃಕ್ಷಸ್ಯ **ದೂರಾದ್ಗಂಧೋ ವಾತಿ ಏವಂ ಪುಣ್ಯಸ್ಯ ಕರ್ಮಣೋ ದೂರಾದ್ ಗಂಧೋವಾತಿ"**

ಎಂಬ ಮಾತಿಗೆ ಮೈಸೂರಿನ ಅವಧೂತ ದತ್ತಪೀಠವು ದೃಷ್ಟಾಂತ. ಇಲ್ಲಿರುವ ನಾದಮಂಟಪ ಅದ್ಭುತವಾದ ಅನೇಕ ಕಾರ್ಯಕ್ರಮಗಳ ತಾಣವಾಗಿದೆ. **ನವೋ ನವೋ ಭವತಿ ಜಾಯಮಾನೋ** ಎಂಬ ವೇದವಾಕ್ಯವನ್ನು ಅನುಸರಿಸಿ ನವೀಕೃತವಾದ ನಾದಮಂಟಪದ ಲೋಕಾರ್ಪಣೆ ಈಗ ಆಗುತ್ತಿರುವುದು ಸಂಸ್ಕೃತಿ ಪ್ರಿಯರಿಗೆ ಆನಂದವನ್ನು ಕೊಡುವ ವಿಷಯ.

ನಮಿಸೋಣ ಬನ್ನಿ ಪೂಜ್ಯರ
ಅಡಿದಾವರೆಗಳಿಗೆ
ಶ್ರಮಿಸೋಣ ಕೂಡಿ ಸನಾತನ
ಸಂಸ್ಕೃತಿಯ ಉಳಿವಿಗೆ
ಗುರುವರ್ಯರಿಗಿಂದು ಎಂಬತ್ತು
ತುಂಬಿದ ಶುಭಗಳಿಗೆ
ಪರಿಪರಿಯ ಹರ್ಷದ ಹೊನಲು
ಭಕ್ತರ ಹೃದಯಗಳಿಗೆ
ಕಾಯೋಣ ನಮ್ಮ ಗುರುಗಳ
ಶತಮಾನಪೂರ್ತಿಯ ದಿನಕಾಗಿ
ಕಾಯೇನ ವಾಚಾ ಮನಸಾ
ಅವರಡಿಯ ಸೇವೆಯನು
ಮಾಡೋಣ.
ವೇದಶಾಸ್ತ್ರಕಲಾಃ ಸರ್ವಾಃ
ಯಸ್ಯಾನುಗ್ರಹತಃ ಸ್ಥಿರಾಃ
ತಂ ವಂದೇ ಸಚ್ಚಿದಾನಂದಂ
ಕೃತ್ಸ್ನಭಕ್ತೇಷ್ಟದಾಯಕಮ್ ॥

12 ವಾರಗಳ ನಂತರ ಜಿಪಂ, ತಾಪಂ ಚುನಾವಣೆ

ಸರ್ಕಾರಕ್ಕೆ ಹೈಕೋರ್ಟ್ ಗಡುವು

ಬೆಂಗಳೂರು, ಮೇ 24– ಸುಮಾರು ಒಂದೂವರೆ ವರ್ಷದಿಂದ ಖಾಲಿ ಇರುವ ಜಿಲ್ಲಾ ಮತ್ತು ತಾಲೂಕು ಪಂಚಾಯ್ತಿಗಳ ಚುನಾ ವಣೆಗೆ ಕಾಲ ಕೂಡಿ ಬಂದಂತೆ ಕಾಣುತ್ತಿದೆ.

ಸರ್ಕಾರ ಹಿಂದುಳಿದ ವರ್ಗಗಳಿಗೆ ಮೀಸಲು ಕಲ್ಪಿಸಿ ಚುನಾವಣೆ ನಡೆಸಲು ಮುಂದಾಗಿದೆ. ಈ ಮಧ್ಯೆ, ಹೈಕೋರ್ಟ್ ಮಂಗಳವಾರ ಜಿಲ್ಲಾ ಪಂಚಾಯ್ತಿ ಮತ್ತು ತಾಲೂಕು ಪಂಚಾಯ್ತಿಗಳಿಗೆ ಚುನಾವಣೆ ನಡೆಸಲು ಸರ್ಕಾರಕ್ಕೆ 12 ವಾರಗಳ ಗಡುವು ನೀಡಿದ್ದು, ಅಷ್ಟರಲ್ಲಿ ಕ್ಷೇತ್ರ ಪುನರ್ವಿಂಗಡಣೆ, ಮೀಸಲು ನೀಡಲು ಸಮಯಾವಕಾಶ ನೀಡಿದೆ. ಅಲ್ಲದೆ, ಯಾವುದೇ ಕಾರಣಕ್ಕೂ ಮತ್ತೆ ಹೆಚ್ಚಿನ ಕಾಲಾವಕಾಶ ಕೇಳದಂತೆ ತಾಕೀತು ಮಾಡಿದೆ.

ರಾಜ್ಯ ಚುನಾವಣಾ ಆಯೋಗ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಸಿಜೆ ರಿತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ಪೀಠ ಈ ಆದೇಶ ನೀಡಿತು. ರಾಜ್ಯ ಸರ್ಕಾರ ಹೈಕೋರ್ಟ್‌ಗೆ ಮೆಮೋ ಸಲ್ಲಿಸಿ, ಕ್ಷೇತ್ರ ಪುನರ್ವಿಂಗಡಣೆ, ಮೀಸಲಾತಿಗೆ 12 ವಾರ ಸಮಯಾವಕಾಶ ನೀಡಬೇಕು. ನಿವೃತ್ತ ನ್ಯಾಯಮೂರ್ತಿ ಡಾ.ಕೆ.ಭಕ್ತವತ್ಸಲ ನೇತೃತ್ವದಲ್ಲಿ ಹಿಂದುಳಿದ ವರ್ಗಗಳ ಮೀಸಲು ನಿಗದಿಗೆ ಆಯೋಗ ರಚಿಸಲಾಗಿದೆ ಅದರ ವರದಿಗಾಗಿ ಕಾಲಾವಕಾಶ ನೀಡಬೇಕು ಎಂದು ಕೋರಿದೆ. ಸರ್ಕಾರದ ಪರವಾದ ಮಂಡಿಸಿದ ಎಜಿ ಪ್ರಭುಲಿಂಗ್ ನಾವದಗಿ ಮನವಿ ಮಾಡಿ ಸಮಯಾವಕಾಶ ಕೋರಿದರು. ಆಯೋಗದ ಪರ ಹಿರಿಯ ವಕೀಲ ಕೆ.ಎನ್.ಫಣೀಂದ್ರ ವಾದ ಮಂಡಿಸಿ 12 ವಾರಕ್ಕಿಂತ ಹೆಚ್ಚಿನ ಕಾಲಾವಕಾಶ ನೀಡ ದಂತೆ ಮನವಿ ಮಾಡಿದರು. ಕೊನೆಗೆ ಸರ್ಕಾರದ ಮನವಿಗೆ ರಾಜ್ಯ ಚುನಾವಣಾ ಆಯೋಗ ಒಪ್ಪಿಗೆ ನೀಡಿತು. ಹಾಗಾಗಿ ನ್ಯಾಯಾಲಯ ಅಂತಿಮವಾಗಿ 12 ವಾರ ಕಾಲಾವಕಾಶ ನೀಡಿ ವಿಚಾರಣೆಯನ್ನು ಮುಂದೂಡಿತು. ಆಯೋಗದ ಮನವಿ ಏನು?

ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆ ಸಂಬಂಧ ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ. ಅದರಂತೆ, ರಾಜ್ಯದಲ್ಲೂ ಜಿಲ್ಲಾ ಹಾಗೂ ತಾಲೂಕು ಪಂಚಾಯ್ತಿ ಚುನಾವಣೆ ನಡೆಸಬೇಕಾಗಿದೆ. ಈಗಾಗಲೇ ಚುನಾವಣೆ ಸಾಕಷ್ಟು ವಿಳಂಬವಾಗಿದೆ. ಈ ಕುರಿತ ಚುನಾವಣಾ ಆಯೋಗದ ಅರ್ಜಿ ವಿಚಾರಣಾ ಹಂತದಲ್ಲಿದೆ. ಸುಪ್ರೀಂಕೋರ್ಟ್ ತೀರ್ಪಿನಿಂದ ತುರ್ತು ಸ್ಥಿತಿ ಎದುರಾಗಿದ್ದು, ಅದಕ್ಕಾಗಿ ಮೆಮೋ ಸಲ್ಲಿಸಲಾಗಿದೆ ಎಂದು ಹೇಳಿತ್ತು.

ರಾಜ್ಯ ಚುನಾವಣಾ ಆಯೋಗ ಕಳೆದ ವರ್ಷ ಏಪ್ರಿಲ್, ಮೇ ಮತ್ತು ಜೂನ್ ತಿಂಗಳಲ್ಲಿ ಅವಧಿ ಪೂರ್ಣಗೊಂಡ ರಾಜ್ಯದ ಜಿ.ಪಂ ಹಾಗೂ ತಾ.ಪಂಗಳಿಗೆ ಚುನಾವಣೆ ನಡೆಸಲು ಸಿದ್ಧತೆ ಆರಂಭಿಸಿತ್ತು. ಅದಕ್ಕಾಗಿ ಚುನಾವಣಾ ಆಯೋಗ ಕ್ಷೇತ್ರ ಪುನರ್ ವಿಂಗಡಣೆ ಮಾಡಿ ಮತದಾರರ ಅಂತಿಮ ಪಟ್ಟಿಯನ್ನೂ ಸಹ ಪ್ರಕಟ ಮಾಡಿತ್ತು ಹಾಗೂ ಮೀಸಲು ನಿಗದಿಯ ಕರಡು ಸಹ ಪ್ರಕಟಿಸಲಾಗಿತ್ತು. ಇನ್ನೇನು ದಿನಾಂಕ ಘೋಷಣೆ ಮಾಡಬೇಕೆನ್ನುವಷ್ಟರಲ್ಲಿ ಸರಕಾರ, ಕ್ಷೇತ್ರ ಪುನರ್ ವಿಂಗಡಣೆ ಮತ್ತು ಮೀಸಲು ಅಧಿಕಾರವನ್ನು ಚುನಾವಣಾ ಆಯೋಗದಿಂದ ಹಿಂಪಡೆದು ಪ್ರತ್ಯೇಕವಾಗಿ ಸೀಮಾ ನಿರ್ಣಯ ಆಯೋಗ ರಚಿಸಿತ್ತು. ಅದನ್ನು ಪ್ರಶ್ನಿಸಿ ಚುನಾವಣಾ ಆಯೋಗ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದೆ. ಆ ಅರ್ಜಿ ಇನ್ನೂ ವಿಚಾರಣಾ ಹಂತದಲ್ಲಿದೆ.

ಇಂದು ಭಾರತ್ ಬಂದ್

ಬೆಂಗಳೂರು, ಮೇ 24– ಅಖಿಲ ಭಾರತ ಹಿಂದುಳಿದ ಮತ್ತು ಅಲ್ಪಸಂಖ್ಯಾತ ಸಮುದಾಯಗಳ ನೌಕರರ ಒಕ್ಕೂಟ (BAMCEF) ಮೇ 25 ರಂದು ಭಾರತ್ ಬಂದ್‌ಗೆ ಕರೆ ನೀಡಿದೆ.

ಇತರೆ ಹಿಂದುಳಿದ ವರ್ಗಗಳ (ಒಬಿಸಿ) ಜಾತಿ ಆಧಾರಿತ ಜನಗಣತಿಯನ್ನು ಕೇಂದ್ರ ಸರ್ಕಾರ ನಡೆಸದಿರುವುದನ್ನು ವಿರೋಧಿಸಿ ಫೆಡರೇಶನ್ ಕ್ರಮಕ್ಕೆ ಒತ್ತಾಯಿಸುತ್ತಿದೆ. ಇದರ ಜೊತೆಗೆ, ಅವರು ಚುನಾವಣಾ ಸಮಯದಲ್ಲಿ ಇವಿಎಂ ಬಳಕೆ ಮತ್ತು ಖಾಸಗಿ ವಲಯಗಳಲ್ಲಿ ಎಸ್‌ಸಿ/ಎಸ್‌ಟಿ/ಒಬಿಸಿಗೆ ಮೀಸಲಾತಿ ವಿಚಾರದ ವಿರುದ್ಧವೂ ಪ್ರತಿಭಟನೆ ನಡೆಸುತ್ತಿದ್ದಾರೆ.

ಬಂದ್‌ಗೆ ರಾಷ್ಟ್ರೀಯ ಪರಿವರ್ತನಾ ಮೋರ್ಚಾ, ಭಾರತ ಮುಕ್ತಿ ಮೋರ್ಚಾ, ಬಹುಜನ ಕ್ರಾಂತಿ ಮೋರ್ಚಾ ಮತ್ತು ಅದರ ಎಲ್ಲಾ ಅಂಗಸಂಸ್ಥೆಗಳೊಂದಿಗೆ ಬಹುಜನ ಕ್ರಾಂತಿ ಮೋರ್ಚಾದ ರಾಷ್ಟ್ರೀಯ ಸಂಚಾಲಕ ವಾಮನ್ ಮೇಶ್ರಮ್‌ನಿಂದ ಬೆಂಬಲ ವ್ಯಕ್ತವಾಗಿದೆ.

ಪ್ರತಿಭಟನಾಕಾರರ ಬೇಡಿಕೆಗಳು ಹೀಗಿವೆ:

ಚುನಾವಣೆಯಲ್ಲಿ ಇವಿಎಂ ಬಳಕೆ ಇಲ್ಲ. ಜಾತಿ ಆಧಾರಿತ ಜನಗಣತಿ. ಖಾಸಗಿ ವಲಯದಲ್ಲಿ SC/ST/OBC ಮೀಸಲಾತಿ. ರೈತರಿಗೆ ಖಾತರಿ MSP. NRC/CAA/NPR ಅನುಷ್ಠಾನವಿಲ್ಲ. ಹಳೆಯ ಪಿಂಚಣಿ ಯೋಜನೆ ಪುನರಾರಂಭ.



ಮೈಸೂರಿನ ಅವಧೂತ ದತ್ತ ಪೀಠದ ಶ್ರೀ ಗಣಪತಿ ಸಚ್ಚಿದಾನಂದ ಶ್ರೀಗಳ 80ನೇ ಜನ್ಮದಿನದ ಹಿನ್ನೆಲೆಯಲ್ಲಿ ಆಶ್ರಮಕ್ಕೆ ಭೇಟಿ ನೀಡಿ, ಶ್ರೀಗಳನ್ನು ಭಕ್ತಿಪೂರ್ವಕವಾಗಿ ಅಭಿನಂದಿಸಿ ಶುಭಾಶಯ ಕೋರಿದ ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಇದೇ ವೇಳೆ ಶ್ರೀಗಳಿಂದ ಆಶೀರ್ವಾದವನ್ನು ಪಡೆದರು.



ಭೂಮಿಪುತ್ರ ರೈತಮಿತ್ರ ಹಾಗೂ ಕರ್ನಾಟಕ ರಾಜ್ಯ ರೈತ ಕಲ್ಯಾಣ ಸಂಘದ ಮಣ್ಣು ಉಳಿಸಿ, ರಕ್ಷಿಸಿ ಅಭಿಯಾನಕ್ಕೆ ಸಹಕಾರ ಸಚಿವರು ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಶಿಕ್ಷಣ ಸಚಿವ ನಾಗೇಶ್ ಬೆಂಬಲ ಸೂಚಿಸಿ, ಭಿತ್ತಿ ಪತ್ರವನ್ನು ಬಿಡುಗಡೆ ಮಾಡಿ ಶುಭ ಕೋರಿದರು. ಚಿತ್ರದಲ್ಲಿ ಸಂಘದ ರಾಜ್ಯಾಧ್ಯಕ್ಷ ಚಂದನ್ ಗೌಡ, ಸ್ವಾಮಿಗೌಡ, ಮೂರ್ತಿ ಸೇರಿದಂತೆ ಇತರ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಫೈನಲ್ಸ್‌ಗೆ ಲಗ್ಗೆ ಇಟ್ಟ ಗುಜರಾತ್ ಟೈಟನ್ಸ್



ಇಂದು ಎಲಿಮಿನೇಟರ್ ಪಂದ್ಯ (ಮೇ 25)
ಆರ್‌ಸಿಬಿ- ಲಕ್ನೋ
ಸಮಯ: ಸಂಜೆ 7.30ಕ್ಕೆ, ಈಡನ್‌ಗಾರ್ಡನ್ ಮೈದಾನ

ಕೋಲ್ಕತ್ತಾ, ಮೇ 24– ಇದೇ ಮೊದಲ ಬಾರಿಗೆ ಐಪಿಎಲ್‌ಗೆ ಪಾದಾರ್ಪಣೆ ಮಾಡಿದ ಆವೃತ್ತಿಯಲ್ಲಿಯೇ ಗುಜರಾತ್ ಟೈಟನ್ಸ್ ಫೈನಲ್ ಪ್ರವೇಶಿಸಿದೆ.

ಇಲ್ಲಿನ ಈಡನ್‌ಗಾರ್ಡನ್ಸ್ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಮೊದಲ ಕ್ವಾಲಿಫೈಯರ್ ಪಂದ್ಯದಲ್ಲಿ ರಾಜಸ್ಥಾನ್ ರಾಯಲ್ಸ್ ವಿರುದ್ಧ ಹಾರ್ದಿಕ್ ಪಾಂಡ್ಯ ಪಡೆ 7 ವಿಕೆಟ್‌ಗಳ ಭರ್ಜರಿ ಗೆಲುವು ದಾಖಲಿಸಿದೆ.

ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ರಾಜಸ್ಥಾನ್ ನಿಗದಿತ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 188ರನ್‌ಗಳ ಸವಾಲಿನ ಮೊತ್ತ ಪೇರಿಸಿತು. ತಂಡದ ಪರ ಜೋಸ್‌ಬಟ್ಲರ್ 89, ಸಂಜುಸ್ಯಾಮನ್ಸ್ 47, ದೇವದತ್ ಪಡಿಕ್ಕಲ್ 28ರನ್‌ಗಳಿಸಿದರು. ಗುಜರಾತ್ ಪರ ಮಹಮದ್ ಶಮಿ, ಯಶ್‌ಧಯಾಳ್, ಸಾಯಿಕಿಶೋರ್ ಹಾಗೂ ಹಾರ್ದಿಕ್‌ಪಾಂಡ್ಯ, ತಲಾ ಒಂದೊಂದು ವಿಕೆಟ್ ಪಡೆದರು.

ನಂತರ ಗುರಿ ಬೆನ್ನತ್ತಿದ ಗುಜರಾತ್ 19.3 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ 191ರನ್ ಗಳಿಸುವ ಮೂಲಕ ಗೆಲುವಿನ ನಗೆ ಬೀರಿತು. ತಂಡದ ಪರ ಶುಭಮನ್ ಗಿಲ್, ಮ್ಯಾಥ್ಯೂ ವೇಡ್ ತಲಾ 35, ನಾಯಕ ಹಾರ್ದಿಕ್ ಪಾಂಡ್ಯ 40, ಡೇವಿಡ್ ಮಿಲ್ಲರ್ 68ರನ್ ಗಳಿಸಿದರು. ರಾಜಸ್ಥಾನ್ ಪರ ಟ್ರೆಂಟ್‌ಬೌಲ್ಟ್, ಮೇಕಾಯ್ ತಲಾ ಒಂದೊಂದು ವಿಕೆಟ್ ಪಡೆದರು. ಉತ್ತಮ ಬ್ಯಾಟಿಂಗ್ ಮಾಡಿದ ಡೇವಿಡ್ ಮಿಲ್ಲರ್ ಪಂದ್ಯ ಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಗೂಗಲ್ ಪೇ, ಫೋನ್ ಪೇಗಳಿಗೆ ಹಣ ಕಳಿಸುವುದಾಗಿ ಅಪಪ್ರಚಾರ

ಸೈಬರ್ ಠಾಣೆಗೆ ಮೈ.ವಿ. ರವಿಶಂಕರ್ ದೂರು

ಮೈಸೂರು, ಮೇ 24(ಆರ್‌ಕೆ)– ನನ್ನ ಅಭಿಮಾನಿ ಬಳಗದ ಹೆಸರಿನಲ್ಲಿ ಗೂಗಲ್ ಪೇ, ಫೋನ್ ಪೇ ಮೂಲಕ ಹಣ ಕಳುಹಿಸಲಾಗುವುದು ಎಂಬ ಸಂದೇಶದ ಮೂಲಕ ಅಪಪ್ರಚಾರ ಮಾಡಲಾಗುತ್ತಿದೆ ಎಂದು ದಕ್ಷಿಣ ಪದವೀಧರರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮೈ.ವಿ. ರವಿಶಂಕರ್ ಸೈಬರ್ ಕ್ರೈಂ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

'ಮೈ.ವಿ. ರವಿಶಂಕರ್ ಅಭಿಮಾನಿ ಬಳಗ' ಸಂದೇಶ ಹಲವರಿಗೆ ಬರುತ್ತಿದ್ದು, ಅದರಲ್ಲಿ ನನ್ನ ಭಾವಚಿತ್ರ ಬಳಸಿ 'ಸ್ನೇಹಿತರೇ, ನಿಮ್ಮ ಗೂಗಲ್ ಪೇ ಮತ್ತು ಫೋನ್ ಪೇ ನಂಬರ್ ಕಳುಹಿಸಿ ಎಂಬ ಸಂದೇಶದ ಲಿಂಕ್ ಓಪನ್ ಮಾಡಿದರೆ 'ರವಿಶಂಕರ್‌ಗೆ ಓಟು, ನಿಮ್ಮ ಅಕೌಂಟ್‌ಗೆ ಪೇಮೆಂಟ್' ಎಂದು ಬರೆದಿರುವುದು ತಿಳಿಯುತ್ತದೆ ಎಂದು ರವಿಶಂಕರ್ ದೂರಿನಲ್ಲಿ ತಿಳಿಸಿದ್ದಾರೆ. 8269908222 ಮೊಬೈಲ್ ಸಂಖ್ಯೆಯಿಂದ ಹಲವರಿಗೆ ಈ ಸಂದೇಶ ರವಾನೆ ಯಾಗುತ್ತಿದ್ದು, ನನ್ನ ಮತ್ತು ಪಕ್ಷದ ಹೆಸರಿಗೆ ಕಳಂಕ ತರುವ ಉದ್ದೇಶದಿಂದ ಅಪಪ್ರಚಾರ ಮಾಡುತ್ತಿರುವ ಕಿಡಿಗೇಡಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವಂತೆ ಅವರು ಕೋರಿದ್ದಾರೆ.

ಕೋನಸೀಮಾ ಜಿಲ್ಲೆಯ ಮರುನಾಮಕರಣ ವಿಚಾರ

ಅಮಲಾಪುರಂನಲ್ಲಿ ಭುಗಿಲೆದ್ದ ಹಿಂಸಾಚಾರ

ಆಂಧ್ರ ಸಾರಿಗೆ ಸಚಿವರ ಮನೆಗೆ ಬೆಂಕಿ, 20 ಪೊಲೀಸರಿಗೆ ಗಾಯ



ಹೈದರಾಬಾದ್: ಕೋನಸೀಮಾ ಜಿಲ್ಲೆಯ ಮರುನಾಮಕರಣ ವಿಚಾರದಲ್ಲಿ ಹಿಂಸಾಚಾರ ಭುಗಿಲೆದ್ದಿದ್ದು, ಆಂಧ್ರ ಪ್ರದೇಶದ ಸಾರಿಗೆ ಸಚಿವ ಪಿನಿಪೆ ವಿಶ್ವರೂಪು ಅವರ ಮನೆಗೆ ಮಂಗಳವಾರ ಕೆಲವು ಪ್ರತಿಭಟನಾಕಾರರು ಬೆಂಕಿ ಹಚ್ಚಿದ್ದಾರೆ. ಹೊಸದಾಗಿ ರಚಿಸಲಾದ ಕೋನಸೀಮಾ ಜಿಲ್ಲೆಯನ್ನು ಬಿಆರ್ ಅಂಬೇಡ್ಕರ್ ಕೋನಸೀಮಾ ಜಿಲ್ಲೆ ಎಂದು ಮರುನಾಮಕರಣ ಮಾಡುವುದನ್ನು ವಿರೋಧಿಸಿ ಪ್ರತಿಭಟಿಸಿದ ಜನರ ಗುಂಪಿನ ಮೇಲೆ ಪೊಲೀಸರು ಲಾಠಿ ಚಾರ್ಜ್ ಮಾಡಿದ ನಂತರ ಆಂಧ್ರಪ್ರದೇಶದ ಅಮಲಾಪುರಂ ನಗರದಲ್ಲಿ ಹಿಂಸಾಚಾರ ಭುಗಿಲೆದ್ದಿತು.

ಹಿಂಸಾಚಾರದಲ್ಲಿ ಪ್ರತಿಭಟನೆ ನಡೆಸುತ್ತಿದ್ದ ಕೋನಸೀಮಾ ಸಾಧನಾ ಸಮಿತಿ ಸದಸ್ಯರು ಸಾರಿಗೆ ಸಚಿವ ಪಿನಿಪೆ ವಿಶ್ವರೂಪು ಅವರ ಮನೆಗೆ ಬೆಂಕಿ ಹಚ್ಚಿದ್ದು ಸಚಿವರು ಮತ್ತು ಅವರ ಕುಟುಂಬ ಸದಸ್ಯರನ್ನು ಪೊಲೀಸರು ಸುರಕ್ಷಿತವಾಗಿ ಸ್ಥಳಾಂತರಿಸಿದ್ದಾರೆ. ಇದಲ್ಲದೇ ಪೊಲೀಸ್ ವಾಹನ ಹಾಗೂ ಶಿಕ್ಷಣ ಸಂಸ್ಥೆಯ ಬಸ್‌ಗೂ ಪ್ರತಿಭಟನಾಕಾರರು ಬೆಂಕಿ ಹಚ್ಚಿದ್ದಾರೆ. ವರದಿಗಳ ಪ್ರಕಾರ, ಪ್ರತಿಭಟನಾಕಾರರು ಕಲ್ಲು ತೂರಾಟ ನಡೆಸಿದ್ದರಿಂದ 20ಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿ ಗಾಯಗೊಂಡಿದ್ದರು. ನಾವು ಘಟನೆಯ ಬಗ್ಗೆ ಕೂಲಂಕಷ ತನಿಖೆ ನಡೆಸುತ್ತೇವೆ. ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುತ್ತೇವೆ ಎಂದು ಗೃಹ ಸಚಿವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಹೊಸ ಕೋನಸೀಮಾ ಜಿಲ್ಲೆಯನ್ನು ಏಪ್ರಿಲ್ 4 ರಂದು ಪೂರ್ವ ಗೋದಾವರಿಯಿಂದ ರಚಿಸಲಾಗಿತ್ತು. ಇತ್ತೀಚೆಗಷ್ಟೇ ರಾಜ್ಯ ಸರ್ಕಾರ ಕೋನಸೀಮಾ ಜಿಲ್ಲೆಯನ್ನು ಬಿಆರ್ ಅಂಬೇಡ್ಕರ್ ಕೋನಸೀಮಾ ಜಿಲ್ಲೆ ಎಂದು ಮರುನಾಮಕರಣ ಮಾಡುವಂತೆ ಪೂರ್ವಭಾವಿ ಅಧಿಸೂಚನೆ ಹೊರಡಿಸಿದ್ದು, ಆಕ್ಷೇಪಣೆಗಳಿದ್ದಲ್ಲಿ ಜನರು ಆಕ್ಷೇಪಣೆಗಳನ್ನು ಸಲ್ಲಿಸಬಹುದು ಎಂದಿತ್ತು. ಕಳೆದ ವಾರ ಜಿಲ್ಲೆಯ ಮರುನಾಮಕರಣದ ಪ್ರಸ್ತಾಪದ ವಿರುದ್ಧ ಪ್ರತಿಭಟನೆಗಳ ಹಿನ್ನೆಲೆಯಲ್ಲಿ ಕೋನಸೀಮಾ ಜಿಲ್ಲೆಯಲ್ಲಿ ಸೆಕ್ಷನ್ 144 ವಿಧಿಸಲಾಗಿತ್ತು.

ಘರ್ಷಣೆಯಲ್ಲಿ ಪೊಲೀಸ್ ಸಿಬ್ಬಂದಿ ಸೇರಿದಂತೆ ಹಲವರು ಗಾಯಗೊಂಡಿದ್ದಾರೆ ಎಂದು ಕೋನಸೀಮಾ ಎಸ್ಪಿ ಕೆ.ಎಸ್.ಎಸ್.ವಿ. ಸುಬ್ಬಾ ರೆಡ್ಡಿ ಹೇಳಿದ್ದಾರೆ. ಘರ್ಷಣೆಯಲ್ಲಿ ಗಾಯಗೊಂಡ ಸಿಬ್ಬಂದಿಗಳ ನಿಖರವಾದ ಸಂಖ್ಯೆ ನಮಗೆ ತಿಳಿದಿಲ್ಲ. ಜಿಲ್ಲೆಯನ್ನು ಮರುನಾಮಕರಣ ಮಾಡುವ ಪ್ರಸ್ತಾವನೆಯ ಮೇಲೆ ವಿವಿಧ ವರ್ಗದ ಜನರು ಮತ್ತು ಗುಂಪುಗಳು ಆನ್‌ಲೈನ್ ಅಭಿಯಾನವನ್ನು ಪ್ರಾರಂಭಿಸಿದ ನಂತರ ಈ ಘರ್ಷಣೆ ಉಂಟಾಗಿದೆ ಎಂದು ಅವರು ಹೇಳಿರುವುದಾಗಿ ವರದಿಯಾಗಿದೆ.

ಟೆಂಡರ್‌ಗಳಲ್ಲಿ 1 ಪರ್ಸೆಂಟ್ ಕಮಿಷನ್; ಪಂಜಾಬ್ ಆರೋಗ್ಯ ಸಚಿವ ಸಿಂಗ್ಲಾ ಬಂಧನ



ಚಂಡೀಗಢ: ಪಂಜಾಬ್ ಆರೋಗ್ಯ ಸಚಿವ ವಿಜಯ್ ಸಿಂಗ್ಲಾ ಅವರ ಮೇಲೆ ಭ್ರಷ್ಟಾಚಾರದ ಆರೋಪ ಕೇಳಿ ಬಂದ ಕಾರಣ ಅವರನ್ನು ಸಚಿವ ಸ್ಥಾನದಿಂದ ಮಂಗಳವಾರ ವಜಾಗೊಳಿಸಲಾಗಿದೆ. ಇದರ ಬೆನ್ನಲ್ಲೇ ಸಿಂಗ್ಲಾ ಅವರನ್ನು ಪೊಲೀಸರು ಬಂಧಿಸಿದ್ದಾರೆ.

ಸಿಂಗ್ಲಾ ಅವರನ್ನು ಸಂಪುಟದಿಂದ ವಜಾಗೊಳಿಸಿರುವುದಾಗಿ ಮುಖ್ಯಮಂತ್ರಿ ಭಗವಂತ ಮಾನ್ ಅವರೇ ತಿಳಿಸಿದ್ದಾರೆ. ಎರಡು ತಿಂಗಳ ಹಿಂದೆಯಷ್ಟೇ ಪಂಜಾಬ್‌ನಲ್ಲಿ ಆಮ್ ಆದ್ಮಿ ಪಕ್ಷ (ಎಎಪಿ) ಸರ್ಕಾರ ರಚಿಸಿದೆ. ಮುಖ್ಯಮಂತ್ರಿ ಭಗವಂತ ಮಾನ್ ಅವರ ನಡೆಯನ್ನು ಶ್ಲಾಘಿಸಿರುವ ಎಎಪಿ ಮುಖ್ಯಸ್ಥ, ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್, ನೀವು ಕೈಗೊಂಡ ಕ್ರಮ ನನ್ನ ಕಣ್ಣಾಲಿಗಳನ್ನು ತೇವಗೊಳಿಸಿದವು. ಇಂದು ಇಡೀ ರಾಷ್ಟ್ರವು ಎಎಪಿ ಬಗ್ಗೆ ಹೆಮ್ಮೆ ಪಡುವಂತಾಗಿದೆ ಎಂದು ಟ್ವೀಟ್ ಮಾಡಿದ್ದಾರೆ. ಸಿಂಗ್ಲಾ ಅವರು ತಮ್ಮ ಇಲಾಖೆಯ ಟೆಂಡರ್‌ಗಳು ಮತ್ತು ಖರೀದಿಗಳಲ್ಲಿ ಶೇ.1ರಷ್ಟು ಕಮಿಷನ್‌ಗೆ ಬೇಡಿಕೆಯಿಡುತ್ತಿದ್ದಾರೆ ಎಂಬುದು ತಿಳಿದ ಕೂಡಲೇ, ಅವರನ್ನು ವಜಾಗೊಳಿಸುವ ನಿರ್ಧಾರ ತೆಗೆದುಕೊಳ್ಳಲಾಯಿತು. ಅಲ್ಲದೆ, ಸಿಂಗ್ಲಾ ವಿರುದ್ಧ ಪ್ರಕರಣ ದಾಖಲಿಸುವಂತೆಯೂ ಪೊಲೀಸರಿಗೆ ನಿರ್ದೇಶಿಸಲಾಯಿತು ಎಂದು ಮಾನ್ ವಿಡಿಯೋ ಸಂದೇಶದಲ್ಲಿ ತಿಳಿಸಿದ್ದಾರೆ.

ಕಾಂಗ್ರೆಸ್ ನಾಯಕ ಐವಾನ್ ಡಿ'ಸೋಜಾರನ್ನು ರಾಜ್ಯಸಭೆ ಸದಸ್ಯರಾಗಿ ಆಯ್ಕೆ ಮಾಡಿ

ಫೆಡರೇಷನ್ ಆಫ್ ಕ್ರಿಶ್ಚಿಯನ್ ಅಸೋಸಿಯೇಷನ್ ಒತ್ತಾಯ



ಮೈಸೂರು,ಮೇ 24(ಪಿಎಂ)– ರಾಜ್ಯದಲ್ಲಿ ಕ್ರೈಸ್ತ ಸಮುದಾಯದ ಪರ ಸದನದಲ್ಲಿ ಧ್ವನಿಯೆತ್ತುವವರು ಇಲ್ಲದಂತಾಗಿದೆ ಹೀಗಾಗಿ ರಾಜ್ಯಸಭೆಗೆ ಸಮುದಾಯದ ಮುಖಂಡರೂ ಆದ ಕಾಂಗ್ರೆಸ್‌ನ ಹಿರಿಯ ನಾಯಕ ಐವಾನ್ ಡಿ'ಸೋಜಾ ಅವರನ್ನು ಕಾಂಗ್ರೆಸ್ ಪಕ್ಷ ಆಯ್ಕೆ ಮಾಡಿ ಕಳುಹಿಸಿಕೊಡಬೇಕೆಂದು ಫೆಡರೇಷನ್ ಆಫ್ ಕ್ರಿಶ್ಚಿಯನ್ ಅಸೋಸಿಯೇಷನ್ ಮೈಸೂರು ಒತ್ತಾಯಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಫೆಡರೇಷನ್ ಅಧ್ಯಕ್ಷ ಜಾರ್ಜ್ ವಿಲಿಯಂ ಡಿ'ಸೋಜಾ, ಇತ್ತೀಚೆಗೆ ನಿಧನರಾದ ಕಾಂಗ್ರೆಸ್ ಹಿರಿಯ ನಾಯಕ ಆಸ್ಕರ್ ಫರ್ನಾಂಡಿಸ್ ಅವರು ಪ್ರತಿನಿಧಿಸುತ್ತಿದ್ದ ರಾಜ್ಯಸಭಾ ಸದಸ್ಯತ್ವ ಅವಧಿಯು ಮುಂದಿನ ಜೂನ್‌ನಲ್ಲಿ ಪೂರ್ಣಗೊಳ್ಳಲಿದೆ. ಅದನ್ನು ನಮ್ಮ ಸಮುದಾಯಕ್ಕೆ ಮುಂದುವರೆಸುವ ನಿಟ್ಟಿನಲ್ಲಿ ಐವಾನ್ ಡಿ'ಸೋಜಾ ಅವರಿಗೆ ಅವಕಾಶ ಕಲ್ಪಿಸಬೇಕು ಎಂದು ಆಗ್ರಹಿಸಿದರು.

ರಾಜ್ಯ ವಿಧಾನ ಪರಿಷತ್‌ನಲ್ಲಿ ಕ್ರೈಸ್ತ ಸಮುದಾಯದ ಯಾವುದೇ ಪ್ರತಿನಿಧಿಗಳು ಇಲ್ಲ. 2022ರ ಜೂನ್‌ನಲ್ಲಿ ಎರಡು ಸ್ಥಾನಗಳು ಕಾಂಗ್ರೆಸ್ ಪಕ್ಷಕ್ಕೆ ಲಭ್ಯವಾಗಲಿವೆ. ಅದರಲ್ಲಿ ಕನಿಷ್ಠ ಒಂದು ಸ್ಥಾನವನ್ನು ಕ್ರೈಸ್ತ ಸಮುದಾಯಕ್ಕೆ ನೀಡಬೇಕು ಎಂದು ಒತ್ತಾಯಿಸಿದರು.

ಮತಾಂತರ ಆರೋಪದ ನೆಪದಲ್ಲಿ ಕ್ರೈಸ್ತರ ಮೇಲೆ ಹಲ್ಲೆ ನಡೆಯುವ ಪ್ರಕರಣಗಳೂ ಇತ್ತೀಚೆಗೆ ಹೆಚ್ಚುತ್ತಿವೆ. ಹೀಗಾಗಿ ಇವುಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಪ್ರಧಾನಿ ನರೇಂದ್ರ ಮೋದಿ ಅವರು ನಗರಕ್ಕೆ ಆಗಮಿಸಿದಾಗ ಅವರಿಗೆ ಫೆಡರೇಷನ್ ವತಿಯಿಂದ ಮನವಿ ಸಲ್ಲಿಸಲಾಗುವುದು ಎಂದರು. ಫಾದರ್ ಕೆ.ಜಾನ್ಸನ್‌ಪಾಲ್, ಫೆಡರೇಷನ್ ಉಪಾಧ್ಯಕ್ಷ ಡಿನೋಲ್ಡ್ ಎಫ್.ನಿರ್ಮಾಣಿಕ್, ಕಾರ್ಯದರ್ಶಿ ಜೆ.ಎಂ.ಎನೋಷ್ ಗೋಷ್ಠಿಯಲ್ಲಿದ್ದರು.

ಕೆ. ಸೋಮಪ್ಪ ನಿಧನ



ಮೈಸೂರು, ಮೇ 24– ಮೈಸೂರು ಜಿಲ್ಲೆ, ಹೆಚ್.ಡಿ. ಕೋಟೆ ತಾಲೂಕಿನ ಆಲನಹಳ್ಳಿ ಗ್ರಾಮದ ನಿವೃತ್ತ ಮುಖ್ಯ ಶಿಕ್ಷಕರಾದ ಕೆ. ಸೋಮಪ್ಪ (80 ವರ್ಷ) ಅವರು ನಿನ್ನೆ (ಸೋಮವಾರ) ಮೃತರಾದರು. ಮೃತರು ಪತ್ನಿ ಶಿವಮ್ಮ, ಮಕ್ಕಳಾದ ಮಲ್ಲೇಶ್, ತ್ರಿವೇಣಿ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಇಂದು ಮಧ್ಯಾಹ್ನ ಆಲನಹಳ್ಳಿ ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಿಸಲಾಯಿತು.

ಭಕ್ತ ಕೋಟಿಗೆ ಮೋಕ್ಷ ಮಾರ್ಗ ತೋರುತ್ತಿರುವ ಸಚ್ಚಿದಾನಂದ ಶ್ರೀಗಳು

80ನೇ ಜನ್ಮ ದಿನೋತ್ಸವ ಕಾರ್ಯಕ್ರಮದಲ್ಲಿ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಅಭಿಮತ



ಮೈಸೂರು, ಮೇ 24(ಆರ್‌ಕೆಬಿ)– ಮೈಸೂರಿನ ದತ್ತಪೀಠದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರು ಭಕ್ತ ಕೋಟಿಗೆ ಭಕ್ತಿ ಸಂಪಾದನೆಯ ದಾರಿ ತೋರುತ್ತಿದ್ದಾರೆ. ಅವರಿಗೆ ಭಗವಂತನ ಕೃಪೆ ಸಿಗುವಂತೆ ಮಾಡುತ್ತಿದ್ದಾರೆ ಎಂದು ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ತಿಳಿಸಿದರು.

ಮೈಸೂರಿನ ದತ್ತಪೀಠ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ನಾದಮಂಟಪದಲ್ಲಿ ಶ್ರೀ ಗಣಪತಿ ಸಚ್ಚಿದಾನಂದ ಶ್ರೀಗಳ 80ನೇ ಜನ್ಮ ದಿನೋತ್ಸವದ 3ನೇ ದಿನದ ಕಾರ್ಯಕ್ರಮದಲ್ಲಿ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಗಣಪತಿ ಸಚ್ಚಿದಾನಂದ ಶ್ರೀಗಳದ್ದು ನರಸಿಂಹಸ್ವಾಮಿಯ ವ್ಯಕ್ತಿತ್ವ ಮಾನವ ಸ್ವರೂಪದ ದೈವ. ತಮ್ಮ ಆಶ್ರಮದಲ್ಲಿ ವೇದ, ಧ್ಯಾನ, ಶುಕವನ ಇತ್ಯಾದಿಗಳನ್ನು ಮಾಡಿ, ವಸುದೈವ ಕುಟುಂಬಕಂ ರೀತಿಯಲ್ಲಿ ಬದುಕು ನಡೆಸುತ್ತಿದ್ದಾರೆ. ಸಮಾಜದ ಎಲ್ಲರ ಯೋಗ ಕ್ಷೇಮ, ಆಧ್ಯಾತ್ಮಿಕ ಹಾಗೂ ಭೌತಿಕವಾಗಿ ನೋಡಿಕೊಳ್ಳುತ್ತಿದ್ದಾರೆ. ಅದರಲ್ಲೂ ವಿಶೇಷವಾಗಿ ಸಂಗೀತ ಕ್ಷೇತ್ರಕ್ಕೆ ಅಪಾರ ಸೇವೆ ಸಲ್ಲಿಸುತ್ತಿದ್ದಾರೆ. ಸಂಗೀತ ಜ್ಞಾನದಿಂದ ರೋಗಗಳನ್ನು ವಾಸಿ ಮಾಡುತ್ತಾರೆಂಬುದನ್ನು ಕೇಳಿದ್ದೇನೆ. ಧ್ಯಾನ ಶಕ್ತಿಯ ಜೊತೆಗೆ ಭಕ್ತಿಯ ಶಕ್ತಿಯೂ ಸೇರಿದೆ. ಭಕ್ತಿಯನ್ನು ಹೇಗೆ ಸಂಪಾದನೆ ಮಾಡಬೇಕು ಎಂಬುದನ್ನು ಹೇಳಿಕೊಡುತ್ತಿದ್ದಾರೆ. ಭಕ್ತರ ಮೇಲಿರುವ ಅವರ ಕಾರುಣ್ಯ ಬಹಳ ಮೇಲ್ಮಟ್ಟದಲ್ಲಿದೆ. ಭಗವಂತ ಅವರಿಗೆ ಸಂಪೂರ್ಣ ಆಯಸ್ಸು, ಸಾಮರ್ಥ್ಯ ನೀಡಲಿ ಎಂದು ಹಾರೈಸಿದರು.

ಕುಕ್ಕೆ ಸುಬ್ರಹ್ಮಣ್ಯ ಮಠದ ಶ್ರೀ ವಿದ್ಯಾಪ್ರಸನ್ನ ತೀರ್ಥ ಸ್ವಾಮೀಜಿ ಮಾತನಾಡಿ, ಮರ ಗಿಡಗಳು, ಪ್ರಾಣಿಗಳು ಮೇಲ್ಮಟ್ಟಕ್ಕೆ ಹೋಗುತ್ತಿವೆ. ಆದರೆ ಮನುಷ್ಯ ಮಾತ್ರ ಮೇಲ್ಮಟ್ಟಕ್ಕೆ ಹೋಗಲು ಸಾಧ್ಯವಿಲ್ಲ. ಮನುಷ್ಯನಿಗೆ ಕ್ರಿಯಾಶೀಲವಾದ ಕೈ ಬೆರಳುಗಳನ್ನು ನೀಡಿ ಭಗವಂತ ಬುದ್ಧಿ ಶಕ್ತಿಯನ್ನೂ ನೀಡಿದ್ದಾನೆ. ಇದನ್ನು ಅರ್ಥಪೂರ್ಣಗೊಳಿಸಿದರೆ ಮನುಷ್ಯನ ಬದುಕು ಸಾರ್ಥಕವಾಗುತ್ತದೆ ಎಂದರು.

ಮನುಷ್ಯನು ಅರ್ಥಪೂರ್ಣವಾಗಿ, ಸಾರ್ಥಕವಾಗಿ ಬದುಕಿದರೆ ಆತ ದೊಡ್ಡವನಾಗಲು ಸಾಧ್ಯ ಎಂದು ಹೇಳಿದ ಅವರು, ಭಗವಂತನ ವಿಶೇಷವಾದ ರೂಪ ಗಣಪತಿ ಸಚ್ಚಿದಾನಂದ ಶ್ರೀಗಳಲ್ಲಿದೆ. ಹಾಗಾಗಿ ಅಸಾಧಾರಣ ಕೆಲಸ ಅವರಿಂದ ಸಾಧ್ಯವಾಗುತ್ತಿದೆ. ಅವರ ಉಸಿರಾಟದಲ್ಲಿ ಸಾವಿರಾರು ಜನರ ಉಸಿರಾಟವಿದೆ. ಅವರನ್ನು ನೋಡಿದರೆ ಸಹಸ್ರ ಚಂದ್ರ ದರ್ಶನದ ಶಾಂತಿ ದೊರೆಯುತ್ತದೆ ಎಂದು ನುಡಿದರು.

ದಾರಿದ್ರ್ಯ, ಖಿನ್ನತೆ ದೂರವಾಗಲು ಪ್ರತಿಯೊಬ್ಬರೂ ಮನೆಯಲ್ಲಿ ದೀಪ ಬೆಳಗಿ

ಭಕ್ತರಿಗೆ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ ಆಶೀರ್ವಚನ

ಮೈಸೂರು, ಮೇ 24(ಆರ್‌ಕೆಬಿ)– ಪ್ರತಿಯೊಬ್ಬರೂ ಮನೆಯಲ್ಲಿ ನಿಜವಾದ ದೀಪ ಹಚ್ಚಿ. ಇದರಿಂದ ದಾರಿದ್ರ್ಯ ಮತ್ತು ಖಿನ್ನತೆಯಿಂದ ದೂರವಿರಬಹುದು ಎಂದು ದತ್ತಪೀಠದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಕರೆ ನೀಡಿದರು.

ಮೈಸೂರಿನ ಗಣಪತಿ ಸಚ್ಚಿದಾನಂದ ಆಶ್ರಮದ ನಾದಮಂಟಪದಲ್ಲಿ ತಮ್ಮ 80ನೇ ಜನ್ಮದಿನೋತ್ಸವದ 3ನೇ ದಿನದ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳ ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದರು. ದೀಪ ಹಚ್ಚುವುದರಿಂದ ಎಲ್ಲರಿಗೂ ದತ್ತನ ಕೃಪೆ ದೊರೆಯಲಿದೆ ಎಂದರು.

ಅನೇಕರು ಸುಖವಿದ್ದರೂ ದುರಾಸೆ ಅವರನ್ನು ಆವರಿಸಿರುತ್ತದೆ. ಮತ್ತಷ್ಟು, ಇನ್ನಷ್ಟು ಬೇಕು ಎಂಬ ಭಾವನೆಯಿಂದ ಖಿನ್ನತೆಗೊಳಗಾಗಿರುತ್ತಾರೆ. ಹಾಗಾಗಿ ಎಣ್ಣೆ, ತುಪ್ಪದ ದೀಪ ಬೆಳಗುವುದರಿಂದ ದಾರಿದ್ರ್ಯ ದೂರವಾಗಲಿದೆ ಎಂದು ಹೇಳಿದರು.

ಇದೇ ವೇಳೆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಸಭಿಕರು ಶ್ರೀಗಳ ಸೂಚನೆ ಮೇರೆಗೆ ತಮ್ಮ ತಮ್ಮ ಮನೆಗಳಲ್ಲಿ ದೀಪ ಬೆಳಗಿಸುವ ಪ್ರತಿಜ್ಞೆ ಮಾಡಿದರು.

ಮುಂದುವರಿದು ಮಾತನಾಡಿದ ಶ್ರೀಗಳು, ಈ ನಮ್ಮ ಶರೀರ, ನೆಲ ಪರಮಾತ್ಮನ ಬಾಡಿಗೆ ಮನೆ, ಅದೋ ಅಲ್ಲಿದೆ ನಮ್ಮ ಮನೆ... ಇದು ನಮ್ಮ ಮನೆಯಲ್ಲ ಎಂಬ ದಾಸವಾಣಿಯಂತೆ ನಾನು ಪರಮಾತ್ಮನ ಬಾಡಿಗೆ ಮನೆಯಾದ ಈ ಶರೀರವನ್ನು ಬಿಟ್ಟು ಹೋಗದೆ ಇರಲು ಸಾಧ್ಯವಿಲ್ಲ ಎಂದರು. ಜೀವನದಲ್ಲಿ ಶಿಸ್ತು ರೂಢಿಸಿಕೊಳ್ಳಬೇಕು. ಬೇಡದ ವಿಷಯಗಳ ಬಗ್ಗೆ ಚಿಂತಿಸದೆ ಪ್ರತಿ ನಿಮಿಷವನ್ನೂ ಹಾಳು ಮಾಡದೆ ಸದ್ವಿನಿಯೋಗ ಮಾಡಿಕೊಳ್ಳಬೇಕು. ಭಗವಂತ ನೀಡಿದ ಜೀವನದ ಪ್ರತೀ ಕ್ಷಣವನ್ನು ಉಪಾಸನೆ ಮಾಡಬೇಕು. ಜೀವನ ಕ್ರಮ ಬದಲಿಸಿಕೊಳ್ಳಬೇಕು. ಮಿತ ಆಹಾರ, ಮಿತ ಸಂಭಾಷಣೆ, ಮಿತ ವಿಹಾರದೊಂದಿಗೆ ಆರೋಗ್ಯ ರಕ್ಷಣೆ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಮೃಗಾಲಯದ ಸುತ್ತ–ಮುತ್ತ ಅಡ್ಡಾ–ದಿಡ್ಡಿ ವಾಹನಗಳ ನಿಲುಗಡೆ

ಸ್ಥಳೀಯ ನಿವಾಸಿಗಳಿಗೆ ದಿನನಿತ್ಯ ಕಿರಿಕಿರಿ



ಮೈಸೂರು,ಮೇ 24(ಜಿಎ)– ಮೈಸೂರು ಎಂದರೆ ಪ್ರವಾಸಿಗರ ನೆಚ್ಚಿನ ತಾಣ. ವಾರದ ರಜೆ ದಿನಗಳು ಸೇರಿದಂತೆ ಯಾವುದೇ ರಜೆ ದಿನಗಳು ಬಂದರೆ ಸಾಕು ಪ್ರವಾಸಿಗರ ದಂಡೇ ಮೈಸೂರಿಗೆ ಹರಿದು ಬರುತ್ತದೆ. ಪ್ರವಾಸಿ ತಾಣಗಳಲ್ಲಿ ಪಾರ್ಕಿಂಗ್ ಅವ್ಯವಸ್ಥೆ ಸಾಮಾನ್ಯ. ಆದರೆ ಮೈಸೂರು ಮೃಗಾಲಯದ ಸುತ್ತ–ಮುತ್ತ ಪಾರ್ಕಿಂಗ್ ವ್ಯವಸ್ಥೆ ಅವ್ಯವಸ್ಥೆಯಿಂದ ಕೂಡಿದ್ದು, ಸ್ಥಳೀಯ ನಿವಾಸಿಗಳಿಗೆ ಕಿರಿಯನ್ನುಂಟು ಮಾಡಿದೆ.

ಮೈಸೂರು ಅರಮನೆ, ಚಾಮುಂಡಿ ಬೆಟ್ಟ, ಕಾರಂಜಿ ಕೆರೆ, ಕುಕ್ಕರಹಳ್ಳಿ ಕೆರೆ ಸೇರಿದಂತೆ ಮೃಗಾಲಯವನ್ನು ವೀಕ್ಷಿಸಲು ದೇಶ, ವಿದೇಶಗಳಿಂದ ಪ್ರವಾಸಿಗರು ಬರುವುದುಂಟು. ಮೃಗಾಲಯದ ಸಮೀಪ ವಾಹನಗಳ ಅಡ್ಡಾ–ದಿಡ್ಡಿ ನಿಲುಗಡೆಯಿಂದ ನಿವಾಸಿಗಳಿಗೆ ಅಸಮಾಧಾನವಾಗಿದೆ.

ಮೃಗಾಲಯದ ಬಳಿ ಎರಡು ಸ್ಥಳಗಳಲ್ಲಿ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ. ಮೃಗಾಲಯದ ಮುಂಭಾಗ ಮತ್ತು ವಸ್ತು ಪ್ರದರ್ಶನದ ಒಳ ಭಾಗದಲ್ಲಿ ವಾಹನ ನಿಲುಗಡೆಗೆ ಮಾಡಲು ಅವಕಾಶ ಮಾಡಿಕೊಡಲಾಗಿದೆ ಆದರೆ ಪ್ರವಾಸಿಗರು ಮೃಗಾಲಯದ ಮುಂಭಾಗವಿರುವ ಪಾರ್ಕಿಂಗ್ ಸಂಪೂರ್ಣ ತುಂಬಿದ ನಂತರ ವಸ್ತು ಪ್ರದರ್ಶನದ ಒಳ ಭಾಗದಲ್ಲಿ ನಿಗದಿ ಮಾಡಲಾಗಿರುವ ವಾಹನ ಪಾರ್ಕಿಂಗ್ ಸ್ಥಳದಲ್ಲಿ ಪಾರ್ಕಿಂಗ್ ಮಾಡುವುದಿಲ್ಲ. ಬದಲಾಗಿ ಮೃಗಾಲಯದಿಂದ ವಸ್ತು ಪ್ರದರ್ಶನದ ಆವರಣಕ್ಕೆ ಹೋಗುವ ರಸ್ತೆ, ರೇಸ್‌ಕೋರ್ಸ್ ಕಡೆಗೆ ಹೋಗುವ ರಸ್ತೆ ಬದಿ ಮತ್ತು ಸಮೀಪವಿರುವ ಬಡಾವಣೆಗಳ ರಸ್ತೆಗಳಲ್ಲಿ ತಮ್ಮ ವಾಹನಗಳನ್ನು ಹೇಗೆಂದರೆ ಹಾಗೆ ಪಾರ್ಕಿಂಗ್ ಮಾಡಿ ಮೃಗಾಲಯ ವೀಕ್ಷಣೆಗೆ ತೆರಳುತ್ತಾರೆ.

ಇದರಿಂದ ಈ ರಸ್ತೆಗಳಲ್ಲಿ ವಾಹನಗಳ ಸಂಚಾರಕ್ಕೆ ಅಡ್ಡಿಯಾಗುತ್ತಿದೆ. ಜೊತೆಗೆ ಸುತ್ತ–ಮುತ್ತ ಇರುವ ಬಡಾವಣೆಗಳ ನಿವಾಸಿಗಳು ಮನೆಯಿಂದ ಹೊರಗೆ ಬರಲು ಮತ್ತು ಅವರ ವಾಹನಗಳನ್ನು ಹೊರ ತೆಗೆಯಲು ಅಡ್ಡಿಯಾಗಿ ಕಿರಿ–ಕಿರಿಯನ್ನುಂಟು ಮಾಡುತ್ತಿದೆ. ಅದು ಎಷ್ಟರ ಮಟ್ಟಿಗೆ ಎಂದರೆ ಮನೆಯವರು ಹೊರಗೆ ಬರಲು ಹೆದರುವಂತ ಸ್ಥಿತಿ. ಅಲ್ಲೇ ಕರ್ತವ್ಯ ನಿರ್ವಹಿಸುವ ಟ್ರಾಫಿಕ್ ಪೊಲೀಸರು ಕಂಡೂ ಕಾಣದಂತೆ ಮೌನವಹಿಸಿ ಬಿಡುತ್ತಾರೆ. ಈ ಸಂಬಂಧ ಪೊಲೀಸ್ ಇಲಾಖೆಯಾಗಲಿ, ಮೃಗಾಲಯ ಪ್ರಾಧಿಕಾರವಾಗಲಿ ಗಮನ ಹರಿಸುತ್ತಿಲ್ಲ. ತಮಗೆ ಆಗುತ್ತಿರುವ ತೊಂದರೆಗಳಿಗೆ ಯಾವಾಗ ಮುಕ್ತಿ ಸಿಗುತ್ತದೆ ಎಂದು ಸ್ಥಳೀಯ ನಿವಾಸಿಗಳು ಕಾಯುತ್ತಿದ್ದಾರೆ.

ಡಿ.ಎಸ್.ನಾಗಭೂಷಣರಿಗೆ ನುಡಿ ನಮನ



ಮೈಸೂರು,ಮೇ 24(ಜಿಎ)– ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕದಂಬ ರಂಗವೇದಿಕೆ ಮತ್ತು ಸಮಾಜವಾದಿ ಅಧ್ಯಯನ ಕೇಂದ್ರ ರಂಗವಲ್ಲಿ ವತಿಯಿಂದ ನಗರದ ಸಾಹಿತ್ಯ ಭವನದಲ್ಲಿ ಲೇಖಕರಾದ ಡಿ.ಎಸ್. ನಾಗಭೂಷಣ ಅವರಿಗೆ ಮಂಗಳವಾರ ನುಡಿನಮನ ಸಲ್ಲಿಸಲಾಯಿತು.

ಈ ವೇಳೆ ಡಿ.ಎಸ್.ನಾಗಭೂಷಣ ಅವರ ಒಡನಾಡಿ ಪ್ರೊ.ಹಿ.ಶಿ. ರಾಮಚಂದ್ರಗೌಡ ಮಾತನಾಡಿ, ಮೊದಲು ನಾನು ಕಾರಂತರ ಕೃತಿಗಳನ್ನು ಓದುತ್ತಿದ್ದೆ. ನಂತರ ಕುವೆಂಪು ಅವರ ಕೃತಿಗಳನ್ನು ಓದಲು ಆರಂಭಿಸಿದೆ. ನಾನು ಹಳ್ಳಿಯಿಂದ ಮೈಸೂರಿಗೆ ಬಂದ ನಂತರ ಮೈಸೂರಿನ ಅನೇಕ ಲೇಖಕರು ಪರಿಚಯವಾದರು. ಅದರಂತೆ ಡಿ.ಎಸ್. ನಾಗಭೂಷಣ ಅವರು ನನ್ನ ಬದುಕಿನ ಅರ್ಧಭಾಗದಿಂದ ಪರಿಚಿತರಾದರು. ಅವರ ಸಹವಾಸ ಎಂದರೆ ಬೆಂಕಿ ಸಹವಾಸವಿದ್ದಂತೆ ಎಂದು ಕೆಲವರು ಅವರ ಬಳಿ ಹೋಗುತ್ತಿರಲಿಲ್ಲ. ಅವರು ಸಿಟ್ಟಿನ ಮನುಷ್ಯ ಹಾಗೂ ಅನ್ಯಾಯವನ್ನು ಖಂಡಿಸುತ್ತಿದ್ದವರು ಎಂದು ಅವರನ್ನು ಸ್ಮರಿಸಿದರು.

ಇತ್ತೀಚಿನ ದಿನಗಳಲ್ಲಿ ಸಾಹಿತ್ಯ ಎಂಬುದು ಊಟದಲ್ಲಿ ಬಳಸುವ ಉಪ್ಪಿನಕಾಯಿಯಂತಾಗಿದೆ ಎಂದು ಬೇಸರ ವ್ಯಕ್ತಪಡಿಸಿದ ಅವರು ಸಾಹಿತ್ಯ ಎಂಬುದು ಸೌಹಾರ್ದತೆಯನ್ನು ಮೂಡಿಸುತ್ತದೆ. ಅದು ಮನರಂಜನೆ ವಸ್ತುವಲ್ಲ. ಅದಕ್ಕೆ ಮನುಷ್ಯನ ವ್ಯಕ್ತಿತ್ವ ವಿಕಸನ ಮಾಡುವ ಶಕ್ತಿ ಇದೆ. ಆದರಿಂದ ಮುಂದಿನ ದಿನಗಳಲ್ಲಿ ಮನೆ ಮನೆಗಳಿಗೆ ತೆರಳಿ ಸಾಹಿತ್ಯಾಸಕ್ತರನ್ನು ಸೇರಿಸುವ ಜನಾಂದೋಲನ ಆಗಬೇಕು ಎಂದು ತಿಳಿಸಿದರು. ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಕದಂಬ ರಂಗವೇದಿಕೆ ಅಧ್ಯಕ್ಷ ರಾಜಶೇಖರ್ ಕದಂಬ, ಮಾನಸ ಮತ್ತು ಲತಾ ಮೋಹನ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಜಿಟಿಡಿ ನಿವಾಸಕ್ಕೆ ಡಿಕೆಶಿ ಭೇಟಿ...



ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮಂಗಳವಾರ ಮೈಸೂರಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಅವರ ಮನೆಗೆ ಭೇಟಿ ನೀಡಿ, ಮಗುವಿನ ಸಾವಿನಿಂದ ದುಃಖಿತಪ್ತ ಅವರ ಕುಟುಂಬ ವರ್ಗಕ್ಕೆ ಸಾಂತ್ವನ ಹೇಳಿದರು. ಈ ವೇಳೆ ಮಾಜಿ ಸಚಿವ ಚಲುವರಾಯಸ್ವಾಮಿ, ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಹರೀಶ್‌ಗೌಡ ಹಾಗೂ ಇತರರು ಉಪಸ್ಥಿತರಿದ್ದರು.

ಯಾವುದೇ ಕಾರಣಕ್ಕೂ ಮತ್ತೆ ಪಠ್ಯಕ್ರಮ ಮರು ಪರಿಷ್ಕರಣೆ ಇಲ್ಲ

● ವಿಪಕ್ಷಗಳ ಟೀಕೆಗೆ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಸ್ಪಷ್ಟನೆ ● ಮೈಸೂರಲ್ಲಿ ಬಿಜೆಪಿ ಅಭ್ಯರ್ಥಿ ಪರ ಮತಯಾಚನೆ

ಮೈಸೂರು,ಮೇ 24(ಎಂಟಿವೈ)– ಯಾವುದೇ ಕಾರಣಕ್ಕೂ ಮತ್ತೆ ಪಠ್ಯಕ್ರಮವನ್ನು ಮರು ಪರಿಷ್ಕರಿಸುವುದಿಲ್ಲ ಎಂದು ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಸ್ಪಷ್ಟಪಡಿಸಿದ್ದಾರೆ.

ಮೈಸೂರಿನ ದಟ್ಟಗಳ್ಳಿಯಲ್ಲಿರುವ ಶಾರದಾ ಪಬ್ಲಿಕ್ ಸ್ಕೂಲ್‌ನಲ್ಲಿ ದಕ್ಷಿಣ ಪದವೀಧರರ ಚುನಾವಣೆ ಅಂಗವಾಗಿ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಪರ ಪ್ರಚಾರ ಸಭೆ ಹಾಗೂ ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಬಳಿಕ ಮಾತನಾಡಿದ ಅವರು, ಈಗಾಗಲೇ ಪಠ್ಯಕ್ರಮ ಪ್ರಕಟವಾಗಿವೆ. ಸುಳ್ಳು ಆರೋಪಕ್ಕೆ ಮನ್ನಣೆ ನೀಡಿ ಅದನ್ನು ಮರು ಪರಿಷ್ಕರಿಸಲು ಮುಂದಾಗುವುದಿಲ್ಲ ಎಂದರು.

ಕಾಂಗ್ರೆಸ್ ಮಾಡುತ್ತಿರುವ ಆರೋಪದಂತೆ ಪಠ್ಯಕ್ರಮದಲ್ಲಿ ಕೇಸರೀಕರಣವಿಲ್ಲ. ಕಾಂಗ್ರೆಸ್ ಧರಿಸಿರುವ ಕನ್ನಡಕದಿಂದ ಆ ರೀತಿ ಕಾಣುತ್ತಿರಬಹುದು. ನನ್ನ ಕನ್ನಡಕದಲ್ಲಿ ಯಾವುದೇ ಬಣ್ಣ ಕಾಣುತ್ತಿಲ್ಲ. ನಮಗೆ ಕಮ್ಯುನಿಸ್ಟ್ ಅಥವಾ ಬೇರೆ ಬಣ್ಣ ಕಾಣಲ್ಲ. ಟಿಪ್ಪು ಸುಲ್ತಾನ್ ಪುಸ್ತಕ ತಂದರೂ ನಮಗೆ ಬಣ್ಣ ಕಾಣಲಿಲ್ಲ. ನಮಗೆ ಮಕ್ಕಳು ಮಾತ್ರ ಕಾಣಿಸುತ್ತಾರೆ. ಕಾಂಗ್ರೆಸ್ ಜೀವನದುದ್ದಕ್ಕೂ ಬಣ್ಣ ಕಂಡಿದೆ. ಮತ ಬಿಟ್ಟು ಬೇರೆ ಏನನ್ನು ಯೋಚನೆ ಮಾಡಿದವರಲ್ಲ. ಹಸಿರು ಬಣ್ಣದವರು ಮತ ಹಾಕಲ್ಲ ಅಂತಾ ಅವರಿಗೆ ಭಯ. ಯಾವ ಕಾಂಗ್ರೆಸ್ ಪಕ್ಷದವರು ಪಠ್ಯ ಪುಸ್ತಕವನ್ನೇ ಓದಿಲ್ಲ. ಇದಕ್ಕೆ ಸಾಕ್ಷಿ ಅವರು ಮಾಡಿರುವ ಟ್ವೀಟ್‌ಗಳು. ಕಾಂಗ್ರೆಸ್ ಶಿಕ್ಷಣ ಇಲಾಖೆಯನ್ನು ಮತ ಬ್ಯಾಂಕ್ ಮಾಡಿತ್ತು. ಅದಕ್ಕಾಗಿ ಪಠ್ಯದಲ್ಲಿ ತಪ್ಪುಗಳು ಪ್ರಕಟವಾಗಿತ್ತು ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕಾಂಗ್ರೆಸ್‌ನಿಂದ ಅಪಪ್ರಚಾರ: ರಾಷ್ಟ್ರಕವಿ ಕುವೆಂಪುಗೆ ಅವಮಾನವಾಗಿದ್ದರೆ ಅದಕ್ಕೆ ಕಾಂಗ್ರೆಸ್ ಹೊಣೆ. ಕಾಂಗ್ರೆಸ್‌ನವರು ಸುಳ್ಳನ್ನು ಹಬ್ಬಿಸುತ್ತಿದ್ದಾರೆ. ಪಠ್ಯ ಪುಸ್ತಕದಲ್ಲಿ ಕುವೆಂಪು ಅವರಿಗೆ ಅವಮಾನ ಮಾಡಲಾಗಿದೆ ಎಂದು ಸುಳ್ಳು ಆರೋಪ ಮಾಡುತ್ತಿದ್ದಾರೆ. ಈ ಮೊದಲು ಕಾಂಗ್ರೆಸ್‌ನವರು ಟಿಪ್ಪು ಸುಲ್ತಾನ್, ನಾರಾಯಣ ಗುರು, ಭಗತ್ ಸಿಂಗ್, ಬಸವಣ್ಣನವರ ಪಠ್ಯ ಕೈಬಿಡಲಾಗಿದೆ ಎಂದು ಸುಳ್ಳು ಸುದ್ದಿ ಹಬ್ಬಿಸಿದರು.



ಆ ಸುಳ್ಳುಗಳು ಫೇಲ್ ಆದ ಮೇಲೆ ಕುವೆಂಪು ಅವರನ್ನು ಹಿಡಿದು ಕೊಂಡಿದ್ದಾರೆ. ಅದು ಸಹ ಮಿಸ್ ಫೈರ್ ಆಗಿದೆ. ಕುವೆಂಪು ಅವರ ನಾಲ್ಕು ಪಾಠವನ್ನು ಸಿದ್ದರಾಮಯ್ಯ ಕೈ ಬಿಟ್ಟಿದ್ದರು. ನಾವು ಅದನ್ನು ಸೇರಿಸುವ ಪ್ರಯತ್ನ ಮಾಡಿದ್ದೇವೆ. ಈ ದೇಶ ಸಂಸ್ಕೃತಿ ಬಗ್ಗೆ ಮಾತನಾಡಿದನ್ನು ಅವರು ತೆಗೆದು ಹಾಕಿದ್ದಾರೆ. ದಯಮಾಡಿ ಕಾಂಗ್ರೆಸ್ ನಾಯಕರು ಮೊದಲು ಪಠ್ಯ ಪುಸ್ತಕವನ್ನು ಓದಿ, ಆ ನಂತರ ಮಾತನಾಡಲಿ. ಕಂಟೆಂಟ್ ಇಟ್ಟುಕೊಂಡು ವಾದ ಮಾಡಿ. ಅದು ಬಿಟ್ಟು ವ್ಯಕ್ತಿಗತವಾಗಿ ವಾದ ಮಾಡಬೇಡಿ ಅದು ಸರಿಯಲ್ಲ ಎಂದರು.

ಟಿಪ್ಪು ವಿರುದ್ಧ ಕಿಡಿ: ಟಿಪ್ಪು ಸುಲ್ತಾನ್ ಅವನೊಬ್ಬನೇನಾ ಸ್ವಾತಂತ್ರ್ಯ ಹೋರಾಟಗಾರ?. ಸಂಗೊಳ್ಳಿ ರಾಯಣ್ಣ, ಕಿತ್ತೂರು ರಾಣಿ ಚೆನ್ನಮ್ಮ ಇರಲಿಲ್ಲವಾ?. ಮೈಸೂರು ಮಹಾರಾಜರಿಗೆ ಅನ್ಯಾಯವಾಗಿದ್ದರೆ ಅದು ಹೈದರಾಲಿ ಹಾಗೂ ಟಿಪ್ಪುಸುಲ್ತಾನ್‌ನಿಂದ ಮಾತ್ರ. ಟಿಪ್ಪುವಿನಿಂದ ಕನ್ನಡಕ್ಕೆ ಅನ್ಯಾಯವಾಗಿದೆ. ಪರ್ಷಿಯನ್ ಭಾಷೆ ಏಕೆ ತರಬೇಕಾಗಿತ್ತು? ನಾವು ಮಕ್ಕಳ ಭವಿಷ್ಯಕ್ಕಾಗಿ ಪುಸ್ತಕ ರಚನೆ ಮಾಡದ್ದೇವೆ. ಮಾಹಿತಿಗಾಗಿ ಯಾವ ವಿದ್ಯಾರ್ಥಿಗಳು ಶಾಲೆಗೆ ಬರುತ್ತಿಲ್ಲ. ಟಿಪ್ಪು ಸುಲ್ತಾನ್‌ಗಳನ್ನು ಪಠ್ಯದಲ್ಲಿ ಹಾಕಿದರೆ ಸರಿಯಿರಲ್ಲ. ಮತ್ತೆ ಪಠ್ಯ ಪುಸ್ತಕ ಪರಿಷ್ಕರಣೆ ಪ್ರಶ್ನೆಯೇ ಇಲ್ಲ. ಪುಸ್ತಕ ಈಗಾಗಲೇ ಮುದ್ರಣವಾಗಿದೆ ಎಂದು ಸ್ಪಷ್ಟನೆ ನೀಡಿದರು.

ಪಠ್ಯ ಪುಸ್ತಕದ ಸಮಿತಿ ಅಧ್ಯಕ್ಷ: ಪಠ್ಯ ಪುಸ್ತಕದ ಸಮಿತಿ ಅಧ್ಯಕ್ಷರ ವಿರುದ್ಧ ಆರೋಪ ಮಾಡುವುದು ಸರಿಯಲ್ಲ. ಸಿದ್ದರಾಮಯ್ಯ ಅವರು ನಾನು ಒಬ್ಬನೇ ಸರಿ, ನಾನು ಮಾಡಿದ್ದೇ ಸರಿ, ನನಗೆ ಎಲ್ಲಾ ಗೊತ್ತಿರೋದು ಎಂದು ತಿಳಿದುಕೊಂಡಿದ್ದಾರೆ. ಅವರಿಂದ ಅವಹೇಳನ ಮಾತುಗಳು, ಗೌರವ ಕೊಡದೇ ಏಕವಚನದಲ್ಲಿ ಮಾತನಾಡುತ್ತಾರೆ. ಪಾಪ ಸಿದ್ದರಾಮಯ್ಯ ಅವರು ಇದಕ್ಕೆ ಕಾರಣರಲ್ಲ, ಅವರ ಹಿಂದೆ ಇರುವ ತಂಡದಿಂದಲೇ ಹೀಗೆ ಮಾತನಾಡುತ್ತಿದ್ದಾರೆ. ಪಠ್ಯ ಪುಸ್ತಕ ಸಮಿತಿ ಅಧ್ಯಕ್ಷ ರೋಹಿತ್ ಚಕ್ರತೀರ್ಥ ವಿರುದ್ಧ ಯಾವ ಕಾರಣಕ್ಕೆ ಆರೋಪ ಮಾಡುತ್ತಿದ್ದಾರೆ ಎಂದು ಅವರು ಪ್ರಶ್ನಿಸಿದರು.

ನಾಡಗೀತೆಗೆ ಅವಮಾನ ಮಾಡಿದ್ದ ಪ್ರಕರಣಕ್ಕೆ ಬಿ.ರಿಪೋರ್ಟ್ ಹಾಕಲಾಗಿದೆ. ಖುದ್ದು ಸಿದ್ದರಾಮಯ್ಯ ಸಿಎಂ ಆಗಿದ್ದಾಗ ಬಿ.ರಿಪೋರ್ಟ್ ಹಾಕಲಾಗಿದೆ. ಒಂದು ವೇಳೆ ತಪ್ಪು ಸಾಬೀತಾಗಿದ್ದರೆ ಸಿದ್ದರಾಮಯ್ಯ ಅವರೇ ಜೈಲಿಗೆ ಕಳುಹಿಸಬಹುದಿತ್ತು?. ಸಿದ್ದರಾಮಯ್ಯ ಏಕೆ ರೋಹಿತ್ ಚಕ್ರತೀರ್ಥಗೆ ಬಿ.ರಿಪೋರ್ಟ್ ಕೊಡಿಸಿದರು.

ಬ್ಯಾನರ್‌ನಲ್ಲಿ ಯಡಿಯೂರಪ್ಪ ಚಿತ್ರ ಮಾಯ: ಅಭಿಮಾನಿಗಳಲ್ಲಿ ಅಸಮಾಧಾನ

ಮೈಸೂರಿನ ಶಾರದಾ ಸ್ಕೂಲ್‌ನಲ್ಲಿ ನಡೆದ ದಕ್ಷಿಣ ಪ್ರದವೀಧರ ಕ್ಷೇತ್ರದ ಚುನಾವಣೆಯಲ್ಲಿ ಪ್ರಚಾರ ಸಭೆಯ ಬ್ಯಾನರ್‌ನಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರ ಭಾವಚಿತ್ರ ಇರಲಿಲ್ಲವಾದ ಕಾರಣ ಅವರ ಅಭಿಮಾನಿಗಳಲ್ಲಿ ಅಸಮಾಧಾನವನ್ನುಂಟು ಮಾಡಿದೆ. ಬ್ಯಾನರ್‌ನಲ್ಲಿ ಸಂಸದ ಪ್ರತಾಪ ಸಿಂಹ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ಕೇಂದ್ರದ ಸಚಿವ ಅಮಿತ್ ಶಾ, ಪ್ರಧಾನಿ ನರೇಂದ್ರ ಮೋದಿ, ಬಿಜೆಪಿ ರಾಜ್ಯಾಧ್ಯಕ್ಷ ನಳಿನ್‌ಕುಮಾರ್ ಕಟೀಲ್, ಮುಖ್ಯಮಂತ್ರಿ ಬೊಮ್ಮಾಯಿ, ಶಿಕ್ಷಣ ಸಚಿವ ಬಿ.ಸಿ.ನಾಗೇಶ್, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಶಾಸಕರಾದ ರಾಮದಾಸ್, ಎಲ್.ನಾಗೇಂದ್ರ, ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, ಮೈಲ್ಯಾಕ್ ಅಧ್ಯಕ್ಷ ಎನ್.ವಿ.ಫಣೀಶ್, ಬಿಜೆಪಿ ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ ಬಿಜೆಪಿ ಅಭ್ಯರ್ಥಿ ಮೈ.ವಿ. ರವಿಶಂಕರ್ ಅವರ ಭಾವಚಿತ್ರ ಪ್ರಕಟಿಸಲಾಗಿತ್ತು. ಆದರೆ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಚಿತ್ರ ಮಾಯವಾಗಿತ್ತು. ಈ ಬಗ್ಗೆ ಅಸಮಾಧಾನ ವ್ಯಕ್ತವಾಗಿದೆ.

ಆರೋಪ ಮಾಡಲು ಸಿದ್ದರಾಮಯ್ಯ ಅವರಿಗೆ ನೈತಿಕತೆ ಇರಬೇಕು. ದೇಶದ ಧ್ವಜದ ಪಾಠ ತೆಗೆದು ಹಾಕಿದವರಿಗೆ ಯಾವ ನೈತಿಕತೆ ಇದೆ. ಬಾವುಟ ಏರಲು ಇವರು ಏಕೆ ಸಹಿಸುವುದಿಲ್ಲ ಪ್ರಶ್ನಿಸಿದರು.

ಪ್ರಚಾರ: ಇದಕ್ಕೂ ಮುನ್ನ ಶಾರದಾ ಸ್ಕೂಲ್‌ನಲ್ಲಿ ಬಿಜೆಪಿ ಅಭ್ಯರ್ಥಿ ಪರ ಮತಯಾಚಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಸಂಸದ ಪ್ರತಾಪಸಿಂಹ, ಮುಡಾ ಅಧ್ಯಕ್ಷ ಹೆಚ್.ವಿ. ರಾಜೀವ್, ಬಿಜೆಪಿ ನಗರಾಧ್ಯಕ್ಷ ಶ್ರೀವತ್ಸ, ಅಭ್ಯರ್ಥಿ ಮೈ.ವಿ.ರವಿಶಂಕರ್, ಮುಖಂಡ ಯು.ಎಸ್.ಶೇಖರ್, ಎಂ.ಕೆ.ಶಂಕರ್ ಸೇರಿದಂತೆ ಇನ್ನಿತರರು ಇದ್ದರು.

ದಕ್ಷಿಣ ಪದವೀಧರ ಕ್ಷೇತ್ರದ ಕಾಂಗ್ರೆಸ್ ಸಮಾವೇಶ

ಸೋಲಿನ ಭೀತಿ: ಶ್ರೀಕಂಠೇಗೌಡ ಹಿಂದೆ ಸರಿದು ರಾಮುವನ್ನು ಮುಂದೆ ತಳ್ಳಿದ್ದಾರೆ

• ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಲೇವಡಿ • ದಿನೇಶ್ ಗೂಳಿಗೌಡರಂತೆ ಮಧು ಗೆಲ್ಲಿಸಿಕೊಳ್ಳಿ: ಡಿಕೆಶಿ

ಮಂಡ್ಯ, ಮೇ 24(ಮೋಹನ್‌ರಾಜ್)– ದಕ್ಷಿಣ ಪದವೀಧರ ಕ್ಷೇತ್ರದಲ್ಲಿ ಜೆಡಿಎಸ್ ಶಾಸಕರದ್ದೇ ಪ್ರಾಬಲ್ಯವಿದ್ದರೂ, ಸೋಲಿನ ಭೀತಿಯಿಂದ ಹಾಲಿ ಪರಿಷತ್ ಸದಸ್ಯ ಕೆ.ಟಿ.ಶ್ರೀಕಂಠೇಗೌಡ ಸ್ಪರ್ಧೆಯಿಂದ ಹಿಂದೆ ಸರಿದು ಹೆಚ್.ಕೆ.ರಾಮು ಎಂಬ ಹೊಸ ಮುಖವನ್ನು ಮುಂದೆ ತಳ್ಳಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಲೇವಡಿ ಮಾಡಿದರು.

ಮಂಗಳವಾರ ನಗರದ ಖಾಸಗಿ ಸಮುದಾಯ ಭವನದಲ್ಲಿ ನಡೆದ ದಕ್ಷಿಣ ಪದವೀಧರ ಕ್ಷೇತ್ರದ ಕಾಂಗ್ರೆಸ್ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ಕೆ.ಟಿ.ಶ್ರೀಕಂಠೇಗೌಡ 2 ಬಾರಿ ವಿಧಾನ ಪರಿಷತ್ ಅನ್ನು ಪ್ರತಿನಿಧಿಸಿದ್ದಾರೆ. ಆದರೆ ಹೇಳಿ ಕೊಳ್ಳುವ, ಕಡಿದು ಕಟ್ಟೆ ಹಾಕುವಂತಹ ಯಾವ ಕೆಲಸವನ್ನೂ ಮಾಡಿಲ್ಲ. ಹೀಗಾಗಿ ಅವರಿಗೆ ಸೋಲಿನ ಭೀತಿ ಇದೆ. ಚುನಾವಣೆಯ ಗಂಧ ಗಾಳಿ ಗೊತ್ತಿಲ್ಲದ ಹೆಚ್.ಕೆ.ರಾಮುಗೆ ಜೆಡಿಎಸ್ ಬಂಡಾಯದ ನಡುವೆ ಮಣೆ ಹಾಕಿದ್ದು, ಕಾಂಗ್ರೆಸ್‌ಗೆ ಗೆಲುವಿನ ವಾತಾವರಣವಿದೆ ಎಂದರು.

ರಾಜ್ಯದಲ್ಲಿ ಬಿಜೆಪಿ ಅನೈತಿಕವಾಗಿ, ಹಿಂಬಾಗಿಲಿನಿಂದ ಅಧಿಕಾರಕ್ಕೆ ಬಂದು ಭ್ರಷ್ಟಾಚಾರದಲ್ಲಿ ತೊಡಗಿದೆ. ರಾಜ್ಯದ ಹಿತಾಸಕ್ತಿ ಮರೆತು ಕಮಿಷನ್ ದಂಧೆಯಲ್ಲಿ ತೊಡಗಿದೆ. ಕಂಟ್ರಾಕ್ಟರ್ ಅಸೋಸಿಯೇಷನ್ ಅಧ್ಯಕ್ಷರು ಈ ಸರ್ಕಾರ 40 ಪರ್ಸೆಂಟ್ ಕಮಿಷನ್ ಸರ್ಕಾರ ಎಂದು ಪ್ರಧಾನಿಗೆ ಪತ್ರ ಬರೆಯುತ್ತಾರೆ ಎಂದರೆ ಸರ್ಕಾರದ ದಿವಾಳಿತನ ಗೊತ್ತಾಗುತ್ತದೆ ಎಂದು ಕಿಡಿಕಾರಿದರು.

ದೇಶ ಮತ್ತು ಸಂವಿಧಾನ ಉಳಿಯುವುದು ಕಾಂಗ್ರೆಸ್‌ನಿಂದ ಮಾತ್ರ ಸಾಧ್ಯ. ಬಿಜೆಪಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗಿಲ್ಲ. ದೇಶಭಕ್ತಿ ಎಂಬುದು ಕಾಂಗ್ರೆಸ್‌ಗೆ ರಕ್ತಗತವಾಗಿ ಬಂದಿದೆ.


ಇಂದು ನಾಮಪತ್ರ ಸಲ್ಲಿಕೆ: ಮಧು ಮಾದೇಗೌಡ

ನಾಳೆ (ಮೇ 25) ಮೈಸೂರಿನಲ್ಲಿ ಬೆಳಗ್ಗೆ 11 ಗಂಟೆಗೆ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ಪಕ್ಷದ ಮುಖಂಡರ ಸಮ್ಮುಖದಲ್ಲಿ ನಾಮಪತ್ರ ಸಲ್ಲಿಸುವುದಾಗಿ ದಕ್ಷಿಣ ಪದವೀಧರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡ ಹೇಳಿದರು.

ಕಾಂಗ್ರೆಸ್ ಸಮಾವೇಶದಲ್ಲಿ ಮಾತನಾಡಿದ ಅವರು, ನಾಮಪತ್ರ ಸಲ್ಲಿಕೆ ಸಮಾರಂಭಕ್ಕೆ ಮಂಡ್ಯದಿಂದ ಕಾಂಗ್ರೆಸ್ಸಿಗರು ಆಗಮಿಸುವಂತೆ ಮನವಿ ಮಾಡಿದ ಅವರು, ಕಳೆದ ಒಂದು ವರ್ಷದಿಂದ ಪದವೀಧರ ಕ್ಷೇತ್ರ 27 ತಾಲೂಕಿಗೆ ಭೇಟಿ ಕೊಟ್ಟಿದ್ದು, ಸಿದ್ದರಾಮಯ್ಯ ಸರ್ಕಾರ ಮಾಡಿದ ಜನಪರ ಕೆಲಸಗಳು ಹಾಗೂ ನಮ್ಮ ತಂದೆ ಜಿ.ಮಾದೇಗೌಡರು ಮಾಡಿದ ಜನಪರ ಸೇವೆಯೇ ನನಗೆ ಶ್ರೀರಕ್ಷೆ ಎಂದರು.

ಜೆಡಿಎಸ್ ಹಾಗೂ ಬಿಜೆಪಿಯನ್ನು ಸೋಲಿಸಿ ಕಾಂಗ್ರೆಸ್ ಅನ್ನು ಅಧಿಕಾರಕ್ಕೆ ತನ್ನಿ ಎಂದ ಅವರು, ಮಕ್ಕಳಿಗೆ ಪಠ್ಯದಲ್ಲಿ ಧರ್ಮ ಬೋಧನೆ ನಡೆಯುತ್ತಿದೆ. ಭಗತ್ ಸಿಂಗ್, ನಾರಾಯಣಗುರುರಂತಹ ಮೇಧಾವಿಗಳ ಪಾಠವನ್ನು ಈ ಸರ್ಕಾರ ತೆಗೆದು ಹಾಕಿದೆ. ರಾಷ್ಟ್ರಕವಿ ಕುವೆಂಪು ಅವರ ನಾಡಗೀತೆಗೆ ಅಪಮಾನ ಮಾಡಿದೆ ಎಂದು ಆರೋಪಿಸಿದರು.

ಜಿ.ಮಾದೇಗೌಡರು ಒಬ್ಬ ಸ್ವಾತಂತ್ರ್ಯ ಹೋರಾಟಗಾರರಾಗಿ ಮುತ್ಸದ್ದಿ ನಾಯಕರಾಗಿದ್ದು, ಅವರ ಪುತ್ರ ಮಧು ಜಿ.ಮಾದೇಗೌಡ ಪರಿಷತ್ ಚುನಾವಣೆಗೆ ಸೂಕ್ತ ಅಭ್ಯರ್ಥಿ. ಮತದಾರರು ಮಧು ಅವರನ್ನು ಗೆಲ್ಲಿಸಬೇಕು. ಕಾಂಗ್ರೆಸ್ ನಾಯಕರು ಒಗ್ಗಟ್ಟಿನಿಂದ ಮಧು ಅವರಿಗೆ ಮುನ್ನಡೆ ಕೊಡಿಸಲು ಮನೆ ಮನೆಗೆ ತೆರಳಿ ಪ್ರಚಾರ ಮಾಡಬೇಕೆಂದು ಕರೆ ನೀಡಿದರು.



ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮಾತನಾಡಿ, ಮಂಡ್ಯ ಜಿಲ್ಲೆ ಜನ ಸ್ವಾಭಿಮಾನದ ಮತವನ್ನು ಮಧು ಜಿ.ಮಾದೇಗೌಡರಿಗೆ ನೀಡಿ. ಮಾದೇಗೌಡರ ಮಗ ಮಧು ಎನ್ನುವ ಮುನ್ನ, ಅವರೊಬ್ಬ ಶಿಕ್ಷಣ ತಜ್ಞರಾಗಿದ್ದು, ಕಾಲೇಜನ್ನು ನಡೆಸುತ್ತಿದ್ದಾರೆ. ಜೊತೆಗೆ ಪದವೀಧರರಾಗಿ, ಪದವೀಧರರ ಸಮಸ್ಯೆಗಳನ್ನು ಅರಿತಿದ್ದಾರೆ. ಈ ನಿಟ್ಟಿನಲ್ಲಿ ಮತದಾರರು ಮಧು ಅವರನ್ನು ಬೆಂಬಲಿಸಿ ಎಂದು ಮನವಿ ಮಾಡಿದರು.

ಕಾಂಗ್ರೆಸ್ ಕಾರ್ಯಕರ್ತರು ಒಗ್ಗಟ್ಟಿನಿಂದ ಮಧು ಪರ ನಿಲ್ಲಬೇಕು. ದಕ್ಷಿಣ ಪದವೀಧರ ಕ್ಷೇತ್ರದಲ್ಲಿ 1.32 ಲಕ್ಷ ಮತದಾರರಿದ್ದು, ಈ ಪೈಕಿ ಮಂಡ್ಯದಲ್ಲೇ 42 ಸಾವಿರ ಮತವಿದ್ದು, ಅತ್ಯಧಿಕ ಮತ ಮಧು ಮಾದೇಗೌಡಗೆ ಬರಬೇಕು. ಈ ನಿಟ್ಟಿನಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಪಕ್ಷಬೇಧ ಮರೆತು ಪ್ರತಿಯೊಬ್ಬರ ಮನೆಗೆ ಹೋಗಿ ಮತ ಕೇಳಬೇಕು. ಪಕ್ಷಾತೀತವಾಗಿ ಮತ ಕೊಟ್ಟಿದ್ದಕ್ಕೆ ಕಳೆದ ಪರಿಷತ್ ಚುನಾವಣೆಯಲ್ಲಿ ದಿನೇಶ್ ಗೂಳಿಗೌಡ ಗೆಲುವು ಸಾಧಿಸಿದರು. ಅಂತಹದ್ದೇ ಫಲಿತಾಂಶ ಈ ಚುನಾವಣೆಯಲ್ಲಿ ಬರಲಿದೆ ಎಂದು ಭವಿಷ್ಯ ನುಡಿದರು.

ಸೋಲಿನ ಭಯದಿಂದ ಹಾಲಿ ಪರಿಷತ್ ಸದಸ್ಯ ಕೆ.ಟಿ.ಶ್ರೀಕಂಠೇಗೌಡ ಹಿಂದೆ ಸರಿದಿದ್ದಾರೆ. ಮಂಡ್ಯದಲ್ಲಿ 6 ಕ್ಷೇತ್ರದಲ್ಲಿ ಅವರ ಶಾಸಕರಿದ್ದರೆ, ಮೈಸೂರಿನಲ್ಲಿ 4, ಹಾಸನದಲ್ಲಿ 6 ಸೇರಿ ಒಟ್ಟು 16 ಶಾಸಕರು, ಒಬ್ಬ ಸಂಸದರಿದ್ದರೂ ಹಾಲಿ ಸದಸ್ಯರಿಗೆ ಸೋಲಿನ ಭಯ ಕಾಡುತ್ತಿದೆ. ಆರೋಗ್ಯವಾಗಿದ್ದಾರೆ, ವಾಗ್ಮಿ ಇದ್ದಾರೆ, ವಯಸ್ಸಿದೆ. ಆದರೂ ಚುನಾವಣೆಯಿಂದ ಹಿಂದೆ ಸರಿಯಲು ಸೋಲಿನ ಹತಾಶೆಯೇ ಕಾರಣ ಎಂದು ಆರೋಪಿಸಿದರು.

ಮಂಡ್ಯ ಕಾಂಗ್ರೆಸ್ಸಿಗರಿಗೆ ಶಿಸ್ತಿಲ್ಲ: ಡಿಕೆಶಿ ಸಿಡಿಮಿಡಿ

ಮಂಡ್ಯ ಜಿಲ್ಲೆಯ ಕಾಂಗ್ರೆಸ್ ಮುಖಂಡರಿಗೆ ಶಿಸ್ತಿಲ್ಲ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮುಖಂಡರು ಹಾಗೂ ಕಾರ್ಯಕರ್ತರನ್ನು ತರಾಟೆಗೆ ತೆಗೆದುಕೊಂಡರು.

ಸಾವಿರಾರು ರೂ. ಖರ್ಚು ಮಾಡಿ ಲೋಡ್ ಗಟ್ಟಲೇ ಹಾರ, ತುರಾಯಿ ತಂದಿದ್ದೀರಿ. ಏನು ಪ್ರಯೋಜನ ಅದೇ ಹಣವನ್ನು ಅಭ್ಯರ್ಥಿಗೆ ಕೊಟ್ಟಿದ್ದರೆ ಚುನಾವಣೆ ಖರ್ಚಿಗೆ ಆಗುತ್ತಿತ್ತು ಹಾರ ತುರಾಯಿ ಹಾಕಿದ ತಕ್ಷಣ ನಾನು ನಿಮ್ಮನ್ನು ಗುರುತಿಸುವುದಿಲ್ಲ. ಮತದಾರರ ಪಟ್ಟಿ ಹಿಡಿದು ಮತದಾರರ ಮನೆಗೆ ಹೋಗಿ ಮತ ಕೇಳುವವರಿಗೆ ಮತ ಹಾಕಿಸುವವರಿಗೆ ನನ್ನ ಮೊದಲ ಆದ್ಯತೆ ಎಂದರು. ಭಿನ್ನಾಭಿಪ್ರಾಯ, ಬಂಡಾಯ ಮರೆತು ಚುನಾವಣೆ ಕೆಲಸಗಳಲ್ಲಿ ಸಕ್ರೀಯರಾಗಿ, ನಿಮಗೆ ಅಧಿಕಾರ ಕೊಡುವುದು ನಮಗೆ ಗೊತ್ತಿದೆ ಎಂದರು.

ಹಾಲಿ ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಾಮುಗೆ ಹಣ ನೋಡಿ ಟಿಕೆಟ್ ಕೊಟ್ಟಿದ್ದಾರೆ ಎಂದು ಅವರದ್ದೇ ಪಕ್ಷದವರು ಆರೋಪಿಸಿದರೆ, ಪ್ರಾಮಾಣಿಕರಿಗೆ ಟಿಕೆಟ್ ಕೊಟ್ಟಿಲ್ಲ ಎಂಬುದನ್ನು ಅವರದ್ದೇ ಪಕ್ಷದವರು ಹೇಳುತ್ತಾರೆ. ಜೆಡಿಎಸ್ ಕಾರ್ಯಕರ್ತರೇ ಗೊಂದಲದಲ್ಲಿದ್ದು, ಇದರ ಲಾಭವನ್ನು ಕಾಂಗ್ರೆಸ್ ಪಡೆಯಬೇಕು ಎಂದರು.

40–50 ವರ್ಷದಿಂದ ಇಲ್ಲದ ಭ್ರಷ್ಟಾಚಾರ ಸದ್ಯ ರಾಜ್ಯದಲ್ಲಿ ತೊಡಗಿದ್ದು, ಬಹುದೊಡ್ಡ ಕಮಿಷನ್ ದಂಧೆ ನಡೆಯುತ್ತಿದೆ. ಮಂತ್ರಿಗಳು, ಬಿಜೆಪಿ ಮುಖಂಡರುಗಳು ಭ್ರಷ್ಟಾಚಾರದಲ್ಲಿ ತೊಡಗಿದ್ದು, ಈ ಸರ್ಕಾರವನ್ನು ಕಿತ್ತೊಗೆಯಬೇಕು. ಸರ್ಕಾರಿ ಕೆಲಸಗಳು ಮಾರಾಟಕ್ಕಿಟ್ಟಿದ್ದಾರೆ. ಇದರಿಂದ ವಿದ್ಯಾವಂತರಿಗೆ ಅನ್ಯಾಯವಾಗುತ್ತಿದೆ ಎಂದು ಕಿಡಿಕಾರಿದರು.

ವೇದಿಕೆಯಲ್ಲಿ ದಕ್ಷಿಣ ಪದವೀಧರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡ, ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್, ಮಾಜಿ ಸಚಿವ ಎನ್.ಚಲುವರಾಯಸ್ವಾಮಿ, ಎಂ.ಎಸ್.ಆತ್ಮಾನಂದ, ಪಿ.ಎಂ.ನರೇಂದ್ರಸ್ವಾಮಿ, ವಿಧಾನಪರಿಷತ್ ಸದಸ್ಯ ದಿನೇಶ್‌ಗೂಳಿಗೌಡ, ಮಾಜಿ ಶಾಸಕರಾದ ರಮೇಶ್ ಬಂಡಿಸಿದ್ದೇಗೌಡ, ಕೆಬಿ.ಚಂದ್ರಶೇಖರ್, ಬಿ.ಪ್ರಕಾಶ್, ಬಿ.ರಾಮಕೃಷ್ಣ, ಮುಖಂಡರಾದ ಗಣಿಗ ರವಿಕುಮಾರ್, ಸಿ.ಡಿ.ಗಂಗಾಧರ್, ದಡದಪುರ ಶಿವಣ್ಣ, ಡಾ.ಕೃಷ್ಣ, ಗುರುಚರಣ್, ಅಮರಾವತಿ ಚಂದ್ರಶೇಖರ್, ಎಂ.ಎಸ್.ಚಿದಂಬರ್, ಸುರೇಶ್ ಕಂಠಿ, ಸಿದ್ದಾರೂಢ ಸತೀಶ್‌ಗೌಡ, ಯುವ ಕಾಂಗ್ರೆಸ್ ಜಿಲ್ಲಾಧ್ಯಕ್ಷ ವಿಜಯ್‌ಕುಮಾರ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ನೀತಿ ಸಂಹಿತೆ ಉಲ್ಲಂಘನೆ: ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡ ಪರ ಚುನಾವಣಾ ಪ್ರಚಾರಕ್ಕೆ ಮಂಡ್ಯಕ್ಕೆ ಆಗಮಿಸಿದ್ದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಸರ್ಕಾರಿ ಕಾರಿನಲ್ಲಿ ಓಡಾಡುವ ಮೂಲಕ ನೀತಿ ಸಂಹಿತೆ ಉಲ್ಲಂಘಿಸಿದ್ದಾರೆ.

ಪದವೀಧರ ಚುನಾವಣೆ ಹಿನ್ನಲೆಯಲ್ಲಿ ಜಿಲ್ಲಾಡಳಿತ ನೀತಿ ಸಂಹಿತೆ ಜಾರಿ ಮಾಡಿದ್ದು, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಸರ್ಕಾರಿ ಕಾರಿನಲ್ಲಿ ಓಡಾಡುವ ಮೂಲಕ ನೀತಿ ಸಂಹಿತೆ ಉಲ್ಲಂಘಿಸಿದ್ದಾರೆ.

ಡಾ.ಶಂಕರೇಗೌಡರಿಗೆ ಲಘು ಹೃದಯಾಘಾತ

ಮಂಡ್ಯ, ಮೇ 24(ಮೋಹನ್‌ರಾಜ್)– ಐದು ರೂ. ವೈದ್ಯರೆಂದೇ ಮಂಡ್ಯ ಜಿಲ್ಲೆ



ಸೇರಿದಂತೆ ರಾಜ್ಯದ ಮನೆ ಮಾತಾಗಿರುವ ಖ್ಯಾತ ಚರ್ಮರೋಗ ತಜ್ಞ ಡಾ.ಶಂಕರೇಗೌಡರಿಗೆ ಲಘು ಹೃದಯಾಘಾತವಾಗಿದ್ದು, ಅವರನ್ನು ಚಿಕಿತ್ಸೆಗಾಗಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ನಗರದ ಬಂದೀಗೌಡ ಬಡಾವಣೆಯಲ್ಲಿರುವ ತಮ್ಮ ನಿವಾಸದಲ್ಲೇ ಕ್ಲಿನಿಕ್ ಮಾಡಿಕೊಂಡಿರುವ ಡಾ.ಶಂಕರೇಗೌಡರಿಗೆ ಸೋಮವಾರ ರಾತ್ರಿ ಎದೆ ನೋವು ಕಾಣಿಸಿಕೊಂಡು ಬಳಿಕ ಹೃದಯಾಘಾತವಾಗಿದೆ. ತಕ್ಷಣ ಅವರನ್ನು ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದ್ದು, ವೈದ್ಯರು 3 ಸ್ಟಂಟ್ ಅಳವಡಿಸಿದ್ದು, ಅವರ ಆರೋಗ್ಯ ಸ್ಥಿರವಾಗಿದೆ.

ರಾಜ್ಯದಲ್ಲೇ ಗೌಡರು ಮನೆ ಮಾತು: ಐದು ರೂ. ವೈದ್ಯರೆಂದೇ ಮನೆ ಮಾತಾಗಿರುವ ಶಂಕರೇಗೌಡರು ಖ್ಯಾತ ಚರ್ಮರೋಗ ತಜ್ಞ. ತಂತ್ರಜ್ಞಾನ ಎಷ್ಟೇ ಮುಂದುವರೆದಿದ್ದರೂ ಸಾವಿರಾರು ರೂ. ಚಿಕಿತ್ಸಾ ವೆಚ್ಚ ಪಡೆಯುವ ಕಾಲದಲ್ಲಿ ಕಳೆದ 25 ವರ್ಷಗಳಿಂದ ಶಂಕರೇಗೌಡರು ಚಿಕಿತ್ಸೆ ಪಡೆದ ರೋಗಿಯಿಂದ ಪಡೆಯುವುದು ಕೇವಲ 5 ರೂ. ಮಾತ್ರ ಈ ನಿಟ್ಟಿನಲ್ಲಿ ಜನಮಾನಸದಲ್ಲಿ ಶಂಕರೇಗೌಡರು ಪ್ರೀತಿ ಪಾತ್ರರಾಗಿ, ಅವರದ್ದೇ ಆದ ಅಭಿಮಾನಿ ವರ್ಗ ಮಂಡ್ಯದಲ್ಲಿದೆ.

ವದಂತಿಗಳಿಗೆ ಕಿವಿಗೊಡಬೇಡಿ: ಸದ್ಯ ಡಾ.ಶಂಕರೇಗೌಡರ ಆರೋಗ್ಯ ಸ್ಥಿರವಾಗಿದ್ದು, ಆಹಾರ ಮತ್ತು ನೀರನ್ನು ಸ್ವೀಕರಿಸುತ್ತಿದ್ದಾರೆ. ಜೊತೆಗೆ ಕುಟುಂಬಸ್ಥರೊಂದಿಗೆ ಚೆನ್ನಾಗಿ ಮಾತನಾಡುತ್ತಿದ್ದಾರೆ. ವದಂತಿಗಳಿಗೆ ಕಿವಿಕೊಡಬೇಡಿ. ಮಧ್ಯಾಹ್ನ ನಾನೇ ಅವರಿಗೆ ಊಟ ಮಾಡಿಸಿದ್ದೇನೆ. ಗಾಳಿ ಸುದ್ದಿಗೆ ಕಿವಿಗೊಡಬೇಡಿ ಎಂದು ಗೌಡರ ಪತ್ನಿ ರುಕ್ಮಿಣಿ ಶಂಕರೇಗೌಡ ಮನವಿ ಮಾಡಿದ್ದಾರೆ.

ಅತಿವೃಷ್ಟಿ ಸಂತ್ರಸ್ತರಿಗೆ ಪರಿಹಾರ ಹೆಚ್ಚಳಕ್ಕೆ ಸಿಎಂ ಜೊತೆ ಚರ್ಚೆ



ಶ್ರೀರಂಗಪಟ್ಟಣ, ಮೇ 24(ವಿನಯ್ ಕಾರೇಕುರ)– ಇತ್ತೀಚೆಗೆ ಸುರಿದ ಮಳೆಯಿಂದ ಮನೆ, ಬೆಳೆ ಆಸ್ತಿ ಕಳೆದುಕೊಂಡಿರುವ ಅತಿವೃಷ್ಟಿ ಸಂತ್ರಸ್ತರಿಗೆ ನೀಡುವ ಪರಿಹಾರದ ಮೊತ್ತ ಹೆಚ್ಚಿಸುವ ಕುರಿತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿ ಮಾಡಿ ಚರ್ಚಿಸಲಾಗುವುದು ಎಂದು ಸಂಸದೆ ಸುಮಲತಾ ಅಂಬರೀಶ್ ತಿಳಿಸಿದರು.

ತಾಲೂಕಿನ ಚಂದಗಿರಿಕೊಪ್ಪಲು ಮತ್ತು ಬಲ್ಲೇನಹಳ್ಳಿಯಲ್ಲಿ ಅತಿವೃಷ್ಟಿಯಿಂದ ಉಂಟಾಗಿರುವ ಹಾನಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಅವರು ಮಾತನಾಡಿದರು.

ಪ್ರಕೃತಿ ವಿಕೋಪದಿಂದ ಆಸ್ತಿಪಾಸ್ತಿ ಕಳೆದುಕೊಂಡವರಿಗೆ ಸರ್ಕಾರ ವೈಜ್ಞಾನಿಕ ರೀತಿಯಲ್ಲಿ ಪರಿಹಾರ ನೀಡುತ್ತಿಲ್ಲ ಎಂಬ ದೂರುಗಳಿವೆ. ಸಂತ್ರಸ್ತರಿಗೆ ಸೂಕ್ತ ಪರಿಹಾರ ನೀಡಬೇಕು ಎಂಬುದು ನನ್ನ ಒತ್ತಾಯವೂ ಆಗಿದೆ ಎಂದರು.

ಮನೆ ಕಳೆದುಕೊಂಡವರಿಗೆ ಪರಿಹಾರ ವಿತರಣೆಯಲ್ಲಿ ವಿಳಂಬವಾಗುತ್ತಿದೆ. ಅಧಿಕಾರಿಗಳು ಸಕಾಲಕ್ಕೆ ವರದಿ ಸಿದ್ಧಪಡಿಸಿ ಜಿಲ್ಲಾಡಳಿತಕ್ಕೆ ಶೀಘ್ರ ಕಳುಹಿಸಬೇಕು ಎಂದು ಕಂದಾಯ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು. ಕಳೆದ ಅಕ್ಟೋಬರ್‌ನಲ್ಲಿ ಅತಿವೃಷ್ಟಿಯಿಂದ ಉಂಟಾದ ನಷ್ಟಕ್ಕೆ ಇನ್ನೂ ಪರಿಹಾರ ಸಿಕ್ಕಿಲ್ಲ ಎಂದು ರೈತರು ಗಮನ ಸೆಳೆದರು.

ಚಂದಗಿರಿಕೊಪ್ಪಲು–ಬಲ್ಲೇನಹಳ್ಳಿ ನಡುವೆ ಅಟ್ಟೆ ಹಳ್ಳಕ್ಕೆ ಸೇತುವೆ ನಿರ್ಮಿಸಿಕೊಡಬೇಕು ಎಂದು ರೈತ ಮಹಿಳೆ ಸಾವಿತ್ರಮ್ಮ, ಜ್ಞಾನೇಶ್, ಗೋಪಾಲ್ ಮನವಿ ಮಾಡಿದರು. ಮುಖಂಡರಾದ ಇಂಡುವಾಳು ಸಚ್ಚಿದಾನಂದ, ದರ್ಶನ್ ಲಿಂಗರಾಜು ಇದ್ದರು.

ಅಗ್ರಹಾರಬಾಚಹಳ್ಳಿ ಗ್ರಾಪಂ ಪ್ರಭಾರ ಅಧ್ಯಕ್ಷರ ಅಧಿಕಾರ ಸ್ವೀಕಾರ



ಕೆ.ಆರ್.ಪೇಟೆ, ಮೇ 24(ಶ್ರೀನಿವಾಸ್)– ತಾಲೂಕಿನ ಅಗ್ರಹಾರಬಾಚಹಳ್ಳಿ ಗ್ರಾಪಂ ಪ್ರಭಾರ ಅಧ್ಯಕ್ಷ ಕುಮಾರಗೌಡ ಅಧಿಕಾರ ಸ್ವೀಕರಿಸಿದರು. ಈ ಹಿಂದಿನ ಅಧ್ಯಕ್ಷೆ ಭಾಗ್ಯಮ್ಮ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಪಂಚಾಯತ್ ರಾಜ್ ಅಧಿನಿಯಮದ ಪ್ರಕಾರ ಮುಂದಿನ ಅಧ್ಯಕ್ಷರ ಆಯ್ಕೆವರೆಗೆ ಉಪಾಧ್ಯಕ್ಷ ಕುಮಾರಗೌಡ ಪ್ರಭಾರ ಅಧ್ಯಕ್ಷರಾಗಿ ಅಧಿಕಾರ ಸ್ವೀಕಾರ ಮಾಡಿ ಗ್ರಾಪಂ ಆಡಳಿತ ನಡೆಸುವಂತೆ ಪಾಂಡವಪುರ ಉಪವಿಭಾಗಾಧಿಕಾರಿಗಳು ನೀಡಿರುವ ಆದೇಶದ ಅನ್ವಯ ಕುಮಾರಗೌಡ ಅವರು ಪಿಡಿಓ ದೇವೇಗೌಡ ಹಾಗೂ ಸದಸ್ಯರ ಸಮ್ಮುಖದಲ್ಲಿ ಪ್ರಭಾರ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದರು.

ನೂತನ ಪ್ರಭಾರ ಅಧ್ಯಕ್ಷರನ್ನು ಟಿಎಪಿಸಿಎಂಎಸ್ ನಿರ್ದೇಶಕ ಅಶೋಕ್, ಗ್ರಾಪಂ ಸದಸ್ಯರಾದ ಆರ್.ರಮೇಶ್, ಚನ್ನೇಗೌಡ, ಫಯಾಜ್ ಉಲ್ಲಾಖಾನ್, ಕುಮಾರ್, ಚಿಲ್ಲದಹಳ್ಳಿ ಆರ್.ಶ್ರೀನಿವಾಸ್, ಪಿಡಿಓ ದೇವೇಗೌಡ, ಬಿಲ್ ಕಲೆಕ್ಟರ್ ನರಸಿಂಹಯ್ಯ, ಗ್ರಂಥಪಾಲಕಿ ಸೌಮ್ಯ, ತ್ರಿವೇಣಿ ಸೇರಿದಂತೆ ಎಲ್ಲಾ ಗ್ರಾಪಂ ಸದಸ್ಯರು ಹಾಗೂ ಸಿಬ್ಬಂದಿ ವರ್ಗ ಅಭಿನಂದಿಸಿದರು.



ಆಮದು ಶುಲ್ಕ ಕಡಿತ: ಅಡುಗೆ ಎಣ್ಣೆ ದರ ಇಳಿಕೆ ಸಾಧ್ಯತೆ

ನವದೆಹಲಿ, ಮೇ 24– ಪೆಟ್ರೋಲ್, ಡೀಸೆಲ್, ಉಜ್ವಲ ಗ್ಯಾಸ್ ಬೆಲೆ ಇಳಿಕೆ ಬೆನ್ನಲ್ಲೇ ಅಡುಗೆ ಎಣ್ಣೆ ಬೆಲೆಯಲ್ಲೂ ಗಣನೀಯ ಇಳಿಕೆಯಾಗುವ ಸಾಧ್ಯತೆ ಇದೆ.

ಕಸ್ಟಮ್ಸ್ ಸುಂಕ ಮತ್ತು ಕೃಷಿ ಮೂಲಸೌಕರ್ಯ ಮತ್ತು ಅಭಿವೃದ್ಧಿ ಸೆಸ್‌ನ ಶೂನ್ಯ ದರದಲ್ಲಿ ಪ್ರತಿ ವರ್ಷ 20 ಲಕ್ಷ ಮೆಟ್ರಿಕ್ ಟನ್ ಕಚ್ಚಾ ಸೋಯಾಬೀನ್ ತೈಲ ಮತ್ತು ಸೂರ್ಯಕಾಂತಿ ಎಣ್ಣೆಯನ್ನು ಆಮದು ಮಾಡಿಕೊಳ್ಳಲು ಕೇಂದ್ರ ಸರ್ಕಾರ ಅನುಮತಿ ನೀಡಿದೆ. ಇದು ಗ್ರಾಹಕರಿಗೆ ಗಮನಾರ್ಹ ಪರಿಹಾರ ನೀಡುತ್ತದೆ ಎಂದು ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸಂಬಂಧಪಟ್ಟ ಅಧಿಸೂಚನೆಯೊಂದಿಗೆ ಟ್ವೀಟ್ ಮಾಡಿದ್ದಾರೆ. ತಾಳೆ ಎಣ್ಣೆಯನ್ನು ಅತೀ ಹೆಚ್ಚು ಉತ್ಪಾದಿಸುವ ಇಂಡೋನೇಷಿಯಾ ರಫ್ತು ಮೇಲೆ ವಿಧಿಸಿದ್ದ ನಿರ್ಬಂಧವನ್ನು ಇತ್ತೀಚೆಗೆ ತೆರವು ಮಾಡಿದೆ. ಉಕ್ರೇನ್‌ನಿಂದ ಸೂರ್ಯಕಾಂತಿ ಎಣ್ಣೆಯೂ ಪೂರೈಕೆಯಾಗುವ ಸಾಧ್ಯತೆ ಇದೆ. ಇದೀಗ ಕೇಂದ್ರ ಸರ್ಕಾರವೂ ಶೂನ್ಯ ತೆರಿಗೆಯಲ್ಲಿ ಆಮದು ಮಾಡಿಕೊಳ್ಳಲು ಅವಕಾಶ ನೀಡಿರುವುದರಿಂದ ಜೂನ್ ಮೊದಲ ವಾರದಲ್ಲೇ ಅಡುಗೆ ಎಣ್ಣೆ ಬೆಲೆಯಲ್ಲಿ ಗಣನೀಯ ಇಳಿಕೆಯಾಗಬಹುದು ಎಂದು ಹೇಳಲಾಗುತ್ತಿದೆ.

ಒಂದನೇ ಪುಟದಿಂದ

ಮಾರ್ಗದುದ್ದಕ್ಕೂ ಮಕ್ಕಳಾದಿ ಸುಸ್ತು!

ಬ್ಯಾಡಗಿ ಮೆಣಸಿನಕಾಯಿಯ ಸಾಸ್ ಅನ್ನು ಪ್ಲಾಸ್ಟಿಕ್ ಡ್ರಮ್‌ಗಳಲ್ಲಿ ತುಂಬಿಸಿ ಸಾಗಿಸಲಾಗುತ್ತಿತ್ತು. ಬೆಂಗಳೂರು–ಕುಶಾಲನಗರ–ನೆಲ್ಯಹುದಿಕೇರಿ–ವಿರಾಜಪೇಟೆ ಮಾರ್ಗವಾಗಿ ಲಾರಿ ಸಂಚರಿಸಿದ್ದು, ಈ ವೇಳೆ ಚಾಲಕನ ಅರಿವಿಗೆ ಬಾರದೇ ಡ್ರಮ್‌ಗಳಿಂದ ಸಾಸ್ ಸೋರಿಕೆಯಾಗಿದೆ. ಬೆಳ್ಳಂಬೆಳಗ್ಗೆ ರಸ್ತೆಯಲ್ಲಿ ಕೆಂಪು ಬಣ್ಣದ ದ್ರವ ಸೋರಿಕೆಯಾಗಿರುವುದನ್ನು ಕಂಡು, ಜನ ಬೆಚ್ಚಿಬಿದ್ದಿದ್ದಾರೆ. ಕೆಲವರಿಗೆ ತಲೆಸುತ್ತು ಬಂದಿದ್ದು, ಅತೀವ



ಘಾಟಿನಿಂದ ತಲೆನೋವು, ಕೆಮ್ಮು, ಕಣ್ಣು ಉರಿ ಮತ್ತಿತರ ಬಾಧೆ ಕಾಣಿಸಿಕೊಂಡಿದೆ.

ಸಿದ್ದಾಪುರಕ್ಕೆ ಬಸ್‌ನಲ್ಲಿ ಬರುತ್ತಿದ್ದ ಶಾಲಾ ವಿದ್ಯಾರ್ಥಿಗಳು, ಪ್ರಯಾಣಿಕರಿಗೆ ಕೆಮ್ಮು, ಸೀನು, ಕಣ್ಣು ಉರಿ ಕಾಣಿಸಿಕೊಂಡಿದೆ. ಬಸ್ ಸಿದ್ದಾಪುರ ನಿಲ್ದಾಣ ತಲುಪುತ್ತಿದ್ದಂತೆ ಭೀತರಾದ ಇತರ ಪ್ರಯಾಣಿಕರು ಬಸ್ಸಿನಿಂದ ಇಳಿದು ದಿಕ್ಕಾಪಾಲಾಗಿ ಓಡಿ ಹೋಗಿದ್ದಾರೆ. ಕೆಲವರು ಆಸ್ಪತ್ರೆಗೆ ತೆರಳಿ ಆರೋಗ್ಯ ತಪಾಸಣೆ ಮಾಡಿಸಿಕೊಂಡಿದ್ದಾರೆ.

ಈ ಬೆಳವಣಿಗೆಯಿಂದ ಆಸ್ಪತ್ರೆಯ ವೈದ್ಯರು, ಸಿಬ್ಬಂದಿ ಹಾಗೂ ಪೊಲೀಸರು ಎಚ್ಚೆತ್ತು ಪರಿಶೀಲಿಸಿದಾಗ ರಸ್ತೆ ಬದಿಯಲ್ಲಿ ಕೆಂಪು ಬಣ್ಣ ಮಿಶ್ರಿತ ದ್ರವ ಸೋರಿಕೆಯಾಗಿರುವುದು ಕಂಡು ಬಂದಿದೆ. ಟಾರ್ಪಾಲ್‌ನಿಂದ ಮುಚ್ಚಲಾಗಿದ್ದ ಲಾರಿಯಲ್ಲಿ ರಾಸಾಯನಿಕ ಸೋರಿಕೆಯಾಗಿರುವುದು ಕಂಡು ಬಂದಿದೆ. ಸಿದ್ದಾಪುರ, ಅಮ್ಮತ್ತಿ, ವಿರಾಜಪೇಟೆಯಲ್ಲೂ ರಸ್ತೆ ಉದ್ದಕ್ಕೂ ದ್ರವ ಸೋರಿಕೆಯಾಗಿರುವುದು ಕಂಡು ಬಂದ ಹಿನ್ನೆಲೆಯಲ್ಲಿ ತಕ್ಷಣ ಎಚ್ಚೆತ್ತುಕೊಂಡ ಸಿದ್ದಾಪುರ ಪೊಲೀಸರು, ಮಾಕುಟ್ಟ ಚೆಕ್‌ಪೋಸ್ಟ್‌ನಲ್ಲಿ ವಾಹನಗಳ ತಪಾಸಣೆಗೆ ಮುಂದಾದರು. ಈ ವೇಳೆ ಕೇರಳ ನೋಂದಣಿಯ ಲಾರಿಯೊಂದರಲ್ಲಿ ಪ್ಲಾಸ್ಟಿಕ್ ಡ್ರಮ್‌ಗಳಲ್ಲಿ ದ್ರವ ರೂಪದ ಪದಾರ್ಥ ಸಾಗಿಸುತ್ತಿರುವುದು ಕಂಡು ಬಂದಿದ್ದು, ಅದರಿಂದಲೇ ಈ ಸೋರಿಕೆ ಆಗಿರುವುದು ಮನದಟ್ಟಾಗಿದೆ.

ಲಾರಿ ಚಾಲಕನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ ಸಂದರ್ಭ ಬೆಂಗಳೂರಿನಿಂದ ಕುಶಾಲನಗರ–ಗುಡ್ಡೆಹೊಸೂರು–ವಿರಾಜಪೇಟೆ ಮಾರ್ಗವಾಗಿ ಕೇರಳದ ಎರ್ನಾಕುಲಂಗೆ ಬ್ಯಾಡಗಿ ಮೆಣಸಿನಕಾಯಿ ಚಿಲ್ಲಿ ಸಾಸ್ ಹಾಗೂ ಇನ್ನಿತರ ಆಹಾರ ಪದಾರ್ಥಗಳಿಗೆ ಬಳಸುವ ವಸ್ತುಗಳ ಸಾಗಾಟ ಮಾಡುತ್ತಿರುವುದಾಗಿ ಹೇಳಿಕೆ ನೀಡಿದ್ದಾನೆ. ಸ್ಥಳಕ್ಕೆ ಆಹಾರ ಇಲಾಖೆ ಹಾಗೂ ಆರೋಗ್ಯ ಇಲಾಖೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿ, ದ್ರವದ ಮಾದರಿಗಳನ್ನು ಸಂಗ್ರಹಿಸಿದರು.

ಆತಂಕ ಬೇಡ: ಲಾರಿಯಿಂದ ಸೋರಿಕೆಯಾದ ದ್ರವದ ಬಗ್ಗೆ ಅಧಿಕಾರಿಗಳು ಪರಿಶೀಲನೆ ನಡೆಸುತ್ತಿದ್ದು, ಮಾದರಿಯನ್ನೂ ಸಂಗ್ರಹಿಸಲಾಗಿದೆ. ಮೇಲ್ನೋಟಕ್ಕೆ ಇದು ಮೆಣಸಿನಕಾಯಿ ಸಾಸ್ ಎಂದು ಕಂಡು ಬಂದಿದೆ ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ. ವೆಂಕಟೇಶ್ ಹೇಳಿದ್ದಾರೆ. ದ್ರವದ ಮಾದರಿಯನ್ನು ತಿಳಿಯಲು ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ಈ ಕುರಿತು ಯಾರೂ ಆತಂಕ ಪಡಬೇಕಾಗಿಲ್ಲ ಎಂದು ಹೇಳಿದರು.

ಸಿದ್ದಾಪುರ ಹಾಗೂ ವಿರಾಜಪೇಟೆ ಪಟ್ಟಣ ಪಂಚಾಯಿತಿ ವತಿಯಿಂದ ರಸ್ತೆಯಲ್ಲಿ ಸೋರಿಕೆಯಾಗಿದ್ದ ದ್ರವಕ್ಕೆ ನೀರು ಸಿಂಪಡಿಸಿ ಸ್ವಚ್ಛಗೊಳಿಸಲಾಯಿತು. ಅಗ್ನಿಶಾಮಕ ದಳ ಸಿಬ್ಬಂದಿ ಕೂಡ ರಸ್ತೆ ಉದ್ದಕ್ಕೂ ನೀರು ಸಿಂಪಡಿಸಿದರು. ಲಾರಿಯನ್ನು ಮಾಕುಟ್ಟ ಬಳಿ ವಶಕ್ಕೆ ಪಡೆಯಲಾಗಿದ್ದು, ಅಲ್ಲಿಯೂ ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗಿದೆ.

ಮಳೆ ಹಾನಿ: 2 ದಿನಗಳೊಳಗೆ ಪರಿಹಾರ ನೀಡಿ

ಮೈಸೂರು, ಮೇ 24– ಮಳೆಯಿಂದ ಹಾನಿ ಉಂಟಾದ ಬೆಳೆ, ಮನೆ ಹಾಗೂ ಜಾನುವಾರುಗಳ ಹಾನಿ ಪರಿಹಾರಗಳನ್ನು 2 ದಿನಗಳೊಳಗೆ ಅಧಿಕಾರಿಗಳು ಅರ್ಹ ಫಲಾನುಭವಿಗಳಿಗೆ ನೀಡಬೇಕು ಎಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ಜಯರಾಮ್ ತಿಳಿಸಿದರು.

ಇಂದು ಹುಣಸೂರು ಮತ್ತು ಕೆಆರ್ ನಗರ ತಾಲೂಕಿನ ಬೆಳೆ ಹಾನಿ ಪ್ರದೇಶಗಳಿಗೆ ಭೇಟಿ ನೀಡಿ ನಂತರ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.



ತಂಬಾಕು ಬೆಳೆ ಹೆಚ್ಚಾಗಿ ಹಾನಿಯಾಗಿದೆ. ಜಂಟಿ ಸಮೀಕ್ಷೆ ಮಾಡಿ ಬೆಳೆ ಹಾನಿಗೆ ಪರಿಹಾರ ನೀಡಲು ಕ್ರಮವಹಿಸಿ. ಮುಂದಿನ ದಿನಗಳಲ್ಲಿ ಹೆಚ್ಚಿನ ಮಳೆಯಾಗುವ ಸಂಭವವಿದ್ದು, ಹೆಚ್ಚಿನ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು. ಜಿಲ್ಲೆಯಲ್ಲಿ ಮಳೆಹಾನಿ ಆಗಿರುವವರಿಗೆ ಬೇಗ ಪರಿಹಾರ ನೀಡಲಾಗಿದೆ. ಆದರೆ ಫಲಾನುಭವಿಗಳಿಗೆ ಇದರ ಬಗ್ಗೆ ಮಾಹಿತಿ ಇಲ್ಲ. ಆದ್ದರಿಂದ ಫಲಾನುಭವಿಗಳಿಗೆ ಪರಿಹಾರ ದೊರೆತಿರುವ ಕುರಿತು ಪತ್ರದ ಮೂಲಕ ಮಾಹಿತಿ ನೀಡುವಂತೆ ತಹಸೀಲ್ದಾರರುಗಳಿಗೆ ಸೂಚಿಸಿದರು.

ನಗರಪ್ರದೇಶಗಳ ಬಡಾವಣೆಗಳಲ್ಲಿ ಮಳೆ ಸಂದರ್ಭದಲ್ಲಿ ಪ್ರವಾಹ ಉಂಟಾಗುತ್ತದೆ. ಆದ್ದರಿಂದ ಚರಂಡಿ ರಾಜಕಾಲುವೆಗಳಲ್ಲಿ ಮಳೆ ನೀರು ಸರಾಗವಾಗಿ ಹರಿಯುವಂತೆ ಡ್ರೈನೇಜ್‌ಗಳನ್ನು ಮಾಡಬೇಕು. ಮಳೆಹಾನಿ ಉಂಟಾಗಿರುವುದನ್ನು ಪರಿಶೀಲನೆ ನಡೆಸಿ ಪರಿಹಾರ ನೀಡಬೇಕು. ಅನರ್ಹರಿಗೆ ಪರಿಹಾರ ನೀಡಬಾರದು ಎಂದು ಅವರು ತಿಳಿಸಿದರು.

ಜಿಲ್ಲಾಧಿಕಾರಿಗಳಾದ ಬಗಾದಿ ಗೌತಮ್ ಅವರು ಮಾತನಾಡಿ, ಬೆಳೆಹಾನಿ ಅಂಕಿಅಂಶಗಳನ್ನು ಪರಿಶೀಲನೆ ಮಾಡಿ ಇಟ್ಟುಕೊಳ್ಳಬೇಕು. ಪರಿಹಾರ ಸಾಫ್ಟ್‌ವೇರ್ ಓಪನ್ ಆದ ತಕ್ಷಣ ಅಪ್ಲೋಡ್ ಮಾಡಿ. ಮಳೆಯಿಂದ ಹಾನಿ ಉಂಟಾದವರಿಗೆ 24 ಗಂಟೆಯೊಳಗೆ ಪರಿಹಾರ ನೀಡಬೇಕು. ತಹಸೀಲ್ದಾರರು ದಾಖಲೆಗಳನ್ನು ಫಲಾನುಭವಿಗಳಿಂದ ಪಡೆದು ತಕ್ಷಣ ಪರಿಹಾರ ನೀಡಬೇಕು. ಜಿಲ್ಲೆಯಲ್ಲಿ 100 ಗ್ರಾಮಗಳನ್ನು ಅತೀ ಹೆಚ್ಚು ಮಳೆ ಹಾನಿ ಉಂಟಾಗಿ ಪ್ರವಾಹ ಬರುವ ಗ್ರಾಮಗಳೆಂದು ಗುರುತಿಸಲಾಗಿದೆ ಎಂದರು.

ಜಿಲ್ಲೆಯ ಹುಣಸೂರು ತಾಲೂಕಿನಲ್ಲಿ 34 ಮನೆಗಳು, ಕೆ.ಆರ್.ನಗರ ತಾಲೂಕಿನಲ್ಲಿ 14 ಮನೆಗಳು ಹಾಗೂ ಪಿರಿಯಾಪಟ್ಟಣ ತಾಲೂಕಿನಲ್ಲಿ 3 ಮನೆಗಳು ಮಳೆಯಿಂದ ಪೂರ್ಣ ಹಾನಿಯಾಗಿವೆ. ಜಿಲ್ಲೆಯಲ್ಲಿ ಒಟ್ಟು 772 ಮನೆಗಳು ಮಳೆಯಿಂದ ಭಾಗಶಃ ಹಾನಿಯಾಗಿದ್ದು, 533 ಮನೆಗಳಿಗೆ ಈಗಾಗಲೇ ಪರಿಹಾರ ವಿತರಿಸಲಾಗಿದೆ ಎಂದು ಮಾಹಿತಿ ನೀಡಿದರು. ಜಿಲ್ಲೆಯಲ್ಲಿ ಮೇ ತಿಂಗಳಿನಲ್ಲಿ ಶೇ.166 ಮಳೆ ಹೆಚ್ಚು ಮಳೆಯಾಗಿದೆ. ಈಗಾಗಲೇ 48% ಬಿತ್ತನೆಯಾಗಿದ್ದು, 251 ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿಯಾಗಿದೆ ಎಂದು ಕೃಷಿ ಇಲಾಖೆಯ ಜಂಟಿ ನಿರ್ದೇಶಕರು ಸಭೆಗೆ ಮಾಹಿತಿ ನೀಡಿದರು.

ಸಭೆಯಲ್ಲಿ ಮಹಾನಗರ ಪಾಲಿಕೆ ಆಯುಕ್ತರಾದ ಲಕ್ಷ್ಮೀಕಾಂತರೆಡ್ಡಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಪೂರ್ಣಿಮಾ, ಅಪರ ಜಿಲ್ಲಾಧಿಕಾರಿಗಳಾದ ಡಾ.ಮಂಜುನಾಥಸ್ವಾಮಿ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಆದಿವಾಸಿಗಳ ಸಮಸ್ಯೆ ಬಗೆಹರಿಸಲು ಸರ್ಕಾರ ಸಿದ್ಧ

ನಿವೃತ್ತ ಎಡಿಜಿಪಿ, ಕರ್ನಾಟಕ ವನ್ಯಜೀವಿ ಸಂರಕ್ಷಣಾ ಮಂಡಳಿ ಸದಸ್ಯ ಕೆ.ಎಸ್.ಚಿಕ್ಕೇರೂರು

ಹನಗೋಡು, ಮೇ 24– ಒಮ್ಮೆ ಪುನರ್ವಸತಿಗೊಂಡ ಆದಿವಾಸಿಗಳು ಮತ್ತೆ ಕಾಡಿನಲ್ಲಿ ನೆಲೆಸಲು ಅವಕಾಶವಿಲ್ಲ. ತಮ್ಮ ಸಮಸ್ಯೆಗಳನ್ನು ಕಾನೂನು ಚೌಕಟ್ಟಿನೊಳಗೆ ಪರಿಹರಿಸಲು ಸರ್ಕಾರ ಸಿದ್ಧ ಎಂದು ನಿವೃತ್ತ ಎಡಿಜಿಪಿ ಹಾಗೂ ಕರ್ನಾಟಕ ವನ್ಯಜೀವಿ ಸಂರಕ್ಷಣಾ ಮಂಡಳಿ ಸದಸ್ಯ ಕೆಎಸ್.ಚಿಕ್ಕೇರೂರು ತಿಳಿಸಿದರು.

ಹನಗೋಡು ಹೋಬಳಿಯ ಶೆಟ್ಟಹಳ್ಳಿ–ಲಕ್ಕಪಟ್ಟಣ ಪುನರ್ವಸತಿ ಕೇಂದ್ರಕ್ಕೆ ಸೋಮವಾರ ಸಂಜೆ ಭೇಟಿ ನೀಡಿ ಅಲ್ಲಿನ ನಿವಾಸಿಗಳ ಕುಂದುಕೊರತೆ ಆಲಿಸಿ ಮಾತನಾಡಿದ ಅವರು, ನೀವುಗಳು ನಾಗರಹೊಳೆ ಕಾಡಿನಿಂದ ಪುನರ್ವಸತಿಗೊಂಡು ಸರ್ಕಾರದ ಯೋಜನೆಯ ಫಲಾನುಭವಿಗಳಾಗಿದ್ದಿರಿ. ಒಮ್ಮೆ ಸರ್ಕಾರದ ಫಲಾನುಭವಿಗಳಾದರೇ ಮತ್ತೆ ಕಾಡಿನೊಳಗೆ ನೆಲಸಲು ಸಾಧ್ಯವಿಲ್ಲ. ನಿಮ್ಮಗಳ ಸಮಸ್ಯೆಗಳನ್ನು ಬಗೆಹರಿಸಲು ಸರ್ಕಾರ ಸಿದ್ಧವಿದೆ. ಆದ್ದರಿಂದ ನೀವು ಹಾಡಿಯಲ್ಲಿ ಅರಣ್ಯ ಹಕ್ಕು ಸಮಿತಿ ರಚಿಸಿ. ಆ ಮೂಲಕ ಸರ್ಕಾರಕ್ಕೆ ತಮ್ಮ ಸಮಸ್ಯೆಗಳ ಬಗ್ಗೆ ಮಾಹಿತಿ ನೀಡಿದರೆ ಬಗೆಹರಿಸಲು ಅನುಕೂಲವಾಗಲಿದೆ. ಹೀಗಾಗಿ ಅರಣ್ಯ ಹಕ್ಕು ಸಮಿತಿ ರಚನೆ ಮಾಡಬೇಕೆಂದು ಸಲಹೆ ನೀಡಿದರು.



ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಚೇತನ್ ಕುಮಾರ್ ಮಾತನಾಡಿ, ಪುನರ್ವಸತಿಗೊಂಡಿರುವ ಆದಿವಾಸಿಗಳು ಕಾನೂನನ್ನು ಕೈಗೆತ್ತಿಕೊಳ್ಳದೆ ತಮ್ಮ ಸಮಸ್ಯೆ ತಿಳಿಸಿದರೆ ಜಿಲ್ಲಾಧಿಕಾರಿಗಳ ಗಮನಕ್ಕೆ ತಂದು, ನಿಮ್ಮ ಪುನರ್ವಸತಿ ಕೇಂದ್ರದಲ್ಲಿ ಸಭೆ ನಡೆಸಿ ಸಮಸ್ಯೆ ಬಗೆಹರಿಸಬಹುದು. ಆದಿವಾಸಿಗಳು ಕಡ್ಡಾಯವಾಗಿ ಮಕ್ಕಳನ್ನು ಶಾಲೆಗೆ ಸೇರಿಸಿ ಉತ್ತಮ ಶಿಕ್ಷಣ ಕೊಡಿಸಬೇಕೆಂದು ತಿಳಿಸಿದರು.

ಪುನರ್ವಸತಿ ಕೇಂದ್ರದ ನಿವಾಸಿ ಚೌಡಮ್ಮ ಮಾತನಾಡಿ, 2011ರಲ್ಲಿ ಹೆಚ್.ಡಿ.ಕೋಟೆ ತಾಲೂಕಿನ ನಾಗರಹೊಳೆಯ ಬೋಗಾಪುರ ಹಾಡಿಯ 40 ಕುಟುಂಬಗಳನ್ನು ಅರಣ್ಯ ಇಲಾಖೆ ಹಾಗೂ ಸ್ವಯಂಸೇವಾ ಸಂಸ್ಥೆಗಳ ಸಹಕಾರದೊಂದಿಗೆ ಶೆಟ್ಟಹಳ್ಳಿ–ಲಕ್ಕಪಟ್ಟಣದ ಪುನರ್ವಸತಿ ಕೇಂದ್ರಕ್ಕೆ ಸ್ಥಳಾಂತರಿಸಲಾಯಿತು. ಆದರೆ ಪುನರ್ವಸತಿ ಕೇಂದ್ರದಲ್ಲಿ ನಮಗೆ ಯಾವುದೇ ಮೂಲಭೂತ ಸೌಕರ್ಯಗಳನ್ನು ಇದುವರೆವಿಗೂ ಸರ್ಕಾರ ಕಲ್ಪಿಸಿಲ್ಲ. ಆದ್ದರಿಂದ ನಾವು ಜ.15ರಂದು ಮತ್ತೆ ಕಾಡಿಗೆ ವಾಪಸ್ ತೆರಳಿ ವಾಸ್ತವ್ಯ ಹೂಡಲು ಮುಂದಾಗಿದ್ದೇವು. ಆದರೆ ಅರಣ್ಯ ಹಾಗೂ ಪೊಲೀಸ್ ಇಲಾಖೆ ಅಧಿಕಾರಿಗಳು ನಮ್ಮನ್ನು ವಾಪಸ್ ಕರೆ ತಂದಿದ್ದಾರೆ. ನಮಗೆ ಮೂಲ ಸೌಲಭ್ಯ ಕಲ್ಪಿಸಿ, ನಮ್ಮ ಸಮಸ್ಯೆಗಳನ್ನು ಬಗೆಹರಿಸದಿದ್ದರೆ ಮತ್ತೆ ನಾವು ಕಾಡಿಗೆ ತೆರಳುವುದಾಗಿ ತಿಳಿಸಿದರು.

ಮನವಿ ಸಲ್ಲಿಕೆ: ಪುನರ್ವಸತಿ ಕೇಂದ್ರದ ಮುಖಂಡರು ಮೂಲಸೌಲಭ್ಯ ಕಲ್ಪಿಸುವಂತೆ ಮನವಿ ಮಾಡಿದರು. ಮನವಿ ಸ್ವೀಕರಿಸಿದ ಎಸ್‌ಪಿ ಚೇತನ್‌ಕುಮಾರ್ ತಮ್ಮ ಮನವಿ ಪತ್ರವನ್ನು ಮೈಸೂರು ಜಿಲ್ಲಾಧಿಕಾರಿಗಳಿಗೆ ತಲುಪಿಸುವುದಾಗಿ ಭರವಸೆ ನೀಡಿ ಕೂಡಲೇ ನಿಮ್ಮ ಹಾಡಿಯಲ್ಲಿ ಸಭೆ ನಡೆಸಲಾಗುವುದು ಎಂದರು.


ಸಭೆಯಲ್ಲಿ ಮಾನವ ಹಕ್ಕು ಕಾರ್ಯಕರ್ತ ಪ್ರಸನ್ನ ಕುಮಾರ್, ಆದಿವಾಸಿ ಮುಖಂಡ ವಿಜಯಕುಮಾರ್, ನೇರಳಕುಪ್ಪೆ ಗ್ರಾಪಂ ಮಾಜಿ ಸದಸ್ಯ ರಾಜು, ಜಯರಾಮ್ ಚಂದ್ರವಾಡಿ, ಕರಿಯಪ್ಪ ಸೇರಿದಂತೆ ಇತರರಿದ್ದರು.

ಸೆಂಟ್ ಜೋಸೆಫ್ ಶಾಲೆಗೆ ಶೇ.100ರಷ್ಟು ಫಲಿತಾಂಶ

ಹುಣಸೂರು, ಮೇ 24(ಕೆಕೆ)– ನಗರದ ಸೆಂಟ್ ಜೋಸೆಫ್ ವಿದ್ಯಾಸಂಸ್ಥೆಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.100ರಷ್ಟು ಫಲಿತಾಂಶ ಬಂದಿದೆ ಎಂದು ಸಂಸ್ಥೆಯ ಬಿಂದು ಎಲಿಜಬೆತ್ ತಿಳಿಸಿದರು. ಕನ್ನಡ ಮಾಧ್ಯಮದ 85, ಆಂಗ್ಲ ಮಾಧ್ಯಮದ 141 ಸೇರಿದಂತೆ ಒಟ್ಟು 226 ವಿದ್ಯಾರ್ಥಿಗಳು ಈ ಬಾರಿ ಪರೀಕ್ಷೆ ಬರೆದಿದ್ದು, ಶೇ.100ರಷ್ಟು ಫಲಿತಾಂಶ ಬಂದಿದೆ. ಕನ್ನಡ ಮಾಧ್ಯಮದಲ್ಲಿ 57, ಇಂಗ್ಲಿಷ್ ಮಾಧ್ಯಮದಲ್ಲಿ 128 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ. ಕನ್ನಡದಲ್ಲಿ 8, ಇಂಗ್ಲಿಷ್, ವಿಜ್ಞಾನ, ಹಿಂದಿಯಲ್ಲಿ ತಲಾ ಓರ್ವ, ಗಣಿತದಲ್ಲಿ 3, ಸಮಾಜದಲ್ಲಿ 10 ವಿದ್ಯಾರ್ಥಿಗಳು 100ಕ್ಕೆ 100 ಅಂಕ ಪಡೆದಿದ್ದಾರೆ ಎಂದರು.

ಸ್ಯಾಂಡಲ್‌ವುಡ್ ನಿರ್ದೇಶಕ ಕೆ.ಎನ್.ಮೋಹನ್‌ಕುಮಾರ್ ವಿಧಿವಶ

ಬೆಂಗಳೂರು, ಮೇ 24– ಸ್ಯಾಂಡಲ್‌ವುಡ್ ನಿರ್ದೇಶಕ, ಅಂತರರಾಷ್ಟ್ರೀಯ ವನ್ಯಜೀವಿ ಛಾಯಾಗ್ರಾಹಕ ಕೆ.ಎನ್. ಮೋಹನ್ ಕುಮಾರ್(56) ಹೃದಯಾಘಾತದಿಂದ ವಿಧಿವಶರಾಗಿದ್ದಾರೆ. ಎನ್.ಆರ್.ಕಾಲೋನಿಯ ರಾಮಲೀಲಾ ಅಪಾರ್ಟ್‌ಮೆಂಟ್‌ನಲ್ಲಿ ನೆಲೆಸಿದ್ದ ಮೋಹನ್ ಅವರು, ಸ್ನಾನದ ಕೋಣೆಯಲ್ಲಿ ಆಕಸ್ಮಿಕವಾಗಿ ಕಾಲು ಜಾರಿ ಬಿದ್ದು ತೀವ್ರ ಅಸ್ವಸ್ಥರಾಗಿದ್ದರು. ತಕ್ಷಣವೇ ಅವರನ್ನು ಸಮೀಪದ ರಂಗ ದೊರೈ ಆಸ್ಪತ್ರೆಗೆ ಕರೆದೊಯ್ಯುವಾಗ ಮಾರ್ಗ ಮಧ್ಯೆ ಕೊನೆಯುಸಿರೆಳೆದಿದ್ದಾರೆ.



ಮೃತ ಮೋಹನ್ ಕುಮಾರ್ ಅವರು ತಾಯಿ ಕಮಲಮ್ಮ, ಪತ್ನಿ ಹಾಗೂ ನಟಿ, ನಿರೂಪಕಿ ವತ್ಸಲಾ ಮೋಹನ್, ಪುತ್ರಿ ಮತ್ತು ನಟಿ ಅನನ್ಯಾ ಮೋಹನ್ ಅವರನ್ನು ಅಗಲಿದ್ದಾರೆ.

ರಂಗಭೂಮಿ ಹಿನ್ನೆಲೆಯಿಂದ ಬಂದು ದೂರದರ್ಶನ ಚಂದನ ವಾಹಿನಿಯಲ್ಲಿ ಪ್ರಸಾರವಾಗುತ್ತಿದ್ದ ಜಾನಪದ ಕಾರ್ಯಕ್ರಮದಲ್ಲಿ ನಿರೂಪಕರಾಗುವ ಮೂಲಕ ಕಿರುತೆರೆ ಪ್ರವೇಶಿಸಿದರು. ಎಂಜಿನಿಯರ್ ಪದವಿಧರರಾಗಿದ್ದ ಕೆ.ಎನ್.ಮೋಹನ್ ರಂಗಭೂಮಿ, ಧಾರಾವಾಹಿ, ಪತ್ರಿಕೋದ್ಯಮ ಹೀಗೆ ಹಲವಾರು ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಮೃತರು ಸಹೋದ್ಯೋಗಿಗಳು, ಅಭಿಮಾನಿಗಳು, ಸ್ನೇಹಿತರು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಆನೇಕಲ್ ತಾಲೂಕಿನ ಸಮಂದೂರಿನಲ್ಲಿ ಮಂಗಳವಾರ ಅವರ ಅಂತ್ಯಕ್ರಿಯೆ ನಡೆಯಿತು.

ತಮ್ಮ ಪತ್ನಿ ವತ್ಸಲಾ ಮೋಹನ್ ಅವರ ಸಜ್ಜಾದನಾ ಗಣೇಶ ಕಾದಂಬರಿ ಆಧರಿಸಿ 2016ರಲ್ಲಿ ಬೊಂಬೆಯಾಟ ಎಂಬ ಮಕ್ಕಳ ಸಿನಿಮಾವನ್ನು ನಿರ್ದೇಶಿಸಿದ್ದರು. ಈ ಸಿನಿಮಾಕ್ಕೆ ಹಲವಾರು ಪ್ರಶಸ್ತಿಗಳು ಲಭಿಸಿತ್ತು.

ಮೂರು ತಿಂಗಳಿಗೊಮ್ಮೆ ಎಸ್‌ಸಿ, ಎಸ್‌ಟಿ ಹಿತರಕ್ಷಣಾ ಸಭೆ: ಎಸ್‌ಪಿ ಭರವಸೆ



ಪ್ರತಿ ವರ್ಷ 20-25 ದೌರ್ಜನ್ಯ ಪ್ರಕರಣಗಳು ದಾಖಲಾಗುತ್ತಿವೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಊರು, ಕೇರಿ, ಕಾಲೋನಿಗಳಲ್ಲಿ ಕೋವಿಡ್ ಕಾರಣದಿಂದ ಚಿಲ್ಲರೆ ಅಂಗಡಿ ಹಾಗೂ ಗೂಡಂಗಡಿಗಳಲ್ಲಿ ಅಕ್ರಮ ಮದ್ಯ ಮಾರಾಟ ದಂಧೆಯಾಗುತ್ತಿದೆ. ಪ್ರಮುಖ ಪಟ್ಟಣಗಳಲ್ಲಿ ಸಂಚಾರ ದಟ್ಟಣೆ ವ್ಯಾಪಕವಾಗುತ್ತಿದೆ. ಹೆಲ್ಮೆಟ್‌ರಹಿತ, ಪರವಾನಗಿರಹಿತ ವಾಹನ ಚಾಲನೆಯಂತಹ ಪ್ರಕರಣಗಳನ್ನು ಮುಂದಿನ ದಿನಗಳಲ್ಲಿ ಸಮರ್ಪಕವಾಗಿ ತಡೆಯಲು ನಿರಂತರ ಪೊಲೀಸ್ ಕಾರ್ಯಾಚರಣೆ ನಡೆಸಿ ಸಮಸ್ಯೆಗಳ ಶೀಘ್ರ ಇತ್ಯರ್ಥಕ್ಕೆ ಕ್ರಮ ವಹಿಸಲಾಗುವುದು
– ಟಿ.ಪಿ.ಶಿವಕುಮಾರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ.

ಚಾಮರಾಜನಗರ, ಮೇ 24-ಜಿಲ್ಲೆಯಲ್ಲಿ ಪರಿಶಿಷ್ಟರ ಮೇಲಿನ ದೌರ್ಜನ್ಯ ಪ್ರಕರಣಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಪ್ರತಿ 3 ತಿಂಗಳಿಗೊಮ್ಮೆ ಪರಿಶಿಷ್ಟ ಜಾತಿ, ಪಂಗಡ ಸಮುದಾಯದ ಹಿತರಕ್ಷಣಾ ಸಭೆ ನಡೆಸಲಾಗುವುದು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಟಿ.ಪಿ.ಶಿವಕುಮಾರ್ ಭರವಸೆ ನೀಡಿದರು.

ತಮ್ಮ ಕಚೇರಿ ಸಭಾಂಗಣದಲ್ಲಿಂದು ನಡೆದ ಜಿಲ್ಲಾ ಮಟ್ಟದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಹಿತರಕ್ಷಣಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಸಭೆಯ ಆರಂಭದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಮುಖಂಡರಿಂದ ಸಮಸ್ಯೆಗಳನ್ನು ಆಲಿಸಿದ ಅವರು, ಸಮುದಾಯದ ಹಿತರಕ್ಷಣೆಗಾಗಿ ಸರ್ಕಾರ ಹಲವು ಕಾನೂನುಗಳನ್ನು ಜಾರಿಗೊಳಿಸಿದ್ದರೂ ಸಹ ಸಮುದಾಯದ ಮೇಲೆ ಮಾನಸಿಕ ಹಾಗೂ ದೈಹಿಕವಾಗಿ ದೌರ್ಜನ್ಯ ನಡೆಯುತ್ತಿದೆ. ಇದನ್ನು ತಡೆದು ಸಮಾಜದಲ್ಲಿ ಗೌರವಯುತ ಬದುಕು ದೊರಕಿಸಿಕೊಡಲು ಜಿಲ್ಲೆಯಾದ್ಯಂತ ಆಯಾ ಠಾಣೆ, ಉಪವಿಭಾಗ ಹಾಗೂ ಜಿಲ್ಲಾ ಮಟ್ಟದಲ್ಲಿ ಸಮುದಾಯದ ಮುಖಂಡರ ಸಮ್ಮುಖದಲ್ಲಿ ತ್ರೈಮಾಸಿಕ ಹಿತರಕ್ಷಣಾ ಸಭೆ ನಡೆಸಿ, ಸಮಸ್ಯೆಗಳ ಪರಿಹಾರಕ್ಕೆ ಆದ್ಯತೆ ನೀಡಲಾಗುವುದು ಎಂದು ತಿಳಿಸಿದರು.

ಮುಖಂಡರಾದ ಸಿ.ಎಂ.ಕೃಷ್ಣಮೂರ್ತಿ ಅವರು, ಪೊಲೀಸ್ ದೂರು ಪ್ರಾಧಿಕಾರ ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿಲ್ಲ. ಪ್ರಾಧಿಕಾರದಲ್ಲಿ ಇದುವರೆಗೂ ಎಷ್ಟು ದೂರುಗಳು ದಾಖಲಾಗಿವೆ. ಎಷ್ಟು ಇತ್ಯರ್ಥವಾಗಿವೆ? ಮಡಹಳ್ಳಿ ಗುಡ್ಡ ಕುಸಿತದಲ್ಲಿ ಸಮುದಾಯದ ಜನರು ಪ್ರಾಣಾಪಾಯದಲ್ಲಿ ಸಿಲುಕಿದ್ದಾರೆಯೇ ಎಂದು ಪ್ರಶ್ನಿಸಿದರಲ್ಲದೆ, ನಗರದ ಜಿಲ್ಲಾಸ್ಪತ್ರೆ ಮುಂಭಾಗವಿರುವ ಮದ್ಯದಂಗಡಿ ತೆರವುಗೊಳಿಸಬೇಕು. ಜಿಲ್ಲೆಯಾದ್ಯಂತ ರೌಡಿಪಟ್ಟಿಯಲ್ಲಿದ್ದು, ಉತ್ತಮ ಜೀವನ ನಡೆಸುತ್ತಿರುವವರನ್ನು ಬಿಡುಗಡೆ ಮಾಡುವಂತೆ ಸಭೆಯಲ್ಲಿ ಕೋರಿದರು. ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪರಿಶೀಲಿಸಿ ಕ್ರಮ ವಹಿಸಲಾಗುವುದು ಎಂದರು.

ನಗರಸಭೆ ಮಾಜಿ ಸದಸ್ಯ ಸುರೇಶ್ ನಾಯ್ಕ, ಪಟ್ಟಣದ ವಿವಿಧೆಡೆಗಳಲ್ಲಿ ಜೂಜು ಕೇಂದ್ರಗಳು ಅವ್ಯಾಹತವಾಗಿ ನಡೆಯುತ್ತಿವೆ. ರಿಕ್ರಿಯೇಷನ್ ಕ್ಲಬ್‌ಗಳ ಹೆಸರಿನಲ್ಲಿ ದಂಧೆ ನಡೆಸುತ್ತಿದ್ದಾರೆ. ಇದನ್ನು ತಕ್ಷಣವೇ ನಿಯಂತ್ರಿಸಬೇಕು ಎಂದು ಒತ್ತಾಯಿಸಿದರು.

ಚಾ.ಗು. ನಾಗರಾಜು ಅವರು, ಪೊಲೀಸ್ ಠಾಣೆಗಳಲ್ಲಿ ಎಫ್‌ಐಆರ್ ದಾಖಲಿಸುವಾಗ ಪ್ರಭಾವಿಗಳ ಹಿತರಕ್ಷಣೆಗಾಗಿ ಸತ್ಯಾಸತ್ಯತೆ ಮರೆಮಾಚಲಾಗುತ್ತಿದೆ. ಪ್ರಕರಣವನ್ನು ವೈಜ್ಞಾನಿಕ ಹಾಗೂ ಕೂಲಂಕಶವಾಗಿ ಪರಿಶೀಲಿಸಿ ಎಫ್‌ಐಆರ್ ದಾಖಲಿಸಬೇಕು. ಎಸ್‌ಸಿ ಎಸ್‌ಟಿ ಬಡಾವಣೆಗಳಿಗೆ ಸಿ.ಸಿ.ಕ್ಯಾಮೆರಾ ಅಳವಡಿಸುವಂತೆ ಕೋರಿದರು. ಬೊಮ್ಮಲಾಪುರದ ನಂದೀಶ್, ಗ್ರಾಮಗಳಲ್ಲಿ ಇನ್ನೂ ಸಾಮಾಜಿಕ ಬಹಿಷ್ಕಾರಗಳು ಚಾಲ್ತಿಯಲ್ಲಿವೆ. ಇದನ್ನು ತಡೆಯಬೇಕು. ಕೊಳ್ಳೇಗಾಲದ ನಾಗರಾಜು, ಕೊಳ್ಳೇಗಾಲ ಪಟ್ಟಣಕ್ಕೆ ಮಹಿಳಾ ಪೊಲೀಸ್ ಹಾಗೂ ಸಂಚಾರ ಪೊಲೀಸ್ ಠಾಣೆಗಳ ಅಗತ್ಯವಿದ್ದು, ಶೀಘ್ರವಾಗಿ ಮಂಜೂರು ಮಾಡಿಸುವಂತೆ ಕೋರಿದರು.

ಸಭೆಯಲ್ಲಿ ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ಎಸ್. ಸುಂದರರಾಜು, ಡಿವೈಎಸ್ಪಿ ಪ್ರಿಯದರ್ಶಿನಿ ಸಾಣೆಕೊಪ್ಪ, ಕೊಳ್ಳೇಗಾಲ ಡಿವೈಎಸ್ಪಿ ನಾಗರಾಜು, ಅಬಕಾರಿ ಆಯುಕ್ತ ಶ್ರೀನಿವಾಸ್, ಉಪ ಆಯುಕ್ತ ಮೋಹನ್‌ಕುಮಾರ್, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಮಂಜುಳಾ, ತಾಲೂಕು ಸಮಾಜ ಕಲ್ಯಾಣಾಧಿಕಾರಿ ಚಿಕ್ಕಬಸವಯ್ಯ, ಇತರರಿದ್ದರು.

ಸಬ್‌ರಿಜಿಸ್ಟ್ರಾರ್ ಕಚೇರಿಯಲ್ಲಿ ಪತ್ರ ಬರಹಗಾರನ ಹುಟ್ಟುಹಬ್ಬ ಆಚರಣೆ; ಸಾರ್ವಜನಿಕರಿಂದ ಆಕ್ರೋಶ





ಯಳಂದೂರು, ಮೇ 24(ವಿ.ನಾಗರಾಜು)- ಸಬ್‌ರಿಜಿಸ್ಟ್ರಾರ್ ಕಚೇರಿಯಲ್ಲಿ ಪತ್ರಬರಹಗಾರರೊಬ್ಬರ ಹುಟ್ಟುಹಬ್ಬವನ್ನು ಕಚೇರಿ ಸಿಬ್ಬಂದಿ ಆಚರಿಸಿದ್ದಾರೆ ಎಂಬ ಆರೋಪ ಕೇಳಿ ಬಂದಿದ್ದು, ಸಾರ್ವಜನಿಕರಿಂದ ಆಕ್ರೋಶ ವ್ಯಕ್ತವಾಗಿದೆ ತಾಲೂಕಿನ ಸಮೀಪದ ಕುದೇರು ಸಬ್‌ರಿಜಿಸ್ಟ್ರಾರ್ ಕಚೇರಿಯಲ್ಲಿ ಸೋಮವಾರ ಕಚೇರಿ ಸಿಬ್ಬಂದಿ ಪತ್ರಬರಹಗಾರ ಮಧು ಅಲಿಯಾಸ್ ಮಹದೇವಸ್ವಾಮಿ ಅವರ ಹುಟ್ಟುಹಬ್ಬ ಆಚರಣೆ ಮಾಡಿದ್ದು, ಸರ್ಕಾರಿ ಕಚೇರಿ ದುರ್ಬಳಕೆ ಮಾಡಿಕೊಂಡಿದ್ದಾರೆ ಎಂಬ ಆರೋಪ ಕೇಳಿ ಬಂದಿದೆ.

ಸಬ್‌ರಿಜಿಸ್ಟ್ರಾರ್ ಕಚೇರಿಯ ಒಳಗಡೆ ಕಡತಗಳಿದ್ದು, ಕೇಕ್ ಕತ್ತರಿಸುವ ವೇಳೆ ಬೆಂಕಿ ಕಿಡಿ ಬಿದ್ದು, ಅನಾಹುತ ಸಂಭವಿಸಿದರೆ ಯಾರು ಹೊಣೆ ಎಂಬುದು ಸಾರ್ವಜನಿಕರ ಪ್ರಶ್ನೆಯಾಗಿದ್ದು, ಸದ್ಯ ಹುಟ್ಟುಹಬ್ಬ ಆಚರಣೆ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿ ಚರ್ಚೆಗೆ ಗ್ರಾಸವಾಗಿದೆ.

ಸರ್ಕಾರಿ ಕಚೇರಿ ದುರ್ಬಳಕೆ ಹಿನ್ನೆಲೆಯಲ್ಲಿ ಪತ್ರ ಬರಹಗಾರನ ಹುಟ್ಟುಹಬ್ಬಕ್ಕೆ ಸಹಕರಿಸಿದ ಕಚೇರಿ ಸಿಬ್ಬಂದಿ ನಿರ್ಮಲಾ, ವಾಣಿ, ಮಂಜು ಅವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು ಎಂದು ಸಾರ್ವಜನಿಕರಿಂದ ಆಗ್ರಹ ಕೇಳಿ ಬರುತ್ತಿದೆ.

ಈ ಬಗ್ಗೆ ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಸಂಚಾಲಕ ಯರಿಯೂರು ರಾಜಣ್ಣ ಪ್ರತಿಕ್ರಿಯಿಸಿ, ಕುದೇರು ಸಬ್‌ರಿಜಿಸ್ಟ್ರಾರ್ ಕಚೇರಿಯ ಮಧ್ಯವರ್ತಿಯ ಹುಟ್ಟುಹಬ್ಬವನ್ನು ಆ ಕಚೇರಿಯ ಕೆಲ ಅಧಿಕಾರಿಗಳು ಕಚೇರಿ ಕಡತಗಳಿರುವ ಕೊಠಡಿಯಲ್ಲಿ ಆಚರಿಸಿರುವುದು ಖಂಡನೀಯ. ಆತ ಖಾಸಗಿ ವ್ಯಕ್ತಿಯಾಗಿದ್ದು, ದೀಪ ಬೆಳಗಿಸಿ ಕೇಕ್ ಕತ್ತರಿಸುವಾಗ ಕ್ಯಾಂಡಲ್‌ನಿಂದ ಆಕಸ್ಮಿಕ ಬೆಂಕಿ ಹೊತ್ತಿ ದಾಖಲಾತಿಗಳು ನಾಶವಾಗಿದ್ದರೆ ಯಾರು ಹೊಣೆ? ಒಬ್ಬ ಖಾಸಗಿ ವ್ಯಕ್ತಿಯನ್ನು ಕರೆದು ಕಚೇರಿಯಲ್ಲಿ ಹುಟ್ಟುಹಬ್ಬ ಆಚರಿಸುತ್ತಿರುವ ಅಧಿಕಾರಿಗಳ ನಡೆ ಸಮಂಜಸವಲ್ಲ. ಈ ರೀತಿ ಸರ್ಕಾರಿ ಕಚೇರಿಯಲ್ಲಿ ಹುಟ್ಟುಹಬ್ಬ ಆಚರಣೆ ಮಾಡಿರುವುದನ್ನು ದಲಿತ ಸಂಘರ್ಷ ಸಮಿತಿ ಖಂಡಿಸುತ್ತದೆ. ಕೂಡಲೇ ಇವರ ವಿರುದ್ಧ ಕಾನೂನು ಕ್ರಮ ಜರುಗಿಸದೇ ಹೋದಲ್ಲಿ ಉಗ್ರ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ.

ಮುಂಬರುವ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಗಳ ಗೆಲುವು ಖಚಿತ



ಹನೂರು, ಮೇ 24(ಸೋಮು)-ಮುಂಬರುವ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಗಳನ್ನು ಗೆಲ್ಲಿಸುವುದರ ಮೂಲಕ ನರೇಂದ್ರ ಮೋದಿ ಅವರ ಕೈ ಬಲಪಡಿಸಬೇಕು ಎಂದು ಬಿಜೆಪಿ ಓಬಿಸಿ ಮೋರ್ಚಾ ಜಿಲ್ಲಾ ಸಂಯೋಜಕ ಜನದನಿ ಬಿ.ವೆಂಕಟೇಶ್ ತಿಳಿಸಿದರು.

ಪಟ್ಟಣದ ಬಿಜೆಪಿ ಕಚೇರಿಯಲ್ಲಿ ಆಯೋಜಿಸಿದ್ದ ಬಿಜೆಪಿ ಓಬಿಸಿ ಮೋರ್ಚಾ ಕಾರ್ಯಕಾರಿಣಿ ಸಭೆಯಲ್ಲಿ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿ ಅವರು ಉತ್ತಮ ಆಡಳಿತ ನೀಡುವ ಮೂಲಕ ಹಲವು ಜನಪರ ಯೋಜನೆಗಳನ್ನು ಜಾರಿಗೊಳಿಸಿ ಜನರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಅಲ್ಲದೆ ಸದೃಢ ರಾಷ್ಟ್ರ ನಿರ್ಮಾಣಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದಾರೆ. ಇತ್ತ ರಾಜ್ಯದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ನೇತೃತ್ವದ ಸರ್ಕಾರದ ಆಡಳಿತವನ್ನು ಮೆಚ್ಚಿದ್ದು, ಜನತೆಯಿಂದ ಪ್ರಶಂಸೆ ವ್ಯಕ್ತವಾಗಿದೆ. ಬಿಜೆಪಿ ಸರ್ಕಾರದ ಬಗ್ಗೆ ಜನರಲ್ಲಿ ಒಲವಿದೆ. ಆದ್ದರಿಂದ ಮುಂಬರುವ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸಲು ಸಜ್ಜಾಗಬೇಕಿದೆ. ಬಿಜೆಪಿ ಸರ್ಕಾರದ ಸಾಧನೆ ಬಗ್ಗೆ ಜನರಿಗೆ ಮನದಟ್ಟು ಮಾಡುವುದರ ಮೂಲಕ ಪಕ್ಷವನ್ನು ಬೂತ್ ಮಟ್ಟದಲ್ಲಿ ಮತ್ತಷ್ಟು ಬಲಗೊಳಿಸಬೇಕು ಎಂದು ತಿಳಿಸಿದರು.

ಬಣ್ಣ ಮತ್ತು ಅರಗು ಕಾರ್ಖಾನೆ ಅಧ್ಯಕ್ಷ ಪಣೀಶ್ ಮಾತನಾಡಿ, ಉತ್ತಮ ಆಡಳಿತ ನೀಡುತ್ತಿರುವುದರಿಂದ ದೇಶದಲ್ಲಿ ಬಿಜೆಪಿ ದೊಡ್ಡ ಪಕ್ಷವಾಗಿದೆ. ಆಗಾಗಿ ಮುಂಬರುವ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗಳು ಗೆದ್ದೇ ಗೆಲ್ಲುತ್ತಾರೆ ಎಂಬ ವಿಶ್ವಾಸ ನನಗಿದೆ ಎಂದರು.

ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಸುಂದರ್, ಓಬಿಸಿ ಜಿಲ್ಲಾಧ್ಯಕ್ಷ ನಟರಾಜೇಗೌಡ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶಿವಕುಮಾರ್, ವಿವಿಧ ಮೋರ್ಚಾ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಪಕ್ಷದ ಕಾರ್ಯಕರ್ತರಿದ್ದರು.

ನಾಳೆ ವಿಶ್ವ ಸ್ಕಿಜೋಫ್ರೀನಿಯ ದಿನಾಚರಣೆ; ಬೀದಿ ನಾಟಕ

ಚಾಮರಾಜನಗರ, ಮೇ 24-ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ವಿಶ್ವ ಸ್ಕಿಜೋಫ್ರೀನಿಯ ದಿನಾಚರಣೆಯ ಅಂಗವಾಗಿ ಸ್ಕಿಜೋಫ್ರೀನಿಯ ಖಾಯಿಲೆಯ ಬಗ್ಗೆ ಅರಿವು ಮೂಡಿಸಲು ಮೇ 26ರಂದು ಸಂತೇಮರಹಳ್ಳಿ, ಯಳಂದೂರು ಮತ್ತು ಕೊಳ್ಳೇಗಾಲದಲ್ಲಿ ಬೀದಿ ನಾಟಕ ಏರ್ಪಡಿಸಲಾಗಿದೆ ಎಂದು ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಡಿಸಿ ವರ್ಗಾವಣೆ ಖಂಡಿಸಿ ಪ್ರತಿಭಟನೆ



ಚಾಮರಾಜನಗರ,ಮೇ24(ಎಸ್‌ಎಸ್)- ಜಿಲ್ಲೆಯ ಅಪರ ಜಿಲ್ಲಾಧಿಕಾರಿ ಕಾತ್ಯಾಯಿನಿದೇವಿ ಅವರ ವರ್ಗಾವಣೆ ರದ್ದುಪಡಿಸುವಂತೆ ಒತ್ತಾಯಿಸಿ ಕರ್ನಾಟಕ ಸೇನಾ ಪಡೆಯಿಂದ ನಗರದಲ್ಲಿ ಪ್ರತಿಭಟಿಸಲಾಯಿತು.

ನಗರದ ಜಿಲ್ಲಾಡಳಿತ ಭವನದ ಎದುರು ಪಡೆಯ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ ನೇತೃತ್ವದಲ್ಲಿ ಜಮಾಯಿಸಿದ್ದ ಪ್ರತಿಭಟನಾನಿರತರು, ಸರ್ಕಾರ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಶಿರಸ್ತೇದಾರ ಪರಶಿವಮೂರ್ತಿ ಅವರ ಮೂಲಕ ರಾಜ್ಯ ಚುನಾವಣಾಧಿಕಾರಿಗಳಿಗೆ ಮನವಿ ಸಲ್ಲಿಸಿದರು. ಚಾ.ರಂ.ಶ್ರೀನಿವಾಸಗೌಡ ಮಾತನಾಡಿ, ಜಿಲ್ಲೆಯಲ್ಲಿ ದಕ್ಷತೆಯಿಂದ ಆಡಳಿತ ನಡೆಸುತ್ತಿದ್ದ ಕಾತ್ಯಾಯಿನಿದೇವಿ ಅವರನ್ನು ಚುನಾವಣಾ ನೀತಿಸಂಹಿತೆ ಜಾರಿಯಲ್ಲಿದ್ದರೂ ಕೂಡ ರಾಜ್ಯ ಸರ್ಕಾರ ವರ್ಗಾವಣೆ ಮಾಡಿದ್ದು, ಕೂಡಲೇ ಆದೇಶ ಹಿಂಪಡೆಯಬೇಕು ಎಂದು ಆಗ್ರಹಿಸಿದರು.

ಜಿಲ್ಲೆಯಲ್ಲಿ ಪ್ರಾಮಾಣಿಕ, ದಕ್ಷತೆಯಿಂದ ಕಾರ್ಯ ನಿರ್ವಹಿಸುತ್ತಿದ್ದ ಅಪರ ಜಿಲ್ಲಾಧಿಕಾರಿ ಕಾತ್ಯಾಯಿನಿದೇವಿ ಅವರ ವರ್ಗಾವಣೆಯನ್ನು ರಾಜ್ಯ ಚುನಾವಣಾ ಆಯೋಗ ಮಧ್ಯಪ್ರವೇಶಿಸಿ ರದ್ದುಪಡಿಸಬೇಕು. ಇಲ್ಲದಿದ್ದರೆ ಉಗ್ರಹೋರಾಟ ಮಾಡುವುದಾಗಿ ಎಚ್ಚರಿಸಿದರು.


ಪ್ರತಿಭಟನೆಯಲ್ಲಿ ನಿಜಧ್ವನಿ ಗೋವಿಂದರಾಜ್, ಮಹೇಶ್‌ಗೌಡ, ಸಾಗರ್ ರಾವತ್, ಪಣ್ಯದಹುಂಡಿರಾಜು, ಪಟೇಲ್ ಮಹದೇವಸ್ವಾಮಿ, ಮರಿಯಾಲದಹುಂಡಿ ಕುಮಾರ್, ಕ್ರೀಡಾಪಟು ನಂಜುಂಡಸ್ವಾಮಿ, ಶ್ರೀನಿವಾಸಶೆಟ್ಟಿ, ತಾಂಡವಮೂರ್ತಿ, ವೀರಭದ್ರ, ಚಾ.ಹ.ರಾಮು, ರಾಜು, ದೊರೆ, ಸೂರಿ, ಆಟೋ ಸುರೇಶ್ ಇತರರಿದ್ದರು.

ಮೇ 26,28ರಂದು ಹನೂರಿನ ವಿವಿಧೆಡೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ, ಮೇ 24-ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಹನೂರು ಉಪವಿಭಾಗ ವ್ಯಾಪ್ತಿಯ 66/11 ಕೆವಿ ವಿದ್ಯುತ್ ವಿತರಣಾ ಕೇಂದ್ರಗಳಲ್ಲಿ ಕಾರ್ಯ ನಿರ್ವಹಣೆ ನಿಮಿತ್ತ ಮೇ 26 ರಂದು ಹನೂರು, ಕೌದಳ್ಳಿ, ಅಜ್ಜೀಪುರ, ಬಂಡಳ್ಳಿ, ಮಾರ್ಟಳ್ಳಿ, ರಾಮಾಪುರದ 66/11 ಕೆವಿ ವಿದ್ಯುತ್ ವಿತರಣಾ ಕೇಂದ್ರ ಹಾಗೂ ಮೇ 28ರಂದು ಲೊಕ್ಕನಹಳ್ಳಿ ಮತ್ತು ಪಿ.ಜಿ.ಪಾಳ್ಯ 66/11 ಕೆವಿ ವಿದ್ಯುತ್ ವಿತರಣಾ ಕೇಂದ್ರದ ವ್ಯಾಪ್ತಿಗೆ ಬರುವ ಫೀಡರ್‌ಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ. ಸಾರ್ವಜನಿಕರು ಹಾಗೂ ಗ್ರಾಹಕರು ನಿಗಮದ ಜೊತೆ ಸಹಕರಿಸಬೇಕು ಎಂದು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಹನೂರು ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾಡಾನೆ ಹಿಂಡು ದಾಳಿ: ಅಪಾರ ಬೆಳೆ ನಾಶ

ಸುಂಟಿಕೊಪ್ಪ,ಮೇ 24- ಕಂಬಿಬಾಣೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಅತ್ತೂರು ನಲ್ಲೂರು ಕಡ್ಲೆಮನೆ ಭಾಗದ ತೋಟಗಳಿಗೆ ಕಾಡಾನೆಗಳ ಹಿಂಡು ದಾಳಿ ನಡೆಸಿ, ಅಪಾರ ಪ್ರಮಾಣದಲ್ಲಿ ಬೆಳೆಗಳನ್ನು ನಾಶಗೊಳಿಸಿದ್ದು, ನಷ್ಟ ಉಂಟಾಗಿರುವ ಬಗ್ಗೆ ವರದಿಯಾಗಿದೆ.



ತೋಟಗಳಿಗೆ ಆಹಾರ ಅರಸಿ ಬರುತ್ತಿರುವ ಕಾಡಾನೆಗಳು ತೋಟದಲ್ಲಿಯೇ ಬೀಡು ಬಿಟ್ಟಿದ್ದು, ಕಾಫಿ, ಕರಿಮೆಣಸು ಗಿಡಗಳನ್ನು ಧ್ವಂಸಗೊಳಿಸುತ್ತಿವೆ. ಇದರಿಂದ ಕೃಷಿಕರಿಗೆ ಹಾಗೂ ಕಾಫಿ ಬೆಳೆಗಾರರಿಗೆ ಸಾವಿರಾರು ರೂ. ನಷ್ಟವುಂಟಾಗಿದೆ ಎಂದು ತೋಟದ ಮಾಲೀಕ ಸುಭಾಶ್ ಪೈ ಅಳಲು ತೋಡಿಕೊಂಡಿದ್ದಾರೆ.

ನಿರಂತರ ದಾಳಿ ನಡೆಸುವ ಕಾಡಾನೆಗಳು ರೋಬಸ್ಟಾ ಮತ್ತು ಅರೇಬಿಕಾ ಕಾಫಿ ಗಿಡಗಳನ್ನು ಧ್ವಂಸಗೊಳಿಸಿದೆ. ಪ್ರತಿನಿತ್ಯ ಸುತ್ತಮುತ್ತಲಿನ ತೋಟಗಳಲ್ಲಿ ಹಗಲು ವೇಳೆಯಲ್ಲಿಯೇ ಆನೆಗಳು ಕಂಡು ಬರುತ್ತಿದ್ದು, ಕೂಲಿ ಕಾರ್ಮಿಕರು ತೋಟದ ಕೆಲಸಕ್ಕೆ ಬರಲು ಹಿಂಜರಿಯುವಂತಾಗಿದೆ. ಸಾರ್ವಜನಿಕರು ಮನೆಯಿಂದ ಹೊರ ಬರುವುದಕ್ಕೂ ಭಯಪಡುತ್ತಿದ್ದಾರೆ. ಕೂಡಲೇ ಅರಣ್ಯ ಅಧಿಕಾರಿಗಳು ಆನೆಗಳನ್ನು ಹಿಮ್ಮೆಟ್ಟಿಸುವಂತೆ ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ರಸ್ತೆ ಬದಿಗೆ ಆಟೋ ಪಲ್ಟಿ

ಮಡಿಕೇರಿ,ಮೇ 24- ಚಾಲಕನ ನಿಯಂತ್ರಣ ತಪ್ಪಿ ರಸ್ತೆ ಬದಿಗೆ ಆಟೋ ಪಲ್ಟಿಯಾದ ಘಟನೆ ನಾಪೋಕ್ಲು ಸಮೀಪದ ಎಮ್ಮೆಮಾಡು ಗ್ರಾಮಕ್ಕೆ ಹೋಗುವ ರಸ್ತೆಯ ತಿರುವಿನಲ್ಲಿ ನಡೆದಿದೆ. ನಾಪೋಕ್ಲುವಿನಿಂದ ಎಮ್ಮೆಮಾಡು ಗ್ರಾಮಕ್ಕೆ ಪ್ರಯಾಣಿಕರನ್ನು ಕರೆದುಕೊಂಡು ಹೋಗುವ ಸಂದರ್ಭ ಚಂಬರಂಡ ತಿರುವಿನಲ್ಲಿ ಚಾಲಕನ ನಿಯಂತ್ರಣ ಕಳೆದುಕೊಂಡು ಆಟೋ ಪಲ್ಟಿಯಾಗಿದೆ. ಘಟನೆಯಿಂದ ಆಟೋರಿಕ್ಷಾ ಸಂಪೂರ್ಣ ಜಖಂಗೊಂಡಿದ್ದು, ಚಾಲಕ ಹಾಗೂ ಪ್ರಯಾಣಿಕರಿಗೆ ಸಣ್ಣಪುಟ್ಟ ಗಾಯಗಳಾಗಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ.



ಕೆಲಸ ಮಾಡದ ಅಧಿಕಾರಿಗಳು ಜಿಲ್ಲೆಯಿಂದ ಹೊರ ಹೋಗಿ

ಶಾಸಕ ಕೆ.ಜಿ.ಬೋಪಯ್ಯ ಖಡಕ್ ಎಚ್ಚರಿಕೆ



ನಾಪೋಕ್ಲು, ಮೇ 24- ಸರಕಾರ ಜನರ ಮೂಲಭೂತ ಸೌಕರ್ಯಕ್ಕಾಗಿ ಹಲವಾರು ಯೋಜನೆಗಳನ್ನು ಜಾರಿಗೊಳಿಸಿದ್ದು, ಜಿಲ್ಲೆಯ ಅಧಿಕಾರಿಗಳ ನಿರ್ಲಕ್ಷ್ಯದಿಂದ ಕಾಮಗಾರಿ ಆಮೆಗತಿಯಲ್ಲಿ ಸಾಗುತ್ತಿದೆ. ಇದಕ್ಕೆ ಅಧಿಕಾರಿಗಳೇ ನೇರ ಕಾರಣರಾಗಿದ್ದು ಕೆಲಸ ಮಾಡಲು ಬಾರದ ಅಧಿಕಾರಿಗಳು ಜಿಲ್ಲೆಯಿಂದ ವರ್ಗಾವಣೆ ತೆಗೆದುಕೊಂಡು ಹೋಗಲಿ ಇಲ್ಲದಿದ್ದಲ್ಲಿ ಅವರ ಮೇಲೆ ಕಠಿಣ ಕ್ರಮಕೈಗೊಳ್ಳಲಾಗುವುದು ಎಂದು ಶಾಸಕ ಕೆ.ಜಿ. ಬೋಪಯ್ಯ ಅಧಿಕಾರಿಗಳಿಗೆ ಖಡಕ್ ಎಚ್ಚರಿಕೆ ನೀಡಿದರು.

ಅವರು ಪಾಲೂರು ಮಹಾಲಿಂಗೇಶ್ವರ ದೇವಾಲಯ ಆವರಣದಲ್ಲಿ ಏರ್ಪಡಿಸಲಾಗಿದ್ದ ಬೆಟ್ಟಗೇರಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಜಲಜೀವನ್ ಮಿಷನ್ ಯೋಜನೆಯಡಿಯಲ್ಲಿ ಮನೆ ಮನೆ ಶುದ್ಧ ಕುಡಿಯುವ ನೀರಿನ ಸುಮಾರು 3.15 ಕೋಟಿ ವೆಚ್ಚದ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದರು.

ಈ ಸಂದರ್ಭ ಗ್ರಾಮಸ್ಥರು ಕಳಪೆ ಕಾಮಗಾರಿಯ ಬಗ್ಗೆ ಶಾಸಕರ ಗಮನ ಸೆಳೆದಾಗ ಅಂತಹ ಗುತ್ತಿಗೆದಾರನ್ನು ಕಪ್ಪುಪಟ್ಟಿಗೆ ಸೇರಿಸಿ ಕ್ರಮಕೈಗೊಳ್ಳಲಾಗುವುದು ಎಂದರು.

ಪ್ರಧಾನ ಮಂತ್ರಿಗಳ ಜಲಜೀವನ್ ಮಿಷನ್ ಯೋಜನೆಯಲ್ಲಿ ಜಿಲ್ಲೆಗೆ ಮನೆ ಮನೆಗೆ ಶುದ್ಧ ಕುಡಿಯುವ ನೀರನ್ನು ಪೂರೈಸಲು ಸುಮಾರು 200 ಕೋಟಿಯಷ್ಟು ಹಣ ಮಂಜೂರಾಗಿದ್ದು, ಇದರ ಸದುಪಯೋಗವನ್ನು ಪಡೆದುಕೊಳ್ಳುವಂತೆ ಅವರು ಕೋರಿದರು. ಬೆಟ್ಟಗೇರಿ ಗ್ರಾಮ ಪಂಚಾಯಿತಿ ವಿಭಾಗ್ ಕಾರುಗುಂದಕ್ಕೆ 30.59 ಲಕ್ಷ, ಕಡಿಯತ್ತುರಿಗೆ 52.40 ಲಕ್ಷ, ಹೆರವನಾಡಿಗೆ 62.41 ಲಕ್ಷ, ಅರ್ವತೊಕ್ಲುವಿಗೆ 43.08, ಬೆಟ್ಟಗೇರಿಗೆ 66.84 ಮತ್ತು ಪಾಲೂರು ಗ್ರಾಮಕ್ಕೆ ಶುದ್ಧ ಕುಡಿಯುವ ನೀರಿನ ಯೋಜನೆಗೆ ಒಟ್ಟು 3.15 ಕೋಟಿ ಹಣವನ್ನು ಮಂಜೂರು ಮಾಡಿದ್ದು, ಗುತ್ತಿಗೆದಾರರು ಕೂಡಲೇ ಕಾಮಗಾರಿಯನ್ನು ಕೈಗೆತ್ತಿಕೊಂಡು ಆದಷ್ಟು ಬೇಗ ಕಾಮಗಾರಿಯನ್ನು ಮುಗಿಸಲು ಪ್ರಯತ್ನಿಸಬೇಕೆಂದರು.

ಈ ಸಂದರ್ಭ ಪಾಲೂರು ದೇವಾಲಯದ ಅರ್ಚಕ ದೇವಿಪ್ರಸಾದ್, ಆಡಳಿತ ಮಂಡಳಿಯವರು, ಗ್ರಾಮಸ್ಥರು ದೇವಾಲಯದಲ್ಲಿ ಅಡುಗೆ ಮನೆ ಮತ್ತು ಗ್ರಾಮ ಅಭಿವೃದ್ಧಿ ಬಗ್ಗೆ ಶಾಸಕರಿಗೆ ಮನವಿ ಸಲ್ಲಿಸಿದರು. ಗ್ರಾಪಂ ಅಧ್ಯಕ್ಷ ನಾಪಂಡ ರ‍್ಯಾಲಿ ಮಾದಯ್ಯ ಅಧ್ಯಕ್ಷತೆ ವಹಿಸಿ ಮಾತನಾಡಿ ಸಮಸ್ಯೆಗಳ ಬಗ್ಗೆ ಶಾಸಕರ ಗಮನ ಸೆಳೆದರು

ಈ ಸಂದರ್ಭ ತಳೂರು ಕಿಶೋರ್ ಕುಮಾರ್, ವಿ.ಎಸ್.ಎಸ್. ಅಧ್ಯಕ್ಷ ಚೆರುಮಂಡ ಸತೀಶ್ ಸೋಮಣ್ಣ, ಕಡಿಯರ ವಿಜಯ, ಶಕ್ತಿ ಕೇಂದ್ರದ ಅಧ್ಯಕ್ಷ ಎಡಿಕೇರಿ ವಾಸುದೇವ, ಬೆಪ್ಪುರನ ಮೇದಪ್ಪ, ಆರ್.ಎಂ.ಸಿ. ಮಾಜಿ ಅಧ್ಯಕ್ಷ ಬೊಳ್ಳಿಯಂಡ ಹರೀಶ್, ಕೊಡಪಾಲು ಗಪ್ಪು ಗಣಪತಿ, ತಾಪಂ ಮಾಜಿ ಸದಸ್ಯ ಬಿ.ಎ.ರಾಮಣ್ಣ, ತಳೂರು ದಿನೇಶ್, ಪೊದವಾಡ ಮೀನಾಕ್ಷಿ, ಬಿ.ಆರ್.ಸುಶೀಲ ರಾಮಣ್ಣ, ಗಂಗಮ್ಮ, ಕಂದಾಯ ಪರಿವೀಕ್ಷಕ ರವಿಕುಮಾರ್ ಇತರರಿದ್ದರು.

ಭೂ ಪರಿವರ್ತನೆ ವಿರೋಧಿಸಿ ನಿರಂತರ ಹೋರಾಟ

ಗೋಣಿಕೊಪ್ಪ, ಮೇ 24- ಕೊಡಗು ಜಿಲ್ಲೆಯ ಭೌಗೋಳಿಕ ಮೂಲಕ್ಕೆ ಮಾರಕವಾಗಲಿರುವ ರೈಲ್ವೆ ಮಾರ್ಗ, ಬಹುಪಥ ಹೆದ್ದಾರಿ ಹಾಗೂ ವಾಣಿಜ್ಯ ಉದ್ದೇಶಕ್ಕೆ ಭೂ ಪರಿವರ್ತನೆ ವಿರೋಧಿಸಿ ನಿರಂತರ ಹೋರಾಟ ನಡೆಸುವುದಾಗಿ ಕೊಡಗು ಸಂರಕ್ಷಣಾ ವೇದಿಕೆ ಅಧ್ಯಕ್ಷ ಕರ್ನಲ್(ನಿ), ಸಿ.ಪಿ. ಮುತ್ತಣ್ಣ ಹೇಳಿದರು.

ಕೊಡಗಿನ ಭೌಗೋಳಿಕ ಸಂರಕ್ಷಣೆ ನಮ್ಮ ಮೂಲ ಉದ್ದೇಶವಾಗಿದೆ. ಶಾಸಕ ಕೆ.ಜಿ.ಬೋಪಯ್ಯ ಕೂಡ ಇದನ್ನು ಬಯಸಿದಲ್ಲಿ ನಾವು ಚರ್ಚೆಗೆ ಸಿದ್ಧರಿದ್ದೇವೆ. ಕೊಡಗಿನ ಅಭಿವೃದ್ಧಿಗೆ ನಾವು ವಿರೋಧಿಸುತ್ತಿಲ್ಲ. ಮೂಲಕ್ಕೆ ಧಕ್ಕೆಯಾಗದಂತೆ ಅಭಿವೃದ್ಧಿ ಪಡಿಸಲಿ ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.



ಪರಿಸರ ರಕ್ಷಕರು ಎಂದು ಬಿಂಬಿಸಿಕೊಳ್ಳುತ್ತಿರುವ ಚೇರಂಡ ನಂದಾ ಸುಬ್ಬಯ್ಯ ಕೊಡಗಿಗೆ ಮಾರಕವಾಗಿರುವ ಸಾಕಷ್ಟು ಯೋಜನೆಗಳಿಗೆ ಏಜೆಂಟ್ ಆಗಿ ಕಾರ್ಯನಿರ್ವಹಿಸಿದ್ದಾರೆ. ಮಾರಕ ಬರಪೊಳೆ ಯೋಜನೆಯನ್ನು ಬೆಂಬಲಿಸಿದ್ದವರು. 400 ಕೆ.ವಿ. ಹೈಟೆನ್ಷನ್ ವಿದ್ಯುತ್ ಮಾರ್ಗ ಯೋಜನೆಗೆ ಬೆಂಬಲ ನೀಡಿದ್ದರು. ಸ್ಥಳೀಯರಿಗೆ ದಿನಪೂರ್ತಿ ವಿದ್ಯುತ್ ಸೇವೆ ದೊರೆಯುತ್ತದೆ ಎಂದು ನಂಬಿಸಿದ್ದರು. ರೈತರಿಗೆ ಉಚಿತ ವಿದ್ಯುತ್ ನೀಡುವ ಯೋಜನೆ ಎಂದು ತಪ್ಪು ಮಾಹಿತಿ ನೀಡಿದ್ದರು. ವಿದ್ಯುತ್ ಮಾರ್ಗ ಹಾದು ಹೋಗುವ ರೈತರ ಭೂಮಿಗೆ ಪರಿಹಾರ ದೊರೆಯಬೇಕಾದರೆ ಮಾರ್ಗಕ್ಕೆ ವಿರೋಧಿಸಬಾರದು ಎಂದು ಹೆದರಿಸಿ ಯೋಜನೆ ಅನುಷ್ಠಾನಕ್ಕೆ ಪಣ ತೊಟ್ಟಿದ್ದರು. ಹೀಗೆ ಮಾರಕ ಯೋಜನೆಗಳ ಪರ ನಿಂತು ಜಿಲ್ಲೆಯ ಮೂಲಕ್ಕೆ ಧಕ್ಕೆಯಾಗುವಂತಹ ಪ್ರಯತ್ನ ಮುಂದುವರಿಸಿದ್ದಾರೆ ಎಂದು ಅವರು ಆರೋಪಿಸಿದರು.

ರೈತ ತನ್ನ ತೋಟದಲ್ಲಿ ಬೇಡವಾದ ಮರಗಳನ್ನು ಮಾರಾಟ ಮಾಡಬೇಕಿದೆ. ಇದನ್ನು ಅಕ್ರಮ ಎಂದು ಬಿಂಬಿಸಿ, ನಮ್ಮ ಹೋರಾಟವನ್ನು ಮೊಟಕುಗೊಳಿಸುವ ಪ್ರಯತ್ನ ನಡೆಸುತ್ತಿರುವುದು ಹಾಸ್ಯಾಸ್ಪದ ಎಂದರು.

ಕಾವೇರಿ ಸೇನೆ ಪ್ರಮುಖರಾದ ಕೋಲತಂಡ ರಘು ಮಾಚಯ್ಯ ಮಾತನಾಡಿ, ಕಾವೇರಿ ಸೇನೆಯಿಂದ ಸಂಘ ವಿರೋಧಿ ಚಟುವಟಿಕೆಯಿಂದ ಉಚ್ಚಾಟನೆಗೊಂಡವರು ಸೇನೆಯ ಚಟುವಟಿಕೆ ಸಹಿಸಲಾಗದೆ ಆರೋಪ ಮಾಡುತ್ತಿದ್ದಾರೆ. ಅವರು ಆತ್ಮಾವಲೋಕನ ಮಾಡಿಕೊಳ್ಳಬೇಕು. ಅವರ ಆರೋಪಗಳು ನಿರಾಧಾರ. ಕೊಡಗಿನ ಮಣ್ಣಿನ ರಕ್ಷಣೆಗೆ ಬದ್ಧವಾಗಿದ್ದೇವೆ. ವೈಯಕ್ತಿಕ ಲಾಭಕ್ಕಾಗಿ ಜಿಲ್ಲೆಯನ್ನು ಯಾರೋ ಮಾರಾಟ ಮಾಡುತ್ತಿದ್ದಾರೆ ಎಂದು ಆರೋಪಿಸುವುದು ತಪ್ಪು. ಈಗಿನ ಪೀಳಿಗೆ ಭೂ ಮಾರಾಟದಲ್ಲಿ ತೊಡಗಿಕೊಂಡಿರುವುದನ್ನು ಅವರು ಪ್ರಶ್ನಿಸಲಿ ಎಂದರು.

ಗೋಷ್ಠಿಯಲ್ಲಿ ಕೊಡಗು ಸಂರಕ್ಷಣಾ ವೇದಿಕೆ ಸದಸ್ಯರಾದ ತ್ರಿಶೂಲ್ ತಿಮ್ಮಯ್ಯ, ಮಲ್ಚೀರ ಶಾನ್ ಇದ್ದರು.

ಕಾಂಗ್ರೆಸ್‌ನಿಂದ ನಾಲ್ವರ ಅಮಾನತು

ಮಡಿಕೇರಿ,ಮೇ 24- ಪಕ್ಷ ವಿರೋಧಿ ಚಟುವಟಿಕೆ ಹಿನ್ನೆಲೆ ಕಾಂಗ್ರೆಸ್‌ನಿಂದ ನಾಲ್ವರನ್ನು ಅಮಾನತುಗೊಳಿಸಲಾಗಿದೆ ಎಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಎಸ್.ಐ. ಮುನೀರ್ ಅಹಮ್ಮದ್ ತಿಳಿಸಿದ್ದಾರೆ.

ಕಾಂಗ್ರೆಸ್ ಕಾರ್ಯಕರ್ತರಾದ ಗೋಣಿಕೊಪ್ಪದ ಹೆಚ್.ಬಿ.ಮುರುಗ, ಹರಿದಾಸ್ ಮಣಿ, ತಂಬಿ ಹಾಗೂ ಶ್ರೀಜಾ ಮಣಿ ಅವರುಗಳನ್ನು ಮುಂದಿನ ಆದೇಶದವರೆಗೆ ಅಮಾನತುಗೊಳಿಸಿ ಪಕ್ಷದ ಜಿಲ್ಲಾಧ್ಯಕ್ಷ ತೀತಿರ ಧರ್ಮಜ ಉತ್ತಪ್ಪ ಆದೇಶಿಸಿದ್ದಾರೆ ಎಂದು ತಿಳಿಸಿದ್ದಾರೆ. ಗೋಣಿಕೊಪ್ಪ ಬ್ಲಾಕ್ ಹಾಗೂ ನಗರ ಕಾಂಗ್ರೆಸ್ ಅಧ್ಯಕ್ಷರು ನೀಡಿದ ದೂರಿನ ಹಿನ್ನೆಲೆ ಈ ಕ್ರಮ ಕೈಗೊಂಡಿರುವುದಾಗಿ ಸ್ಪಷ್ಟಪಡಿಸಿದ್ದಾರೆ.

ಇಂದು ಪ್ಲಾಸ್ಟಿಕ್ ನಿಷೇಧ ಕುರಿತು ಸಮಾಲೋಚನಾ ಸಭೆ

ಮಡಿಕೇರಿ, ಮೇ 24- ಚೇಂಬರ್ ಆಫ್ ಕಾಮರ್ಸ್‌ನ ಮಡಿಕೇರಿ ಸ್ಥಾನೀಯ ಸಮಿತಿ ವತಿಯಿಂದ ಮೇ 25 ರಂದು ಪ್ಲಾಸ್ಟಿಕ್ ನಿಷೇಧ ಕುರಿತು ಸಮಾಲೋಚನಾ ಸಭೆ ನಡೆಯಲಿದೆ ಎಂದು ಸಮಿತಿಯ ನಗರಾಧ್ಯಕ್ಷ ಎಂ.ಧನಂಜಯ ತಿಳಿಸಿದ್ದಾರೆ.

ಕೊಡಗು ಜಿಲ್ಲಾ ವಾಣಿಜ್ಯೋದ್ಯಮಿಗಳ ಸಹಕಾರ ಸಂಘದ ಕಟ್ಟಡದ ಸಭಾಂಗಣದಲ್ಲಿ ಅಂದು ಮಧ್ಯಾಹ್ನ 3.15 ಗಂಟೆಗೆ ನಡೆಯುವ ಸಭೆಯಲ್ಲಿ ಜಿಲ್ಲಾಧಿಕಾರಿ ಡಾ.ಬಿ.ಸಿ. ಸತೀಶ ಪಾಲ್ಗೊಳ್ಳಲಿದ್ದಾರೆ ಎಂದಿದ್ದಾರೆ.

ಇಂದು ವಿದ್ಯುತ್ ವ್ಯತ್ಯಯ

ಮಡಿಕೇರಿ, ಮೇ 24- ಮೂರ್ನಾಡು ವಿದ್ಯುತ್ ಉಪ-ಕೇಂದ್ರದಲ್ಲಿ ತುರ್ತು ನಿರ್ವಹಣೆ ಕಾರ್ಯ ಕೈಗೊಳ್ಳಲಾಗಿರುವುದರಿಂದ ಮೇ 25 ರಂದು ಬೆಳಗ್ಗೆ 10 ಗಂಟೆಯಿಂದ 5 ಗಂಟೆವರೆಗೆ ಮೂರ್ನಾಡು, ಕಾಂತೂರು, ಹೊಸ್ಕೇರಿ, ಅರೆಕಾಡು, ಮರಗೋಡು, ಕಟ್ಟೆಮಾಡು, ಚೇಲಾವರ, ಬೇತ್ರಿ, ಚೆಯ್ಯಂಡಾಣೆ, ಪಾರಾಣೆ, ನಾಪೋಕ್ಲು, ಹಳೆ ತಾಲೂಕು, ಬೇತು, ಹೊದ್ದೂರು, ಕುಂಜಿಲ ಹಾಗೂ ಸುತ್ತಮುತ್ತ ವ್ಯಾಪ್ತಿಯ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಸಾರ್ವಜನಿಕರು ಸಹಕರಿಸುವಂತೆ ಸೆಸ್ಕ್ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಅಶೋಕ್ ಕೋರಿದ್ದಾರೆ

ಹಾರಂಗಿ ನೀರಿನ ಮಟ್ಟ



ಗರಿಷ್ಠ ಮಟ್ಟ	2,859 ಅಡಿ
ಮಂಗಳವಾರ	2850.25 ಅಡಿ
ಒಳ ಹರಿವು	118 ಕ್ಯೂಸೆಕ್
ಹೊರ ಹರಿವು	320 ಕ್ಯೂಸೆಕ್

ಕುಶಾಲನಗರ ತಾಲೂಕು ಪತ್ರಕರ್ತರ ಸಂಘ ಉದ್ಘಾಟನೆ

ಪತ್ರಕರ್ತರ ಭವನ ನಿರ್ಮಾಣಕ್ಕೆ ರೂ.5 ಲಕ್ಷ ಅನುದಾನ : ಶಾಸಕ ಎಂ.ಪಿ.ಅಪ್ಪಚ್ಚುರಂಜನ್



ಕುಶಾಲನಗರ, ಮೇ 24- ನೂತನ ಕುಶಾಲನಗರ ತಾಲೂಕು ಪತ್ರಕರ್ತರ ಭವನ ನಿರ್ಮಾಣಕ್ಕೆ ರೂ. 5 ಲಕ್ಷ ಅನುದಾನ ನೀಡುವುದಾಗಿ ಶಾಸಕ ಎಂ.ಪಿ.ಅಪ್ಪಚ್ಚು ರಂಜನ್ ಭರವಸೆ ನೀಡಿದರು.

ಸಮೀಪದ ಮಾದಪಟ್ಟಣ ಗ್ರಾಮದ ರಾಜಾ ವಿಲಾಸ್ ಸಭಾಂಗಣದಲ್ಲಿ ಏರ್ಪಡಿಸಿದ್ದ ಕುಶಾಲನಗರ ತಾಲೂಕು ನೂತನ ಪತ್ರಕರ್ತರ ಸಂಘದ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು. ಪತ್ರಕರ್ತರು ಗ್ರಾಮೀಣ ಹಾಗೂ ಜನಸಾಮಾನ್ಯರ ಸಮಸ್ಯೆಗಳ ಬಗ್ಗೆ ಲೇಖನಗಳನ್ನು ಬರೆದು ಬೆಳಕು ಚೆಲ್ಲುವ ಮೂಲಕ ಸರ್ಕಾರದ ಗಮನ ಸೆಳೆಯಬೇಕು ಎಂದರು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪತ್ರಕರ್ತರ ಪಾತ್ರ ಪ್ರಾಮುಖ್ಯವಾಗಿದೆ. ಸರ್ಕಾರ ಎಚ್ಚರ ತಪ್ಪಿದಾಗ ಸರಿದಾರಿಗೆ ಕೊಂಡೊಯ್ಯುವ ಕೆಲಸ ಮಾಡಬೇಕು ಎಂದರು.

ಜಿಲ್ಲಾಧಿಕಾರಿಗಳ ಕಾನೂನು ಸಲಹೆಗಾರರಾದ ಹಿರಿಯ ವಕೀಲ ಎ.ಲೋಕೇಶ್ ಕುಮಾರ್, ನೂತನ ತಾಲೂಕು ಸಂಘದ ಪದಾಧಿಕಾರಿಗಳಿಗೆ ಪ್ರಮಾಣವಚನ ಬೋಧಿಸಿ ಮಾತನಾಡಿ, ಪತ್ರಿಕಾ ರಂಗಕ್ಕೆ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ತನ್ನದೇ ಆದ ಪ್ರಾಮುಖ್ಯತೆ ಇದೆ ಎಂದರು.


ಪ್ರಜಾಪ್ರಭುತ್ವ ನಾಲ್ಕನೇ ಅಂಗವಾಗಿರುವ ಪತ್ರಿಕಾರಂಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಪತ್ರಕರ್ತರಿಗೆ ಜೀವನ ಭದ್ರತೆ ಒದಗಿಸುವ ಕೆಲಸವನ್ನು ಸರ್ಕಾರ ಮಾಡಬೇಕು ಎಂದು ಅವರು ಒತ್ತಾಯಿಸಿದರು.

ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ತಿನ ಅಧ್ಯಕ್ಷ ಹುಲಿಕಲ್ ನಟರಾಜು ಮಾತನಾಡಿ, ಜಗತ್ತಿನ ಕಸ ತೊಳೆಯುವ ಕೆಲಸವನ್ನು ಮಾಧ್ಯಮ ಕ್ಷೇತ್ರ ಮಾಡುತ್ತಿದೆ. ಮಾಧ್ಯಮ ಕ್ಷೇತ್ರ ಅದ್ಭುತ ರಂಗವಾಗಿದೆ. ಇತ್ತೀಚಿನ ದಿನಗಳಲ್ಲಿ ಮಾಧ್ಯಮ ಕ್ಷೇತ್ರ ಮಾರುಕಟ್ಟೆ ಸರಕಾಗಿದ್ದು, ಅದು ಪ್ರಜ್ಞಾವಂತಿಕೆ ಸರಕು ಆಗಬೇಕಿದೆ ಎಂದು ಹೇಳಿದರು. ಸಮಾಜದಲ್ಲಿ ಮಾನವೀಯ ಮೌಲ್ಯ ನಶಿಸಿ ಹೋಗುತ್ತಿದ್ದು, ಪತ್ರಕರ್ತರಿಗೆ ಮೌನ ಮತ್ತು ತಾಳ್ಮೆಯೊಂದಿಗೆ ಮಾನವೀಯ ಮೌಲ್ಯದ ಗುಣ ಬೇಕಾಗಿದೆ ಎಂದರು.

ಕೊಡ್ಲಿಪೇಟೆ ಕಿರಿಕೊಡ್ಲಿ ಮಠದ ಶ್ರೀ ಸದಾಶಿವ ಸ್ವಾಮೀಜಿ ಮಾತನಾಡಿ, ಪತ್ರಕರ್ತರು ನೋವು, ಕಷ್ಟದಲ್ಲಿ ಜೀವನ ನಡೆಸುತ್ತಿದ್ದಾರೆ. ಪತ್ರಿಕಾರಂಗ ಜನ ಸಾಮಾನ್ಯರಿಗೆ ಹಾಗೂ ರಾಜಕಾರಣಿಗಳಿಗೆ ದಾರಿದೀಪವಾಗಿ ಕೆಲಸ ಮಾಡುತ್ತಿದೆ ಎಂದರು.

ಪಪಂ ಅಧ್ಯಕ್ಷ ಬಿ.ಜೈವರ್ಧನ್ ಮಾತನಾಡಿದರು. ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಎಂ.ಎನ್.ಚಂದ್ರಮೋಹನ್ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಪತ್ರಕರ್ತರ ಸಂಘದ ಉಪಾಧ್ಯಕ್ಷ ಅಚ್ಚಮಾಡ ರಮೇಶ್ ಕುಟ್ಟಪ್ಪ, ಜಿಲ್ಲಾಧ್ಯಕ್ಷೆ ಸವಿತಾ ರೈ, ರಾಷ್ಟ್ರೀಯ ಪತ್ರಕರ್ತ ಒಕ್ಕೂಟ ನಿರ್ದೇಶಕ ಸುನೀಲ್ ಮೊನ್ನಟ್ಟಿ ಉಪಸ್ಥಿತರಿದ್ದರು.

ಕೇಟೋಳಿರ ಎಂ. ಸುಬ್ಬಯ್ಯ ನಿಧನ



ವಿರಾಜಪೇಟೆ, ಮೇ 24- ತಾಲೂಕಿನ ಅಮ್ಮತ್ತಿ ಗ್ರಾಮದ ಕೇಟೋಳಿರ ಎಂ. ಸುಬ್ಬಯ್ಯ (ಬೋಜಿ-91) ಅವರು ಇಂದು ರಾತ್ರಿ ನಿಧನರಾದರು. ಸುಬ್ಬಯ್ಯ ಅವರು ಕೆಲ ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದು, ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಮೃತರು ಮೂವರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ (ಮೇ 25) ಮಧ್ಯಾಹ್ನ 4 ಗಂಟೆಗೆ ಅಮ್ಮತ್ತಿ ಗ್ರಾಮದ ಅವರ ನಿವಾಸದಲ್ಲಿ ನೆರವೇರಲಿದೆ.

ಒಂದನೇ ಪುಟದಿಂದ

ಭೂ ಪರಿವರ್ತನೆ ಇನ್ನು ಬಲು ಸುಲಭ

ಪ್ರಾರಂಭಿಸುವುದು ಸೇರಿದಂತೆ ಹಲವು ಉದ್ದೇಶಗಳಿಗೆ ಹೊಡೆತ ಬೀಳುತ್ತಿದೆ ಎಂದ ಅವರು, ಕೈಗಾರಿಕೆಗಳ ಸ್ಥಾಪನೆಯಾಗಬೇಕು. ಉದ್ಯೋಗ ಸೃಷ್ಟಿಯಾಗಬೇಕು ಎಂಬುದು ಸರ್ಕಾರದ ಉದ್ದೇಶ. ಆದರೆ ಭೂಪರಿವರ್ತನೆಗೆ ಆಗುತ್ತಿರುವ ವಿಳಂಬ ಧೋರಣೆಯಿಂದ ದೊಡ್ಡ ಮಟ್ಟದ ಸಮಸ್ಯೆಗಳಾಗುತ್ತಿವೆ. ಭೂ ಪರಿವರ್ತನೆಗೆ ಅನುಮತಿ ಪಡೆಯಲು ವಿಳಂಬವಾಗುತ್ತಿರುವುದರಿಂದ ಕೈಗಾರಿಕೆ ಸ್ಥಾಪಿಸಲು ಬಂಡವಾಳಕ್ಕಾಗಿ ಸಾಲ ಪಡೆಯುವ ಉದ್ಯಮಿಗಳು ತಮ್ಮ ಉದ್ದೇಶದಿಂದ ಹಿಂದೆ ಸರಿಯುವ ಪ್ರಕರಣಗಳು ಹೆಚ್ಚುತ್ತಿವೆ ಎಂದರು.

ಕೃಷಿ ಭೂಮಿಯನ್ನು ಕೃಷಿಯೇತರ ಚಟುವಟಿಕೆಗಳಿಗೆ ಪರಿವರ್ತನೆ ಮಾಡುವ ಕಾರ್ಯದಲ್ಲಿ ವಿಳಂಬವಾಗಕೂಡದು ಎಂಬುದು ಸರ್ಕಾರದ ನಿಲುವು ಎಂದು ಸ್ಪಷ್ಟಪಡಿಸಿದರು. ಇದೇ ಕಾರಣಕ್ಕಾಗಿ ಇನ್ನು ಮುಂದೆ ಭೂ ಪರಿವರ್ತನೆಗೆ ಅರ್ಜಿ ಸಲ್ಲಿಸಿದವರಿಗೆ 72 ಗಂಟೆಗಳಲ್ಲಿ ಅನುಮತಿ ನೀಡಲು ತೀರ್ಮಾನಿಸಲಾಗಿದೆ. ಅರ್ಜಿ ಸಲ್ಲಿಸಿದವರು ಪರಿವರ್ತನೆಯನ್ನು ಕೋರಿದ ಭೂಮಿ ಸರ್ಕಾರದ್ದಾಗಲೀ, ಪರಿಶಿಷ್ಟರಿಗಾಗಲೀ ಅಥವಾ ಯಾವುದೇ ನಿಯಮಗಳಿಗೆ ವಿರುದ್ಧವಾಗಿಲ್ಲ ಎಂದು ಪ್ರಮಾಣ ಪತ್ರ ನೀಡಬೇಕು. ಅವರು ನೀಡುವ ಪ್ರಮಾಣ ಪತ್ರವನ್ನು ಪಡೆದು 72 ಗಂಟೆಗಳಲ್ಲಿ ಭೂ ಪರಿವರ್ತನೆಗೆ ಅನುಮತಿ ನೀಡಲಾಗುವುದು.ಒಂದು ವೇಳೆ ಅರ್ಜಿದಾರರು ಸಲ್ಲಿಸಿದ ಪ್ರಮಾಣಪತ್ರದಲ್ಲಿರುವುದು ತಪ್ಪು ಎಂದು ಕಂಡು ಬಂದರೆ ತಕ್ಷಣವೇ ಭೂ ಪರಿವರ್ತನೆಗೆ ನೀಡಿದ ಅನುಮತಿ ರದ್ದಾಗಲಿದೆ ಮತ್ತು ಭೂ ಪರಿವರ್ತನೆಗಾಗಿ ಸಲ್ಲಿಸಿದ ಶುಲ್ಕವನ್ನು ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳಲಿದೆ ಎಂದರು.

ಈ ಮಧ್ಯೆ ಭೂ ಪರಿವರ್ತನೆ ಕೋರಿ ಸಲ್ಲಿಕೆಯಾದ ಅರ್ಜಿಗಳನ್ನು ವಜಾ ಮಾಡಕೂಡದು. ಬದಲಿಗೆ ಪ್ರಮಾಣ ಪತ್ರ ಪಡೆದುಕೊಂಡು ಅನುಮತಿ ನೀಡಬೇಕು. ಯಾಕೆಂದರೆ ಪ್ರಮಾಣ ಪತ್ರದಲ್ಲಿ ತಪ್ಪಿದ್ದರೆ ಅದರಿಂದ ಅರ್ಜಿದಾರನಿಗೇ ಸಮಸ್ಯೆ ಎಂದರು. ಮೇ 15ರಿಂದ 21ರವರೆಗೆ ರಾಜ್ಯದಲ್ಲಿ ಸುರಿದ ಮಳೆಯಿಂದಾಗಿ ಕೋಟ್ಯಾಂತರ ರೂ. ಹಾನಿಗೀಡಾಗಿದ್ದು ಜನ, ಜಾನುವಾರು, ಆಸ್ತಿಗೆ ಹಾನಿಯಾಗಿದೆ ಎಂದು ವಿವರ ನೀಡಿದರು. ಮಳೆಯಿಂದಾಗಿ 12 ಮಂದಿ ಮೃತಪಟ್ಟಿದ್ದರೆ,432 ಜಾನುವಾರು ಗಳು ಮೃತಪಟ್ಟಿವೆ. 51 ಮನೆ ಪೂರ್ಣ ಹಾನಿಯಾಗಿದ್ದು, 4242 ಮನೆಗಳು ಭಾಗಶಃ ಹಾನಿಗೊಳಗಾಗಿವೆ. 41 ಗುಡಿಸಲುಗಳು ನೆಲಕ್ಕುರುಳಿವೆ. 7010 ಹೆಕ್ಟೇರ್ ಕೃಷಿ ಜಮೀನು, 5736 ಎಕರೆ ತೋಟಗಾರಿಕೆ ಜಮೀನು ಹಾನಿಯಾಗಿದ್ದು 4711 ವಿದ್ಯುತ್ ಕಂಬಗಳು ನೆಲಕ್ಕುರುಳಿವೆ. 109 ಶಾಲೆಗಳು ಹಾನಿಗೊಳಗಾಗಿವೆ ಎಂದು ಸಚಿವ ಅಶೋಕ್ ವಿವರಿಸಿದರು.

ಅವಿರೋಧ ಆಯ್ಕೆ ಖಚಿತ

ಎಲ್ಲರೂ ಅವಿರೋಧ ಆಯ್ಕೆ ಘೋಷಣೆ ಮಾತ್ರ ಬಾಕಿ ಉಳಿದಿದೆ. ಬಹುತೇಕ ಎಲ್ಲಾ ಅಭ್ಯರ್ಥಿಗಳು ಮೂರು ಸೆಟ್ ನಾಮಪತ್ರಗಳನ್ನು ಚುನಾವಣಾಧಿಕಾರಿಯೂ ಆಗಿರುವ ವಿಧಾನಸಭೆಯ ಕಾರ್ಯದರ್ಶಿ ವಿಶಾಲಾಕ್ಷಿ ಅವರಿಗೆ ಸಲ್ಲಿಸಿದರು.

ನಾಮಪತ್ರ ಪರಿಶೀಲನೆ ಹಾಗೂ ವಾಪಸ್ ಪಡೆಯುವ ದಿನಾಂಕದ ನಂತರ ಅಧಿಕೃತ ಘೋಷಣೆಯಾಗಲಿದೆ. ಅಭ್ಯರ್ಥಿಗಳ ಹೆಸರನ್ನು ಒಂದೆರಡು ದಿನ ಮೊದಲೇ ಪ್ರಕಟಿಸುತ್ತಿದ್ದ ಬಿಜೆಪಿ ಇಂದು ಕಡೆ ಗಳಿಗೆಯಲ್ಲಿ ತನ್ನ ಅಭ್ಯರ್ಥಿಗಳ ಹೆಸರನ್ನು ಘೋಷಿಸಿತು. ತಡರಾತ್ರಿ ಅಭ್ಯರ್ಥಿಗಳಿಗೆ ಮಾಹಿತಿ ರವಾನೆಯಾಯಿತು. ಆದರೆ ಕೊನೆ ಗಳಿಗೆಯಲ್ಲಿ ಮಂಜುಳಾ ಹಾಗೂ ಲಿಂಗರಾಜು ಪಾಟೀಲ್ ಅವರಿಂದ ನಾಮ ಪತ್ರಕ್ಕೆ ಸಹಿ ಹಾಕಿಸಿಕೊಂಡ ನಂತರ ಇವರನ್ನು ಬದಲಾಯಿಸಿ ಲಕ್ಷ್ಮಣ ಸವದಿ ಹಾಗೂ ಹೇಮಲತಾ ನಾಯಕ್ ಅವರಿಗೆ ಟಿಕೆಟ್ ನೀಡಿತು. ಕೊಪ್ಪಳದಿಂದ ಹೇಮಲತಾ ನಾಯಕ್ ಅವರು ಬೆಂಗಳೂರಿಗೆ ಬಂದು ನಾಮಪತ್ರ ಸಲ್ಲಿಸಲು ವಿಳಂಬ ವಾಗಬಹುದೆಂದು, ಅವರನ್ನು ತುಮಕೂರಿನಿಂದ ರಾಜಧಾನಿಗೆ ಹೆಲಿಕಾಪ್ಟರ್‌ನಲ್ಲಿ ಕರೆತರಲಾಯಿತು. ನಾಮಪತ್ರ ಸಲ್ಲಿಕೆ ಸಂದರ್ಭದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ನಳಿನ್‌ಕುಮಾರ್ ಕಟೀಲ್, ಸಚಿವ ಆರ್.ಅಶೋಕ್ ಮತ್ತಿತರರು ಇದ್ದರು. ಕಾಂಗ್ರೆಸ್ ಅಭ್ಯರ್ಥಿಗಳ ಪರವಾಗಿ ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಾಜರಿದ್ದರೆ, ಜೆಡಿಎಸ್ ಅಭ್ಯರ್ಥಿ ಜೊತೆ ಆ ಪಕ್ಷದ ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ, ಜೆಡಿಎಲ್‌ಪಿ ನಾಯಕ ಎಚ್.ಡಿ.ಕುಮಾರಸ್ವಾಮಿ, ಉಪನಾಯಕ ಬಂಡೆಪ್ಪ ಕಾಶೆಂಪೂರ್ ಮತ್ತಿತರರು ಉಪಸ್ಥಿತರಿದ್ದರು.

ಮಣೆ ಹಾಕದ ವರಿಷ್ಠರು

ತೊಡಗಿಸಿಕೊಳ್ಳಬೇಕು ಎಂದಿದ್ದರೆ, ಯಡಿಯೂರಪ್ಪ ಟ್ವೀಟ್ ಮಾಡಿ, ವಿಧಾನಪರಿಷತ್ತಿಗೆ ಅಭ್ಯರ್ಥಿಗಳಾಗಿರುವವರು ಜಯಗಳಿಸಿ ಜನರ ಧ್ವನಿಯನ್ನು ಇನ್ನಷ್ಟು ಗಟ್ಟಿಗೊಳಿಸಲಿ ಎಂದು ಹಾರೈಸಿದ್ದಾರೆ. ವಿಜಯೇಂದ್ರ ಅವರನ್ನು ಪರಿಷತ್ ಸದಸ್ಯರನ್ನಾಗಿ ಮಾಡಿಸಿ, ಹಾಲಿ ಸರ್ಕಾರದಲ್ಲಿ ಮಂತ್ರಿ ಮಾಡಬೇಕೆಂದು ಯಡಿಯೂರಪ್ಪ ಕಂಡಿದ್ದ ಕನಸಿಗೆ ವರಿಷ್ಠರು ಬ್ರೇಕ್ ಹಾಕಿದ್ದಾರೆ. ಬಿಜೆಪಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅರುಣ್ ಸಿಂಗ್ ಅವರ ಅಧ್ಯಕ್ಷತೆಯಲ್ಲಿ ನಡೆದ ಕೋರ್ ಕಮಿಟಿ ಸಭೆಯಲ್ಲಿ ವಿಜಯೇಂದ್ರ ಅವರನ್ನು ಅಭ್ಯರ್ಥಿಯಾಗಿ ಆಯ್ಕೆ ಮಾಡಬೇಕೆಂದು ಕೇಂದ್ರೀಯ ಸಂಸದೀಯ ಮಂಡಳಿಗೆ ಶಿಫಾರಸು ಮಾಡಲಾಗಿತ್ತು. ಕೋರ್ ಕಮಿಟಿ ಸಭೆಯಲ್ಲಿ ಕಂದಾಯ ಸಚಿವ ಆರ್. ಅಶೋಕ್ ಅವರು ವಿಜಯೇಂದ್ರ ಅವರ ಹೆಸರನ್ನು ಪ್ರಸ್ತಾಪಿಸಿದರೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅನುಮೋದನೆ ನೀಡಿದ್ದರು.

ಮುಖ್ಯಮಂತ್ರಿ ಅವರ ಶಿಫಾರಸ್ಸಿಗೂ ಪಕ್ಷದ ದೆಹಲಿ ವರಿಷ್ಠರು ಮಣೆ ಹಾಕದೆ ಕುಟುಂಬ ರಾಜಕಾರಣಕ್ಕೆ ಅವಕಾಶ ಮಾಡಿಕೊಡಲಿಲ್ಲ. ಯಡಿಯೂರಪ್ಪ ಹಾಲಿ ವಿಧಾನಸಭಾ ಸದಸ್ಯರು, ಅವರ ಹಿರಿಯ ಪುತ್ರ ರಾಘವೇಂದ್ರ ಶಿವಮೊಗ್ಗ ಲೋಕಸಭಾ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದಾರೆ. ಪುತ್ರ ವಿಜಯೇಂದ್ರ ಅವರಿಗೆ ವಿಧಾನಪರಿಷತ್ ಟಿಕೆಟ್ ಕೊಡಿಸಲು ತಮ್ಮ ಎಲ್ಲಾ ಶಕ್ತಿ ಒಗ್ಗೂಡಿಸಿ ಪ್ರಯತ್ನ ಪಟ್ಟರೂ ವರಿಷ್ಠರು ಅವಕಾಶ ಮಾಡಿಕೊಡಲಿಲ್ಲ. ಪರಿಷತ್ತಿನ ನಾಲ್ಕು ಸ್ಥಾನಗಳು ಪಕ್ಷಕ್ಕೆ ಲಭ್ಯವಾಗುವ ಆಧಾರದ ಮೇಲೆ ಪ್ರತಿ ಸ್ಥಾನಕ್ಕೆ ತಲಾ ಐದು ಹೆಸರುಗಳನ್ನು ಶಿಫಾರಸು ಮಾಡಲಾಗಿತ್ತು, ಆದರೆ ಒಂದು ಸ್ಥಾನಕ್ಕೆ ಮಾಡಿದ ಶಿಫಾರಸಿನಲ್ಲಿ ವಿಜಯೇಂದ್ರ ಅವರ ಹೆಸರನ್ನು ಮಾತ್ರ ಸೂಚಿಸಲಾಗಿತ್ತು. ಪಕ್ಷದ ಮೂಲಗಳ ಪ್ರಕಾರ ಪಕ್ಷಕ್ಕೆ ವಿಜಯೇಂದ್ರ ಅವರ ವಿಶೇಷ ಕೊಡುಗೆ ಏನೂ ಇಲ್ಲ, ಮುಂದೆ ಪಕ್ಷ ಸಂಘಟನೆಗೆ ಕೆಲಸ ಮಾಡಲಿ ಆಗ ತಾನಾಗಿಯೇ ಅವಕಾಶ ದೊರೆಯಲಿದೆ ಎಂದು ಸಮಾಧಾನಪಡಿಸಲಾಗಿದೆ.

ಪರಿಷತ್ತಿನ ನಾಲ್ಕು ಸ್ಥಾನಗಳಿಗೆ ಆಯ್ಕೆಗೊಂಡವರಲ್ಲಿ ಕಾಂಗ್ರೆಸ್‌ನಿಂದ ಬಂದ ಮಲ್ಲಿಕಾರ್ಜುನ ಖರ್ಗೆ ಶಿಷ್ಯ ಛಲವಾದಿ ನಾರಾಯಣ ಸ್ವಾಮಿ ಅವರಿಗೆ ಟಿಕೆಟ್ ನೀಡಿದೆ, ಇನ್ನು ಜನತಾ ಪರಿವಾರದ ಸವದಿ ವಿಧಾನಪರಿಷತ್ತಿಗೆ ಪುನರಾಯ್ಕೆಗೆ ಅವಕಾಶ ಮಾಡಿಕೊಟ್ಟಿದೆ. ಇನ್ನುಳಿದ ಹೇಮಲತಾ ನಾಯಕ್ ಹಾಗೂ ಎಸ್. ಕೇಶವ ಪ್ರಸಾದ್ ಪಕ್ಷದ ಮೂಲ ಕಾರ್ಯಕರ್ತರಾಗಿದ್ದಾರೆ.

ಅಧಿಕಾರ, ಸ್ಥಾನವೇ ಅಂತಿಮವಲ್ಲ

ವಿಜಯೇಂದ್ರ ಪತ್ರದ ಮೂಲಕ ಮನವಿ ಮಾಡಿದ್ದಾರೆ. ಪಕ್ಷದ ಈ ನಿರ್ಧಾರವನ್ನು ಅನುಸರಿಸಿ ಸಾಮಾಜಿಕ ಜಾಲತಾಣಗಳಲ್ಲಿ ಮತ್ತು ಇತರೆಡೆ ಅನಗತ್ಯ ಕಾಮೆಂಟ್‌ಗಳನ್ನು ಮಾಡದಂತೆ ಮನವಿ ಮಾಡಿದ್ದು, ಇದು ಪಕ್ಷದ ಪ್ರತಿಷ್ಠೆಗೆ ಮಾತ್ರವಲ್ಲದೆ ಯಡಿಯೂರಪ್ಪ ಹಾಗೂ ತಮ್ಮ ಭಾವನೆಗಳಿಗೆ ಧಕ್ಕೆ ತರುತ್ತದೆ ಎಂದು ಹೇಳಿದ್ದಾರೆ.

ನಾನು ರಾಜಕೀಯಕ್ಕೆ ಬಂದಾಗಿನಿಂದ ಪಕ್ಷದ ರಾಜ್ಯ ಘಟಕದ ಉಪಾಧ್ಯಕ್ಷನಾಗಿ ಕೆಲಸ ಮಾಡುವ ಅವಕಾಶವನ್ನು ನೀಡುವ ಮೂಲಕ ಪಕ್ಷ ಮತ್ತು ನಮ್ಮ ನಾಯಕರು ಯಾವಾಗಲೂ ನನಗೆ ಪ್ರೋತ್ಸಾಹ ಮತ್ತು ಬೆಂಬಲವಾಗಿ ನಿಂತಿದ್ದಾರೆ. ರಾಜಕೀಯದಲ್ಲಿ ಅಧಿಕಾರ ಮತ್ತು ಸ್ಥಾನಮಾನವೇ ಅಂತಿಮವಲ್ಲ ಎಂಬುದನ್ನು ಅರ್ಥಮಾಡಿಕೊಳ್ಳಬೇಕು ಎಂದು ಎಲ್ಲಾ ಕಾರ್ಯಕರ್ತರು ಮತ್ತು ನನ್ನ ಬೆಂಬಲಿಗರಲ್ಲಿ ಮನವಿ ಮಾಡುತ್ತೇನೆ ಎಂದು ವಿಜಯೇಂದ್ರ ಹೇಳಿದ್ದಾರೆ. ಪಕ್ಷದ ಶಿಸ್ತಿನ ಚೌಕಟ್ಟಿನಲ್ಲಿ ನಾವೆಲ್ಲರೂ ಸಾಮಾನ್ಯ ಕಾರ್ಯಕರ್ತರು. ಸಾಮರ್ಥ್ಯ ಇರುವವರನ್ನು ಪಕ್ಷ ಎಂದಿಗೂ ಕೈಬಿಟ್ಟಿಲ್ಲ. ಈ ನಿಟ್ಟಿನಲ್ಲಿ ಎಲ್ಲರೂ ಸಹನೆ, ಸೌಜನ್ಯದಿಂದ ವರ್ತಿಸಬೇಕೆಂದು ಮನವಿ ಮಾಡುತ್ತೇನೆ. ನಿಮ್ಮೆಲ್ಲರ ಬೆಂಬಲ, ಸಹಕಾರ ಸದಾ ಇರಲಿ ಎಂದು ಬಿ.ವೈ.ವಿಜಯೇಂದ್ರ ವಿನಂತಿಸಿದ್ದಾರೆ.

ಸೆಲ್ಫಿಯಿಂದ ಸಿಕ್ಕಿ ಬಿದ್ದ

ಬೆಂಗಳೂರಿನ ಲಕ್ಕಸಂದ್ರದಲ್ಲಿರುವ ಉದಯರಾಜ್‌ಸಿಂಗ್ ಮತ್ತು ಸುಶೀಲ ದಂಪತಿ ಮನೆಗೆ ಹೋಗಿ, ತಾವು ಡೈಮಂಡ್ ನೆಕ್ಲೆಸ್ ಖರೀದಿಸುತ್ತೇವೆಂದು ಹೇಳಿ, ಬೆಲೆ ಪ್ರಸ್ತಾಪಿಸಿ ಮಾತನಾಡುತ್ತಿರುವಂತೆಯೇ ಸಿಂಗ್ ಅವರನ್ನು ಹತ್ಯೆಗೈದು ನೆಕ್ಲೆಸ್ ದೋಚಿದ್ದರು. ಪ್ರಕರಣ ದಾಖಲಿಸಿಕೊಂಡಿದ್ದ ಆಡುಗೋಡಿ ಪೊಲೀಸರು, ಎಲ್ಲಾ 7 ಮಂದಿ ಆರೋಪಿಗಳನ್ನೂ ಬಂಧಿಸಿದ್ದರು. ಆದರೆ 2017ರ ಮೇ 6ರಂದು ಮಧುಸೂದನ್‌ಗೆ ಜಾಮೀನು ಸಿಕ್ಕಿತ್ತು. ನಂತರ ಪಾಟ್ನಾಗೆ ತೆರಳಿ, ಅಲ್ಲಿಂದ ಪುಣೆಯಲ್ಲಿ ಒಂದು ಸಣ್ಣ ಉದ್ಯೋಗ ಮಾಡಿಕೊಂಡಿದ್ದ. ಆದರೆ ವಿಚಾರಣೆಗಾಗಿ ನ್ಯಾಯಾಲಯಕ್ಕೆ ಹಾಜರಾಗದೇ ತಲೆಮರೆಸಿಕೊಂಡಿದ್ದ ಆತನಿಗೆ ಹಲವು ಬಾರಿ ಅರೆಸ್ಟ್ ವಾರೆಂಟ್ ಹೊರಡಿಸಲಾಗಿತ್ತು. ಆದರೆ ಆತ ಪೊಲೀಸರ ಕಣ್ಣು ತಪ್ಪಿಸಿ ಅಡಗಿದ್ದ. ಕೊಲೆ ಪ್ರಕರಣದ ಉಳಿದ 6 ಆರೋಪಿಗಳಿಗೆ ಜೀವಾವಧಿ ಶಿಕ್ಷೆಯಾಗಿದೆಯಾದರೂ ಮಧು ಮಾತ್ರ ತಲೆ ಮರೆಸಿಕೊಂಡಿದ್ದ.

ಇತ್ತೀಚೆಗಷ್ಟೇ ಬೆಂಗಳೂರಿಗೆ ಬಂದಿದ್ದ ಮಧು, ಪೀಣ್ಯ ಬಳಿ ಮಾಲ್‌ವೊಂದರಲ್ಲಿ ಸ್ನೇಹಿತ ನೊಂದಿಗೆ ಸೆಲ್ಫೀ ತೆಗೆಸಿಕೊಂಡು, ಫೇಸ್‌ಬುಕ್‌ನಲ್ಲಿ ಫೋಟೋ ಪೋಸ್ಟ್ ಮಾಡಿದ್ದರಿಂದ ಅದರ ಜಾಡು ಹಿಡಿದ ಪೊಲೀಸರು ಭಾನುವಾರ ಆತನನ್ನು ಬಂಧಿಸಿ, ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಗಿ ಆತನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದ್ದು, ಈಗ ಪರಪ್ಪನ ಅಗ್ರಹಾರ ಜೈಲಿಗಟ್ಟಲಾಗಿದೆ.

ಈ ನಡುವೆ ಕಳೆದ 6 ದಿನಗಳ ಹಿಂದಷ್ಟೇ ಮೈಸೂರಿಗೂ ಬಂದಿದ್ದ ಮಧುಸೂದನ್, ಕೃಷ್ಣಮೂರ್ತಿಪುರಂನಲ್ಲಿರುವ ಸಂಬಂಧಿಕರು ಹಾಗೂ ತನ್ನ ಹಳೇ ಸ್ನೇಹಿತರನ್ನು ಭೇಟಿ ಮಾಡಿ ಪುಣೆಗೆ ಹಿಂತಿರುಗುವುದಾಗಿ ಹೇಳಿ ಹೋಗಿದ್ದನಲ್ಲದೆ, ನಾಲ್ಕೈದು ವರ್ಷಗಳ ನಂತರ ವಾಪಸ್ ಬಂದು ಮೈಸೂರಿನಲ್ಲಿ ಖಾಯಂ ಆಗಿ ವಾಸ್ತವ್ಯ ಹೂಡುತ್ತೇನೆಂದು ಹೇಳಿದ್ದ ಎಂಬುದು ಪೊಲೀಸರ ವಿಚಾರಣೆ ವೇಳೆ ತಿಳಿದುಬಂದಿದೆ.

ಹೆಚ್.ಡಿ.ಕೋಟೆಯ ಸರ್ಕಾರಿ ಶಾಲೆಗೆ ಹೊಸರೂಪ

‘ಉಪ್ಕೃತಿ’ ಸ್ವಯಂ ಸೇವಾ ತಂಡದಿಂದ ಶಾಲಾ ಕೊಠಡಿಗಳಿಗೆ ಬಣ್ಣ...

ಬಾಲ್ಯವಿವಾಹ, ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆಯ ಸಂದೇಶ

4 ಕೊಠಡಿಗಳಿಗೆ ಬಣ್ಣ ಬಳಿದು, ಚಿತ್ರ ಬಿಡಿಸಿದರು











ಹೆಚ್.ಡಿ.ಕೋಟೆ ತಾಲೂಕಿನ ಗೆಂಡೇಗೌಡನ ಕಾಲೋನಿ(ಜಿಜಿ ಕಾಲೋನಿ)ಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಹೊಸ ರೂಪ ನೀಡಿರುವ ಉಪ್ಕೃತಿ ಸ್ವಯಂಸೇವಕರು.

ಮೈಸೂರು,ಮೇ 24(ಎಂಟಿವೈ)– ಮಾಸಿದ ಬಣ್ಣದೊಂದಿಗೆ ಮಂಕಾಗಿದ್ದ ಹೆಚ್.ಡಿ.ಕೋಟೆ ತಾಲೂಕಿನ ಜಿಜಿ ಕಾಲೋನಿ (ಗೆಂಡೇಗೌಡರ ಕಾಲೋನಿ)ಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಬೆಂಗಳೂರಿನ ‘ಉಪ್ಕೃತಿ’ ಸ್ವಯಂ ಸೇವಾ ಸಂಸ್ಥೆಯು ಗ್ರಾಮದ ಜನರ ಸಹಕಾರದಿಂದ ಹೊಸ ರೂಪ ನೀಡುವ ಮೂಲಕ ವಿದ್ಯಾರ್ಥಿಗಳ ಕಲಿಕೆಗೆ ಪೂರಕವಾದ ವಾತಾವರಣ ನಿರ್ಮಿಸಿದೆ.

ಸರ್ಕಾರಿ ಶಾಲೆಗಳಿಗೆ ಕಾಯಕಲ್ಪ ನೀಡುವ ಉದ್ದೇಶದೊಂದಿಗೆ ಕಾರ್ಯೋನ್ಮುಖವಾಗಿರುವ ಉಪ್ಕೃತಿ ಸ್ವಯಂ ಸೇವಾ ಸಂಸ್ಥೆಯ 25ಕ್ಕೂ ಹೆಚ್ಚು ಸ್ವಯಂಸೇವಕರು ಎರಡು ದಿನಗಳಲ್ಲಿ ಇಡೀ ಶಾಲೆಯ ಸ್ವರೂಪವನ್ನೇ ಬದಲಿಸಿದ್ದಾರೆ. 5 ಕೊಠಡಿಯುಳ್ಳ ಈ ಶಾಲೆಯ ನಾಲ್ಕು ಕೊಠಡಿಗಳು ಇದೀಗ ನಳನಳಿಸುತ್ತಿವೆ. ಕೇವಲ ಚಿತ್ರ, ಬಣ್ಣದಿಂದ ಮಾತ್ರವಲ್ಲದೆ, ಗೋಡೆಗಳ ಮೇಲೆ ಬರೆದಿರುವ ಕೆಲವು ಸಂದೇಶಗಳು ಹೆಣ್ಣು ಮಕ್ಕಳನ್ನು ಶಾಲೆಗೆ ಬರುವಂತೆ ಜಾಗೃತಿ ಮೂಡಿಸಿದ್ದಾರೆ.

ಕೋರಿಕೆ ಮೇರೆಗೆ ಹೊಸ ರೂಪ: ಹೆಚ್.ಡಿ.ಕೋಟೆ ತಾಲೂಕಿನ ಗಾಂದಿನಗರದ ಶಾಲೆಗೆ ಬಣ್ಣ ಬಳಿಯುತ್ತಿದ್ದ ಉಪ್ಕೃತಿ ಸ್ವಯಂಸೇವಕರನ್ನು ಜಿಜಿ ಕಾಲೋ ನಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕಿ ಉಷಾ ಕುಮಾರಿ ಭೇಟಿ ಮಾಡಿ ಜಿಜಿ ಕಾಲೋನಿಯ ಶಾಲೆಗೂ ಬಣ್ಣದ ಮೂಲಕ ಹೊಸ ರೂಪ ನೀಡುವಂತೆ ಕೋರಿದ್ದರು. ಈ ಹಿನ್ನೆಲೆಯಲ್ಲಿ ಉಪ್ಕೃತಿ ಸಂಸ್ಥಾಪಕ ಎನ್.ಚಂದನ್ ಜಿಜಿ ಶಾಲೆಗೆ ಭೇಟಿ ನೀಡಿ ಪರಿಶೀಲಿಸಿದ್ದರಲ್ಲದೆ, ಶಾಲಾ ಕೊಠಡಿಯ ಅಂದ ಹೆಚ್ಚಿಸುವ ಕೆಲಸ ಮಾಡುವ ಭರವಸೆ ನೀಡಿದ್ದರು.

ಸಾಥ್ ನೀಡಿದ ಗ್ರಾಮಸ್ಥರು: ಜಿಜಿ ಕಾಲೋನಿಯಲ್ಲಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಪ್ರಸ್ತುತ 1 ರಿಂದ 7ನೇ ತರಗತಿವರೆಗೆ 60 ಮಕ್ಕಳು ಓದುತ್ತಿದ್ದಾರೆ. ಈ ಶಾಲೆಯಲ್ಲಿ ಗೆಂಡೇಗೌಡನ ಕಾಲೋನಿ(ಜಿಜಿ ಕಾಲೋನಿ), ಗೂಳಿಕಟ್ಟೆ, ಬೋವಿ ಕಾಲೋನಿ, ಪಡುಕೋಟೆ ಗ್ರಾಮಗಳ ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ. 1982ರಲ್ಲಿ ಈ ಶಾಲಾ ಕೊಠಡಿ ನಿರ್ಮಾಣ ಮಾಡಲಾಗಿದೆ. ಮೊದಲು ಮೂರು ಕೊಠಡಿಗಳಿದ್ದವು. ಇತ್ತೀಚೆಗೆ ಇನ್ನೆರಡು ಕೊಠಡಿ ನಿರ್ಮಿಸಲಾಗಿದೆ. ಉಪ್ಕೃತಿ ಸ್ವಯಂ ಸೇವಾ ಸಂಸ್ಥೆಗೆ ಗೆಂಡೇಗೌಡನ ಕಾಲೋನಿಯ ಗ್ರಾಮಸ್ಥರು, ಗ್ರಾ.ಪಂ ಸದಸ್ಯರು, ಶಿಕ್ಷಕರು, ಎಸ್‌ಡಿಎಂಸಿ ಸದಸ್ಯರು ಕೈಜೋಡಿಸಿ, 25 ಸಾವಿರ ರೂ. ಮೌಲ್ಯದ ಬಣ್ಣ ಖರೀದಿಸಿ ಶಾಲೆಗೆ ಹೊಸ ರೂಪ ಬರಲು ಸಹಕರಿಸಿದ್ದಾರೆ. ಬಣ್ಣ ಹೊಡೆದ ಬಳಿಕ ಉಪ್ಕೃತಿ ಸ್ವಯಂಸೇವಕರು ತಾವೇ ತಂದಿದ್ದ ಬಣ್ಣಗಳಿಂದ ಶಾಲಾ ಕೊಠಡಿಗಳ ಗೋಡೆ ಮೇಲೆ ವಿವಿಧ ಚಿತ್ರ ಬರೆಯುವ ಮೂಲಕ ಗಮನ ಸೆಳೆದಿದ್ದಾರೆ.

ವೃತ್ತಿಪರರ ತಂಡ: ಉಪ್ಕೃತಿ ಸಂಸ್ಥೆಯ ಸಂಸ್ಥಾಪಕ ಎನ್.ಚಂದನ್ ಮಾತನಾಡಿ, ಜಿಜಿ ಕಾಲೋನಿಯ ಸರ್ಕಾರಿ ಶಾಲೆಯಲ್ಲಿ ಎರಡು ದಿನ ಸೇವೆ ಸಲ್ಲಿಸಿ ಕೊಠಡಿಗಳಿಗೆ ಹೊಸ ರೂಪ ನೀಡಲಾಗಿದೆ. ಕೊಠಡಿಯ ಗೋಡೆಗಳ ಮೇಲೆ ವಾಟರ್ ಪ್ರೂಫ್ ಪೇಂಟಿಂಗ್ ಮಾಡಿ, ಆ ನಂತರ ನಲಿಕಲಿ ಚಿತ್ರ ಬರೆದು, ಆಕರ್ಷಕ ಬಣ್ಣ ಹಚ್ಚಲಾಗಿದೆ. ಅಲ್ಲದೆ, ಬಾಲ್ಯ ವಿವಾಹ ಹಾಗೂ ಬಾಲಕಾರ್ಮಿಕ ನಿಷೇಧದ ಸಂದೇಶ, ಮಕ್ಕಳ ಹಕ್ಕುಗಳ ಜಾಗೃತಿ ಸಂದೇಶಗಳನ್ನು ಗೋಡೆ ಮೇಲೆ ಮೂಡಿಸಲಾಗಿದೆ. ಕಾರ್ಟೂನ್‌ಗಳನ್ನು ಚಿತ್ರಿಸಲಾಗಿದೆ. ಇದು ಮಕ್ಕಳ ಆಕರ್ಷಣೆಯ ಕೇಂದ್ರ ಬಿಂದುವಾಗಿದೆ. ನಲಿಕಲಿ ತರಗತಿ ಕೊಠಡಿಯಲ್ಲಿ ಮಕ್ಕಳಿಗೆ ಕಲಿಕೆ ಸಹಕಾರಿಯಾದ ಚಿತ್ರಗಳನ್ನು ಬರೆದಿರುವುದರಿಂದ ಕಲಿಕೆ ಹಾಗೂ ಗ್ರಹಿಕೆಗೆ ಸಹಕಾರಿಯಾಗಲಿದೆ.

ನಮ್ಮ ತಂಡದ ಗುಂಪಿನಲ್ಲಿ ವೃತ್ತಿಪರ ಕಲಾವಿದರು ಹಾಗೂ ವಿವಿಧ ವೃತ್ತಿಯಲ್ಲಿ ತೊಡಗಿಸಿಕೊಂಡಿರುವವರಿದ್ದಾರೆ. ಅಲ್ಲದೆ, ಆಚಾರ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಎಂಜಿನಿಯರಿಂಗ್ ವಿದ್ಯಾರ್ಥಿಗಳು, ಆರ್‌ಜೆ, ಸಾಫ್ಟ್‌ವೇರ್ ಎಂಜಿನಿಯರ್‌ಗಳು ಸ್ವಯಂ ಸೇವಾ ಚಟುವಟಿಕೆಯಲ್ಲಿ ಪಾಲ್ಗೊಂಡಿದ್ದಾರೆ. ಜಿಜಿ ಕಾಲೋನಿ ಶಾಲೆಯಲ್ಲಿ ಸ್ವಯಂ ಸೇವಕರಾದ ಮಾನಸ, ದರ್ಶನ್, ವಿಕೇಶ್, ಪ್ರಕೃತಿ, ಕಿರಣ್, ಅಮೃತ, ಶಶಾಂಕ್, ವರ್ಷ, ಶರಣ್ಯ, ಅನು, ಪ್ರಾರ್ಥನಾ, ಪ್ರತೀಕ್ಷಾ, ಶಿವಂ, ಮಧುರ, ಹರಿಪ್ರಿಯಾ, ಅನನ್ಯಾ, ದೀಪ್ತಿ, ತಸ್ಮಿಯಾ, ಧನುಷಾ, ಸುಹಾಸ್, ಸಿದ್ದೇಶ್, ಸಯೀಮಾ, ಆಶಿಶ್ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು ಎಂದು ವಿವರಿಸಿದರು.

ಗ್ರಾಮಸ್ಥರಿಗೂ ಸಂತೋಷವಾಗಿದೆ

ಜಿಜಿ ಕಾಲೋನಿ ಶಾಲೆಯ ಮುಖ್ಯಶಿಕ್ಷಕಿ ಉಷಾ ಕುಮಾರಿ ಮಾತನಾಡಿ, ಶಾಲೆಯ ಕೊಠಡಿಗಳಿಗೆ ಉಪ್ಕೃತಿ ಸಂಸ್ಥೆಯ ಸ್ವಯಂಸೇವಕರು ಹೊಸ ರೂಪ ನೀಡಿದ್ದಾರೆ. ಇದರಿಂದ ಶಾಲೆಯ ವಿದ್ಯಾರ್ಥಿಗಳಿಗೆ ಮಾತ್ರವಲ್ಲದೆ ಗ್ರಾಮಸ್ಥರಿಗೂ ಸಂತೋಷವನ್ನುಂಟು ಮಾಡಿದೆ. ಚಿತ್ರ ಬರೆಯುವ ಶಾಲೆಯ ಮೊದಲ ಕೊಠಡಿಗೆ ಬಣ್ಣ ಬಳಿಯುವುದಕ್ಕೆ ಗ್ರಾಮಸ್ಥರು, ಶಿಕ್ಷಕರು, ಗ್ರಾಪಂ ಸದಸ್ಯರು ನೆರವು ನೀಡಿದ್ದಾರೆ. ಆ ನಂತರದ ಕೆಲಸಕ್ಕೆ ಉಪ್ಕೃತಿ ಸಂಸ್ಥೆಯ ಸದಸ್ಯರೇ ಹಣ ವಿನಿಯೋಗಿಸಿದ್ದಾರೆ. ಎರಡು ದಿನವೂ ಗ್ರಾಮಸ್ಥರು ಸ್ವಯಂ ಸೇವಕರಿಗೆ ಆತಿಥ್ಯ ನೀಡಿದ್ದಾರೆ. ಉಳಿದೆಲ್ಲವನ್ನೂ ಉಪ್ಕೃತಿ ಸಂಸ್ಥೆಯವರೇ ನೋಡಿಕೊಂಡಿದ್ದಾರೆ. ಶಾಲೆಯಲ್ಲಿ 60 ವಿದ್ಯಾರ್ಥಿಗಳಿದ್ದು, ಉಷಾ ಕುಮಾರಿ, ವಿ.ಉಷಾ ಹಾಗೂ ವೈ.ಎನ್. ಮನೋಹರ್ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಶಾಲೆಯಲ್ಲಿರುವ ಕಂಪ್ಯೂಟರ್, ಪ್ರಿಂಟರ್ ಅನ್ನು ರಿಪೇರಿ ಮಾಡಿಕೊಡುವುದಾಗಿ ಭರವಸೆ ನೀಡಿದ್ದಾರೆ ಎಂದು ತಿಳಿಸಿದರು.

ಮಾನಸ ಗಂಗೋತ್ರಿ ಹಾಸ್ಟೆಲ್‌ಗಳಿಗೆ ಸಮರ್ಪಕ ಮೂಲ ಸೌಕರ್ಯ ಕಲ್ಪಿಸಲು ಆಗ್ರಹಿಸಿ ವಿದ್ಯಾರ್ಥಿಗಳ ಪ್ರತಿಭಟನೆ



> **“ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿದ ಕುಲಪತಿ ಪ್ರೊ.ಜಿ.ಹೇಮಂತ್ ಕುಮಾರ್ ಅವರು ನಮ್ಮ ಮನವಿ ಆಲಿಸಿ, ವಾರದೊಳಗೆ ಸಮಸ್ಯೆಗಳನ್ನು ಬಗೆಹರಿಸುವ ಭರವಸೆ ನೀಡಿದರು. ಬಳಿಕ ಪ್ರತಿಭಟನೆ ಕೈಬಿಡಲಾಯಿತು. ಶೀಘ್ರ ಸಮಸ್ಯೆ ಪರಿಹರಿಸದೇ ಹೋದಲ್ಲಿ ತೀವ್ರ ಹೋರಾಟ ನಡೆಸಲಾಗುವುದು.**
> **-ಬಸವರಾಜು, ಸಂಘದ ಕಾರ್ಯಾಧ್ಯಕ್ಷ**

ಮೈಸೂರು,ಮೇ 24(ಪಿಎಂ)–ಮೈಸೂರು ವಿವಿಯ ಮಾನಸಗಂಗೋತ್ರಿ ಹಾಸ್ಟೆಲ್‌ಗಳಿಗೆ ಮೂಲ ಸೌಕರ್ಯಗಳನ್ನು ಸಮರ್ಪಕವಾಗಿ ಕಲ್ಪಿಸಬೇಕೆಂದು ಆಗ್ರಹಿಸಿ ಮೈಸೂರು ವಿಶ್ವವಿದ್ಯಾನಿಲಯ ಸಂಶೋಧಕರ ಸಂಘ ಮತ್ತು ದಲಿತ ವಿದ್ಯಾರ್ಥಿ ಒಕ್ಕೂಟದ ನೇತೃತ್ವದಲ್ಲಿ ಹಾಸ್ಟೆಲ್ ವಿದ್ಯಾರ್ಥಿಗಳು ಮಂಗಳವಾರ ಪ್ರತಿಭಟನೆ ನಡೆಸಿದರು.

ಸ್ನಾತಕೋತ್ತರ ಪುರುಷ ವಿದ್ಯಾರ್ಥಿ ನಿಲಯ ಬ್ಲಾಕ್ 2ರ ಎದುರು ಜಮಾಯಿಸಿದ ವಿದ್ಯಾರ್ಥಿಗಳು, ಇಲ್ಲಿನ ಪುರುಷ ಮತ್ತು ಮಹಿಳಾ ಹಾಸ್ಟೆಲ್‌ಗಳ ಊಟದಲ್ಲಿ ಗುಣಮಟ್ಟ ಕಾಯ್ದುಕೊಳ್ಳುತ್ತಿಲ್ಲ. ಈ ಸಂಬಂಧ ಪರಿಶೀಲಿಸಿ, ಸೂಕ್ತ ಕ್ರಮ ಕೈಗೊಳ್ಳಬೇಕು. ಮಳೆಯಿಂದ ಹಾಸ್ಟೆಲ್‌ಗಳಲ್ಲಿ ಹಲವೆಡೆ ಸೋರಿಕೆ ಉಂಟಾಗುತ್ತಿದೆ. ಇದನ್ನು ಶೀಘ್ರದಲ್ಲಿ ಸರಿಪಡಿಸಬೇಕು ಎಂದು ಆಗ್ರಹಿಸಿದರು.

ಹಾಸ್ಟೆಲ್‌ಗಳಲ್ಲಿ ಕುಡಿಯುವ ನೀರು ಸಮರ್ಪಕವಾಗಿ ಪೂರೈಕೆಯಾಗುತ್ತಿಲ್ಲ. ಸ್ವಚ್ಛತೆ ಕಾಪಾಡುವಲ್ಲಿಯೂ ನಿರ್ಲಕ್ಷ್ಯ ತಾಳಲಾಗಿದೆ. ಸಂಶೋಧಕರ ನೂತನ ಹಾಸ್ಟೆಲ್‌ಗೆ ಶೀಘ್ರ ಪ್ರವೇಶಾತಿ ನೀಡಬೇಕು ಎಂದು ಒತ್ತಾಯಿಸಿದರು.

‘ಮೈಸೂರು ಮಿತ್ರ’ನೊಂದಿಗೆ ಮಾತನಾಡಿದ ಸಂಘದ ಕಾರ್ಯಾಧ್ಯಕ್ಷ ಬಸವರಾಜು, ನ್ಯೂ ಪಿಜಿ ಹಾಸ್ಟೆಲ್‌ನ ಎ, ಬಿ ಮತ್ತು ಸಿ ಬ್ಲಾಕ್‌ಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ. ಹಾಗಾಗಿ ವಿದ್ಯಾರ್ಥಿಗಳು ಹೊರಗಿನಿಂದ ಶುದ್ಧ ಕುಡಿಯುವ ನೀರು ತಂದು ಕುಡಿಯುವ ಪರಿಸ್ಥಿತಿ ನಿರ್ಮಾಣವಾಗಿದೆ. ಅಲ್ಲದೆ, ಈ ಮೂರು ಬ್ಲಾಕ್‌ಗಳ ಕೊಠಡಿಗಳೂ ಸೇರಿದಂತೆ ಹಲವೆಡೆ ಮೇಲ್ಛಾವಣಿ ಸೋರಿಕೆಯಾಗುತ್ತಿದ್ದು, ಮಳೆ ಬಂದಾಗ ವಿದ್ಯಾರ್ಥಿಗಳು ಸಾಕಷ್ಟು ಕಿರಿಕಿರಿ ಅನುಭವಿಸುವಂತಾಗಿದೆ ಎಂದು ದೂರಿದರು.

ಅಲ್ಲದೆ, ಈ ಎಲ್ಲಾ ಬ್ಲಾಕ್‌ಗಳಲ್ಲಿಯೂ ಸುಮಾರು 8 ಗೀಜರ್‌ಗಳಿದ್ದು, ಇವುಗಳಲ್ಲಿ ಕೇವಲ ಎರಡು–ಮೂರು ಮಾತ್ರ ಸುಸ್ಥಿತಿಯಲ್ಲಿವೆ. ಸಂಶೋಧಕರ ನೂತನ ಹಾಸ್ಟೆಲ್ ಉದ್ಘಾಟನೆಯಾಗಿ ವರ್ಷ ಕಳೆದರೂ ಇಲ್ಲಿಗೆ ಪ್ರವೇಶಾತಿ ನೀಡಿಲ್ಲ ಎಂದು ದೂರಿದರು.

ಸಂಘದ ಗೌರವಾಧ್ಯಕ್ಷ ಮಹೇಶ್ ಸೋಸ್ಲೆ ಮಾತನಾಡಿ, ಕಳೆದ ವರ್ಷ ಕೋವಿಡ್ ಇದ್ದಾಗ್ಯೂ ಲಕ್ಷಾಂತರ ಹಣ ವ್ಯಯಿಸಿ ನ್ಯೂ ಪಿಜಿ ಹಾಸ್ಟೆಲ್‌ನ ಮೂರು ಬ್ಲಾಕ್‌ಗಳನ್ನು ನವೀಕರಣ ಮಾಡಲಾಗಿದೆ. ಅದಾಗ್ಯೂ, ಮೇಲ್ಛಾವಣಿ ಸೋರಿಕೆಯಾಗುತ್ತಿದ್ದು, ಇದನ್ನು ನೋಡಿದರೆ ನವೀಕರಣ ಕಾಮಗಾರಿಯಲ್ಲಿ ಗುಣಮಟ್ಟ ಕಾಯ್ದುಕೊಂಡಿಲ್ಲ ಎಂಬುದು ಸ್ಪಷ್ಟವಾಗುತ್ತದೆ ಎಂದು ಆರೋಪಿಸಿದರು.

ಸಂಘದ ಅಧ್ಯಕ್ಷ ನಟರಾಜ್ ಶಿವಣ್ಣ, ಕಾರ್ಯದರ್ಶಿ ಜೆ.ಶಿವಮೂರ್ತಿ, ದಲಿತ ವಿದ್ಯಾರ್ಥಿ ಒಕ್ಕೂಟದ ಅಧ್ಯಕ್ಷ ಮಣಿಕಂಠ ಸ್ವಾಮಿ, ಗೌರವಾಧ್ಯಕ್ಷ ಪ್ರಮೋದ್ ಸೇರಿದಂತೆ ವಿದ್ಯಾರ್ಥಿಗಳು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಪಾರ್ಕ್‌ನಲ್ಲಿ ವ್ಯಕ್ತಿ ಆತ್ಮಹತ್ಯೆ

ಮೈಸೂರು, ಮೇ 24(ಆರ್‌ಕೆ)– ಸಾಲ ಬಾಧೆ ತಾಳಲಾರದೇ ವ್ಯಕ್ತಿಯೋರ್ವ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿರುವ ಘಟನೆ ಮೈಸೂರಿನ ಟೆಲಿಕಾಂ ಬಡಾವಣೆಯಲ್ಲಿ ಕಳೆದ ರಾತ್ರಿ ಸಂಭವಿಸಿದೆ. ಮೈಸೂರಿನ ಪ್ರಶಾಂತನಗರ ಬಡಾವಣೆ ನಿವಾಸಿ ಮಹೇಶ(30) ಆತ್ಮಹತ್ಯೆ ಮಾಡಿಕೊಂಡವರು. ನನ್ನ ಸಾವಿಗೆ ನಾನೇ ಕಾರಣ ಎಂದು ಡೆತ್ ನೋಟ್ ಬರೆದಿಟ್ಟು ಸೋಮವಾರ ರಾತ್ರಿ ಟೆಲಿಕಾಂ ಬಡಾವಣೆಯ ಪಾರ್ಕೊಂದರಲ್ಲಿ ಮರಕ್ಕೆ ನೇಣುಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ವಿಷಯ ಇಂದು ಬೆಳಗ್ಗೆ ಬೆಳಕಿಗೆ ಬಂದಿದೆ.

ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ತೆರಳಿದ ಸರಸ್ವತಿಪುರಂ ಠಾಣೆ ಪೊಲೀಸರು ಮಹಜರು ನಡೆಸಿದಾಗ ಸ್ಥಳದಲ್ಲಿ ಡೆತ್ ನೋಟ್ ಸಿಕ್ಕಿದೆ. ಕೂಲಿ ಕಾರ್ಮಿಕನಾದ ಮಹೇಶ್, ತಾನು ಮಾಡಿದ ಸಾಲ ತೀರಿಸಲಾಗದೇ ಆತ್ಮಹತ್ಯೆಗೆ ಶರಣಾಗಿದ್ದಾನೆ ಎಂದು ಹೇಳಲಾಗಿದೆ. ಪ್ರಕರಣ ದಾಖಲಿಸಿಕೊಂಡಿರುವ ಸರಸ್ವತಿಪುರಂ ಠಾಣೆ ಪೊಲೀಸರು, ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ನಂತರ ದೇಹವನ್ನು ವಾರಸುದಾರರಿಗೆ ಒಪ್ಪಿಸಿದರು.

ಆರ್.ಸುಕನ್ಯಗೆ 608 ಅಂಕ



ಮೈಸೂರು, ಮೇ 24– ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ವಿದ್ಯಾರಣ್ಯಪುರಂ ನಿವಾಸಿ ರಾಮಪ್ರಸಾದ್ ಹಾಗೂ ಯೋಗೇಶ್ವರಿ ದಂಪತಿ ಪುತ್ರಿ ಆರ್.ಸುಕನ್ಯ 608 ಅಂಕ ಗಳಿಸುವ ಮೂಲಕ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಕ್ರೈಸ್ಟ್ ಕಿಂಗ್ ಕಾನ್ವೆಂಟ್ ವಿದ್ಯಾರ್ಥಿನಿಯಾಗಿದ್ದು, ಕನ್ನಡದಲ್ಲಿ 121, ಇಂಗ್ಲಿಷ್‌ನಲ್ಲಿ 98, ಹಿಂದಿಯಲ್ಲಿ 97, ಗಣಿತದಲ್ಲಿ 94, ವಿಜ್ಞಾನದಲ್ಲಿ 98, ಸಮಾಜ ವಿಜ್ಞಾನದಲ್ಲಿ 100 ಅಂಕಗಳಿಸಿ, ಶೇ.97.28ರಂತೆ 608 ಅಂಕ ಪಡೆದಿದ್ದಾರೆ. ಈಕೆಯ ತಂದೆ ಕೊರೊನಾ ಎರಡನೇ ಅಲೆಯ ವೇಳೆ ಸೋಂಕಿತರನ್ನು ಕರೆದೊಯ್ಯಲು ಹಲವು ಸಾಮಾನ್ಯ ವಾಹನಗಳನ್ನು ಬೇಡಿಕೆಗೆ ಅನುಗುಣವಾಗಿ ಆಂಬುಲೆನ್ಸ್ ಆಗಿ ಮಾರ್ಪಡಿಸಿಕೊಟ್ಟು ಗಮನ ಸೆಳೆದಿದ್ದರು.

ಸಚ್ಚಿದಾನಂದ ಶ್ರೀಗಳ ಹುಟ್ಟುಹಬ್ಬದ ಅಂಗವಾಗಿ

ವಿಶೇಷ ಅಂಚೆ ಲಕೋಟೆ ಬಿಡುಗಡೆ



ಮೈಸೂರು, ಮೇ 24– ಭಾರತೀಯ ಅಂಚೆ ಇಲಾಖೆಯ ವತಿಯಿಂದ ಡಾ. ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರ 80ನೇ ವರ್ಷದ ಹುಟ್ಟುಹಬ್ಬದ ಪ್ರಯುಕ್ತ ಮೇ 26 ರಂದು ವಿಶೇಷ ಅಂಚೆ ಲಕೋಟೆಯನ್ನು ಮೈಸೂರು ಮುಖ್ಯ ಅಂಚೆ ಕಚೇರಿಯಲ್ಲಿ ಬಿಡುಗಡೆ ಮಾಡಲಾಗುವುದು. ಇದನ್ನು ಸಂಗ್ರಹಿಸುವವರು ಮೈಸೂರು, ಮಂಗಳೂರು, ಬೆಂಗಳೂರು ಹಾಗೂ ಬೆಳಗಾವಿ ಪ್ರಧಾನ ಅಂಚೆ ಕಚೇರಿಯ ಫಿಲಾಟೆಲಿ ಬ್ಯೂರೋದಲ್ಲಿ ಪಡೆದುಕೊಳ್ಳಬಹುದು ಎಂದು ಮೈಸೂರಿನ ಹಿರಿಯ ಅಂಚೆ ಅಧೀಕ್ಷಕರಾದ ಎ.ಕೆ.ನಾಯ್ಕ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆ

ಇಂದು ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡ ನಾಮಪತ್ರ ಸಲ್ಲಿಕೆ



ಮೈಸೂರು,ಮೇ 24(ಪಿಎಂ)– ದಕ್ಷಿಣ ಪದವೀಧರ ಕ್ಷೇತ್ರದಿಂದ ವಿಧಾನಪರಿಷತ್ ಚುನಾವಣೆಗೆ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡ ನಾಳೆ (ಮೇ 25) ನಾಮಪತ್ರ ಸಲ್ಲಿಸಲಿದ್ದಾರೆ ಎಂದು ಕಾಂಗ್ರೆಸ್ ಮೈಸೂರು ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಳಗ್ಗೆ 10.30ಕ್ಕೆ ಮೈಸೂರಿನ ಕಾಂಗ್ರೆಸ್ ಭವನದಲ್ಲಿ ವಿಧಾನಸಭೆ ವಿಪಕ್ಷ ನಾಯಕರೂ ಆದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ನೇತೃತ್ವದಲ್ಲಿ ಸಭೆ ನಡೆಯಲಿದೆ. ಬಳಿಕ ಮೆರವಣಿಗೆಯಲ್ಲಿ ಪ್ರಾದೇಶಿಕ ಆಯುಕ್ತರ ಕಚೇರಿಗೆ ತೆರಳಲಾಗುವುದು. ಅಲ್ಲಿ ಮಧ್ಯಾಹ್ನ 1ಕ್ಕೆ ಮಧು ಜಿ.ಮಾದೇಗೌಡ ನಾಮಪತ್ರ ಸಲ್ಲಿಸಲಿದ್ದಾರೆ ಎಂದರು.

ಈ ಕಾರ್ಯಕ್ರಮದಲ್ಲಿ ಮೈಸೂರು, ಮಂಡ್ಯ, ಚಾಮರಾಜನಗರ ಮತ್ತು ಹಾಸನ ಜಿಲ್ಲೆಯ ಪಕ್ಷದ ಎಲ್ಲಾ ಶಾಸಕರು, ಮಾಜಿ ಶಾಸಕರು, ಮುಖಂಡರು ಸೇರಿದಂತೆ ಕಾರ್ಯಕರ್ತರು ಪಾಲ್ಗೊಳ್ಳಲಿದ್ದಾರೆ. ಡಾ.ಜಿ. ಮಾದೇಗೌಡರು ಕಾಂಗ್ರೆಸ್ ಧುರೀಣರು, ಮುತ್ಸದ್ದಿಗಳೂ ಆಗಿದ್ದರು. ಅವರ ಪುತ್ರ ಮಧು ಜಿ.ಮಾದೇಗೌಡರು ಕಾಂಗ್ರೆಸ್‌ನಿಂದ ಕಣಕ್ಕಿಳಿದಿದ್ದಾರೆ. ಅವರಿಗೆ ನಾಲ್ಕೂ ಜಿಲ್ಲೆಗಳಿಂದ ದೊಡ್ಡ ಮಟ್ಟದ ಬೆಂಬಲ ವ್ಯಕ್ತವಾಗಿದೆ. ಅವರ ಗೆಲುವು ನಿಶ್ಚಿತವಾಗಿದೆ. ಹಿಂದೆ ಈ ಚುನಾವಣೆಯಲ್ಲಿ ಕಾಂಗ್ರೆಸ್ ಸೋಲು ಕಂಡಿರಬಹುದು. ಆದರೆ ಈ ಬಾರಿ ಕಾಂಗ್ರೆಸ್ ಗೆಲುವು ಖಚಿತವಾಗಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಗಾಂಧಿ ಭವನ ವಾರ್ತಾ ಮಾಸ ಪತ್ರಿಕೆಯ ಮೇ ಸಂಚಿಕೆಯಲ್ಲಿ ಡಾ.ಜಿ.ಮಾದೇಗೌಡ ಮತ್ತು ಅವರ ಪುತ್ರ ಮಧು ಜಿ.ಮಾದೇಗೌಡ ಅವರ ಸಾಧನೆ ಮತ್ತು ಸೇವಾ ಕಾರ್ಯಗಳ ಚಿತ್ರಣ ನೀಡಿದೆ. ಕ್ಷೇತ್ರದ ಪ್ರತಿ ಮತದಾರರಿಗೆ ಈ ಪತ್ರಿಕೆ ತಲುಪಿಸಲಾಗುವುದು ಎಂದರು.

ಚಾಮರಾಜನಗರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಮರಿಸ್ವಾಮಿ ಮಾತನಾಡಿ, ನಾಳಿನ ಕಾರ್ಯಕ್ರಮದಲ್ಲಿ ಸುಮಾರು 2 ಸಾವಿರ ಕಾರ್ಯಕರ್ತರು ಭಾಗವಹಿಸಲಿದ್ದಾರೆ. ಚಾಮರಾಜನಗರದಿಂದಲೂ 500ರಿಂದ 600 ಕಾರ್ಯಕರ್ತರು ಆಗಮಿಸಲಿದ್ದಾರೆ. ಪಕ್ಷದ ವರಿಷ್ಠರು ಒಬ್ಬ ಉತ್ತಮ ಅಭ್ಯರ್ಥಿಯನ್ನು ಈ ಚುನಾವಣೆಯಲ್ಲಿ ಕಣಕ್ಕಿಳಿಸಿದ್ದಾರೆ. ಕಾವೇರಿ ವಿಚಾರದಲ್ಲೂ ರೈತರ ಪರವಾಗಿ ಹೋರಾಟ ನಡೆಸಿದ್ದ ಮಾದೇಗೌಡರು, ಅನೇಕ ಸಮಾಜ ಸೇವಾ ಕಾರ್ಯದಲ್ಲೂ ತೊಡಗಿಸಿಕೊಂಡಿದ್ದರು. ಅವರ ಪುತ್ರ ಮಧು ಮಾದೇಗೌಡರೂ ತಮ್ಮ ತಂದೆಯಂತೆಯೇ ಜನಸೇವೆ ಮುಂದುವರೆಸಿದ್ದಾರೆ. ಹೀಗಾಗಿ ಅವರು ಗೆಲ್ಲುವ ವಿಶ್ವಾಸವಿದೆ ಎಂದು ತಿಳಿಸಿದರು.

ಮಂಡ್ಯ ಜಿಲ್ಲಾಧ್ಯಕ್ಷ ಸಿ.ಡಿ.ಗಂಗಾಧರ್ ಮಾತನಾಡಿ, ಕಳೆದ ವರ್ಷವೇ ಮಧು ಜಿ.ಮಾದೇಗೌಡ ಅವರನ್ನು ಅಭ್ಯರ್ಥಿಯಾಗಿ ಘೋಷಣೆ ಮಾಡಲಾಗಿತ್ತು. ನಾಳಿನ ಕಾರ್ಯಕ್ರಮಕ್ಕೆ ಮಂಡ್ಯದಿಂದ ಸಾವಿರಕ್ಕೂ ಹೆಚ್ಚು ಕಾರ್ಯಕರ್ತರು ಆಗಮಿಸಲಿದ್ದಾರೆ ಎಂದರು. ಇದಕ್ಕೂ ಮುನ್ನ ಗಾಂಧಿ ಭವನ ವಾರ್ತಾ ಮಾಸ ಪತ್ರಿಕೆಯ ಮೇ ಸಂಚಿಕೆ ಬಿಡುಗಡೆ ಮಾಡಲಾಯಿತು. ಮೈಸೂರು ನಗರಾಧ್ಯಕ್ಷ ಆರ್.ಮೂರ್ತಿ, ಪ್ರಧಾನ ಕಾರ್ಯದರ್ಶಿ ಶಿವಣ್ಣ, ಮುಖಂಡ ಶಿವಪ್ರಸಾದ್ ಗೋಷ್ಠಿಯಲ್ಲಿದ್ದರು.

ನಾಳೆ ಮಾತಾ ಮೆಲೋಡಿಸ್ ವಾರ್ಷಿಕೋತ್ಸವ

ಮೈಸೂರು,ಮೇ 24(ಪಿಎಂ)– ಮಾತಾ ಮೆಲೋಡಿಸ್ ಆರ್ಕೆಸ್ಟ್ರಾದ 9ನೇ ವಾರ್ಷಿಕೋತ್ಸವವನ್ನು ಮೇ 26ರಂದು ಆಯೋಜಿಸಲಾಗಿದೆ ಎಂದು ಆರ್ಕೆಸ್ಟ್ರಾದ ವ್ಯವಸ್ಥಾಪಕ ಎಂ.ಪುಟ್ಟಮಹದೇವಪ್ಪ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ 4.30ಕ್ಕೆ ನಗರದ ಪುರಭವನದಲ್ಲಿ ನಡೆಯುವ ಕಾರ್ಯಕ್ರಮವನ್ನು ಶಾಸಕ ಎಲ್. ನಾಗೇಂದ್ರ ಉದ್ಘಾಟಿಸುವರು. ಚಿಕ್ಕಮಗಳೂರಿನ ಕೃಷಿ ಜಂಟಿ ನಿರ್ದೇಶಕ ತಿರುಮಲ್ಲೇಶ್, ನಗರಪಾಲಿಕೆ ಸದಸ್ಯೆ ರೂಪ ಯೋಗೇಶ್, ಬಿಜೆಪಿ ಮುಖಂಡರಾದ ನರಸಿಂಹಮೂರ್ತಿ, ಕೆ.ಜೆ.ರಮೇಶ್ ಅತಿಥಿಗಳಾಗಿ ಪಾಲ್ಗೊಳ್ಳುವರು ಎಂದರು.

ಕನ್ನಡ ಚಲನಚಿತ್ರ ಹಿನ್ನೆಲೆ ಗಾಯಕರಾದ ಪಿ.ಬಿ.ಶ್ರೀನಿವಾಸ್, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಡಾ.ರಾಜ್‌ಕುಮಾರ್ ಹಾಗೂ ಹಿಂದಿ ಗಾಯಕರಾದ ಮುಖೇಶ್‌ಕುಮಾರ್, ಮಹಮ್ಮದ್ ರಫೀ, ಕಿಶೋರ್‌ಕುಮಾರ್ ಹಾಡಿರುವ ಆಯ್ದ ಗೀತೆಗಳನ್ನು ನುರಿತ ಗಾಯಕರು ಸಾದರಪಡಿಸಲಿದ್ದಾರೆ. ಕಾರ್ಯಕ್ರಮಕ್ಕೆ ಉಚಿತ ಪ್ರವೇಶ ಕಲ್ಪಿಸಲಾಗಿದೆ ಎಂದು ತಿಳಿಸಿದರು. ತಬಲ ವಾದಕ ಪಾರ್ಥ ಸಾರಥಿ ಗೋಷ್ಠಿಯಲ್ಲಿದ್ದರು.

ದಾನ ನಿರೀಕ್ಷೆ ಯೋಗ್ಯವಲ್ಲ, ಕೇಳುವುದು ಅನಿವಾರ್ಯ

ನೋಟ್ ಬ್ಯಾಂಕ್ ಪೇಪರ್ ಮಿಲ್ ಇಂಡಿಯಾ ಸವಲತ್ತುಗಳ ಉದ್ಘಾಟನಾ ಸಮಾರಂಭದಲ್ಲಿ ಪ್ರಿನ್ಸಿಪಾಲ್ ಪ್ರೊ. ಎ.ಎಂ. ಶಿವಸ್ವಾಮಿ



ನಂಜನಗೂಡು, ಮೇ 24(ಸುರ್ದರ್ಶನ್)– ದಾನವನ್ನು ನಿರೀಕ್ಷಿಸುವುದು ಯೋಗ್ಯವಲ್ಲ. ಆದರೆ ಕೊಡಿ ಎಂದು ಕೇಳುವುದು ನಮಗೆ ಅನಿವಾರ್ಯವಾಗಿದೆ ಎಂದು ನಗರದ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಎ.ಎಂ.ಶಿವಸ್ವಾಮಿ ಅಭಿಪ್ರಾಯಪಟ್ಟಿದ್ದಾರೆ.

ಕಾಲೇಜಿನ ಆವರಣದಲ್ಲಿ ಮೈಸೂರಿನ ಬ್ಯಾಂಕ್ ನೋಟ್ ಪೇಪರ್ ಮಿಲ್ ವತಿಯಿಂದ ಸಿಎಸ್‌ಆರ್ (ಕಾರ್ಪೋರೇಟ್ ಕಂಪನಿಗಳ ಸಾಮಾಜಿಕ ಜವಾಬ್ದಾರಿಕೆ) ಫಂಡ್‌ನಿಂದ ಪ್ರಥಮ ದರ್ಜೆ ಕಾಲೇಜಿಗೆ ನೀಡಿರುವ ಸವಲತ್ತುಗಳ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ನಮ್ಮಲ್ಲಿ ಕೆಲವು ನ್ಯೂನತೆಗಳಿವೆ. ಈ ಹಿಂದೆ ಕೊಠಡಿಗಳಿಲ್ಲ, ಡೆಸ್ಕ್ ಇಲ್ಲ ಎಂದು ಎರಡು ಬ್ಯಾಚ್‌ನ ವಿದ್ಯಾರ್ಥಿಗಳು ಪ್ರತಿಭಟಿಸಿದ್ದರು. ನಂತರದ ದಿನಗಳಲ್ಲಿ ಕೊಠಡಿಗಳು ಸಿದ್ಧವಾದರೂ ಮೇಜು, ಕುರ್ಚಿ, ಡೆಸ್ಕ್ ಇರಲಿಲ್ಲ. ಕಂಪ್ಯೂಟರ್ ಕೊಠಡಿಯಲ್ಲೂ ಹಲವು ನ್ಯೂನತೆಗಳಿವೆ. ಆದ್ದರಿಂದ ನಾವು ನಿರೀಕ್ಷಿಸುವುದು ಯೋಗ್ಯವಲ್ಲದಿದ್ದರೂ, ಇವುಗಳನ್ನು ಕೊಡಿ ಎಂದು ಕೇಳುವ ಅನಿವಾರ್ಯತೆ ಯಿದೆ ಎಂದು ಹೇಳಿದರು. ನಂತರ ನೋಟ್ ಬ್ಯಾಂಕ್ ಪೇಪರ್ ಮಿಲ್ ನೀಡಿರುವ ಕೊಡುಗೆಗಳ ಕುರಿತು ಕೃತಜ್ಞತೆ ಸಲ್ಲಿಸಿದರು.

ಈ ಸಂಸ್ಥೆ ನಮಗೆ ಕೊಡುಗೆ ನೀಡಿರುವುದು ಇಲಾಖೆಗೆ ಸಂದ ಗೌರವ ಎಂದು ಕಾಲೇಜು ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕ ಕೆ.ಸಿ.ವೀರಭದ್ರಯ್ಯ ನೋಟ್ ಪೇಪರ್ ಮಿಲ್ ಅವರ ಕೊಡುಗೆಯನ್ನು ಸ್ಮರಿಸಿದರು. ಗ್ರಾಮೀಣ ಭಾಗದ ಕಾಲೇಜಿಗೆ ಇಂತಹ ಕೊಡುಗೆಗಳನ್ನು ನೀಡಿರುವುದು ಸಂತಸ ತಂದಿದೆ. ಇದನ್ನು ವಿದ್ಯಾರ್ಥಿಗಳು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮ ಉದ್ಘಾಟಿಸಿದ ಬ್ಯಾಂಕ್ ನೋಟ್ ಪೇಪರ್ ಮಿಲ್ ಮ್ಯಾನೇಜಿಂಗ್ ಡೈರೆಕ್ಟರ್ ಕೆ.ಜಿ.ವಿಶ್ವನಾಥನ್ ಮಾತನಾಡಿ, ಈ ಎಲ್ಲಾ ಸವಲತ್ತುಗಳನ್ನು ಈ ಕಾಲೇಜಿಗೆ ನೀಡಿರುವುದು ಸಂತಸ ತಂದಿದೆ. ಎಲ್ಲಾ ಉಪಕರಣಗಳನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸಿ ಎಂದರು.

ಬ್ಯಾಂಕ್ ನೋಟ್ ಪೇಪರ್ ಮಿಲ್ ಇಂಡಿಯಾದವರು 75 ಗಣಕಯಂತ್ರ ಮತ್ತು ಡೆಸ್ಕ್ ಸಮೂಹಗಳಿಗೆ ಅಗತ್ಯವಾದ 200 ಕುರ್ಚಿಗಳು, 10 ಅಲ್ಮೇರಾ, 6 ಮಲ್ಟಿ ಮೀಡಿಯಾ ಪ್ರೊಜೆಕ್ಟರ್, ರಸಾಯನಶಾಸ್ತ್ರ ಲ್ಯಾಬ್ ಪರಿಕರಗಳು, ಸೇರಿದಂತೆ ಸುಮಾರು 73 ಲಕ್ಷ ರೂ. ಮೌಲ್ಯದ ಸೌಲಭ್ಯಗಳನ್ನು ಕಾಲೇಜಿನ ಶೈಕ್ಷಣಿಕ ಹಿತದೃಷ್ಟಿಯಿಂದ ಸಿಎಸ್‌ಆರ್ ಫಂಡ್‌ನಿಂದ ನೀಡಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ (ಎಫ್&ಎ) ಬಿಎನ್‌ಪಿಎಂನ ಜನರಲ್ ಮ್ಯಾನೇಜರ್ ಕೆ.ಧರಣಿ ಕುಮಾರ, ಟೆಕ್ನಿಕಲ್ ಮ್ಯಾನೇಜರ್ ಅನಂತ ಹೆಗ್ಡೆ, ಮಾನವ ಸಂಪನ್ಮೂಲ ವಿಭಾಗದ ಮಹಾಪಾತ್ರೋ, ಕಂಪನಿ ಕಾರ್ಯದರ್ಶಿ ಲಕ್ಷ್ಮೀಶಬಾಬು, ಅಧ್ಯಾಪಕರು, ವಿದ್ಯಾರ್ಥಿಗಳ ಹಾಜರಿದ್ದರು.

ನಾಪತ್ತೆಯಾಗಿದ್ದ ಬಾಲಕನ ಶವ ಪತ್ತೆ: ಕೊಲೆ ಶಂಕೆ



ತಗಡೂರು, ಮೇ 24 (ಮೋಹನ್)– ಕಳೆದ ಮೂರು ದಿನಗಳ ಹಿಂದೆ ನಾಪತ್ತೆಯಾಗಿದ್ದ ಬಾಲಕನ ಶವ ನಂಜನಗೂಡು ತಾಲೂಕಿನ ತಗಡೂರು ಗ್ರಾಮದ ಜೋಡಿಕಟ್ಟೆ ಕೆರೆಯಲ್ಲಿ ಪತ್ತೆಯಾಗಿದ್ದು, ಪೋಷಕರು ಇದು ಕೊಲೆ ಎಂದು ಶಂಕೆ ವ್ಯಕ್ತಪಡಿಸಿದ್ದಾರೆ. ಗ್ರಾಮದ ಲೇ. ಮಂಜು ಹಾಗೂ ನಾಗಮ್ಮ ಅವರ ಪುತ್ರ ವಿಷ್ಣು(11) ಅನುಮಾನಾಸ್ಪದವಾಗಿ ಮೃತಪಟ್ಟ ಬಾಲಕ.

ಏನಿದು ಘಟನೆ?: ಮೇ 22ರಂದು ಗ್ರಾಮದಲ್ಲಿ ಭಗೀರಥ ಜಯಂತಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ಈ ಹಿನ್ನಲೆಯಲ್ಲಿ ವಿಷ್ಣು ಕಾರ್ಯಕ್ರಮ ನೋಡಲು ಹೋಗುತ್ತೇನೆಂದು ಮನೆಯಿಂದ ಹೊರ ಹೋದವನು. ರಾತ್ರಿಯಾದರೂ ಮನೆಗೆ ವಾಪಸ್ ಬಂದಿರಲಿಲ್ಲ ಇದರಿಂದ ಗಾಬರಿಯಾದ ಬಾಲಕನ ಪೋಷಕರು ಎಲ್ಲೆಡೆ ವಿಚಾರಿಸಿದರೂ ಆತನ ಸುಳಿವು ದೊರೆತಿರಲಿಲ್ಲ. ಸೋಮವಾರ ಮಧ್ಯಾಹ್ನ ತಗಡೂರು ಗ್ರಾಮದ ಜೋಡಿಕಟ್ಟೆ ಕೆರೆಗೆ ಹೋಗಿದ್ದ ಕುರಿಗಾಹಿಗಳು ಕೆರೆಯಲ್ಲಿ ಬಾಲಕನೊಬ್ಬನ ಶವ ತೇಲುತ್ತಿರುವುದನ್ನು ಗಮನಿಸಿ, ಗ್ರಾಮಸ್ಥರಿಗೆ ತಿಳಿಸಿದರು.

ಕೊಲೆ ಶಂಕೆ: ಕೆರೆಯಲ್ಲಿ ಬಾಲಕನ ಶವ ತೇಲುತ್ತಿರುವ ವಿಚಾರ ತಿಳಿದು ಸ್ಥಳಕ್ಕೆ ನಂಜನಗೂಡು ಡಿವೈಎಸ್‌ಪಿ ಗೋವಿಂದ್‌ರಾಜ್, ಸರ್ಕಲ್ ಇನ್‌ಸ್ಪೆಕ್ಟರ್ ಲಕ್ಷ್ಮಿಕಾಂತ್ ತಳವಾರ್, ಕವಲಂದೆ ಪಿಎಸ್‌ಐ ಮಹೇಂದ್ರ ಭೇಟಿ ನೀಡಿ, ಸ್ಥಳೀಯರ ನೆರವಿನಿಂದ ಶವ ಹೊರತೆಗೆಯಲಾಯಿತು. ವಿಷ್ಣುವಿನ ಪೋಷಕರು ಶವವನ್ನು ಗುರುತಿಸಿದ್ದಾರೆ. ಆದರೆ, ಮೃತ ಬಾಲಕನ ಮೈ ಮೇಲೆ ಯಾವುದೇ ಬಟ್ಟೆ ಇಲ್ಲದಿರುವುದನ್ನು ಗಮನಿಸಿದ ಪೋಷಕರು ನನ್ನ ಮಗನನ್ನು ಕೊಲೆ ಮಾಡಲಾಗಿದೆ ಎಂದು ಶಂಕೆ ವ್ಯಕ್ತಪಡಿಸಿದ್ದಾರೆ.

ಈ ಸಂಬಂಧ ಕವಲಂದೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರಧಾನಮಂತ್ರಿ ಫಸಲ್ ಭೀಮಾ ಯೋಜನೆ ಸದ್ಬಳಕೆಗೆ ಸಲಹೆ



ತಿ.ನರಸೀಪುರ, ಮೇ 24(ಎಸ್‌ಕೆ)– ಪ್ರಧಾನಮಂತ್ರಿ ಫಸಲ್ ಭೀಮಾ ಯೋಜನೆಯು ಅತಿವೃಷ್ಟಿ, ಅನಾವೃಷ್ಟಿಯಿಂದ ಬೆಳೆ ಹಾನಿಗೊಳಗಾದ ವೇಳೆ ರೈತರ ನೆರವಿಗೆ ಬರಲಿದ್ದು, ರೈತರು ಯೋಜನೆಯ ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಬಿಜೆಪಿ ರೈತ ಮೋರ್ಚಾದ ರಾಜ್ಯ ಕಾರ್ಯದರ್ಶಿ ಡಾ.ಜಿ.ನವೀನ್ ಸಲಹೆ ನೀಡಿದರು.

ತಾಲೂಕಿನ ಶಂಭುದೇವನಪುರ ಗ್ರಾಮದಲ್ಲಿ ಅತಿವೃಷ್ಟಿಯಿಂದ ಉದ್ದು ಬೆಳೆ ನಾಶವಾದ ಹಿನ್ನೆಲೆಯಲ್ಲಿ ರೈತರ ಜಮೀನಿಗೆ ಭೇಟಿ ನೀಡಿ ಬೆಳೆಯ ನಾಶದ ಅಂದಾಜಿನ ಬಗ್ಗೆ ರೈತರಿಂದ ಮಾಹಿತಿ ಪಡೆದು ಮಾತನಾಡಿದ ಅವರು, ಪಕ್ಷದ ರಾಜ್ಯಾಧ್ಯಕ್ಷರ ಆದೇಶದ ಮೇರೆಗೆ ರಾಜ್ಯಾದ್ಯಂತ ಪದಾಧಿಕಾರಿಗಳೊಂದಿಗೆ ಪ್ರವಾಸ ಮಾಡಿ ಬೆಳೆಯ ನಷ್ಟದ ಅಂದಾಜಿನ ಬಗ್ಗೆ ರಾಜ್ಯಾಧ್ಯಕ್ಷರಿಗೆ ವರದಿ ಸಲ್ಲಿಸುವ ಕೆಲಸ ಮಾಡುತ್ತಿದ್ದೇವೆ. ಪರಿಶೀಲನೆ ವೇಳೆ ಗ್ರಾಮದಲ್ಲಿ ಉದ್ದು ಬೆಳೆದ ರೈತರಿಗೆ ಸಾಕಷ್ಟು ನಷ್ಟ ಉಂಟಾಗಿರುವುದು ಕಂಡು ಬಂದಿದೆ. ನಷ್ಟದ ಅಂದಾಜಿನ ಬಗ್ಗೆ ವರದಿಯನ್ವಯ ರಾಜ್ಯಾಧ್ಯಕ್ಷರು ಸರ್ಕಾರದ ಗಮನ ಸೆಳೆಯಲಿದ್ದಾರೆ ಎಂದರು.

ಮೈಸೂರು ಗ್ರಾಮೀಣ ಭಾಗದಲ್ಲಿ ಅತಿವೃಷ್ಟಿ ಮತ್ತು ಅನಾವೃಷ್ಟಿಯಿಂದ ಸಾಕಷ್ಟು ಬೆಳೆ ನಾಶವಾಗಿ ರೈತರು ಕಂಗಾಲಾಗಿದ್ದಾರೆ. ರೈತರಿಗೆ ಯಾವುದೇ ಪರಿಹಾರದ ಭರವಸೆ ನೀಡಲು ಚುನಾವಣಾ ನೀತಿ ಸಂಹಿತೆ ಅಡ್ಡ ಬಂದಿದೆ. ಆದರೂ, ಸಮಾಜದ ಮುಖ್ಯವಾಹಿನಿಯಲ್ಲಿ ರೈತರು ಇರುವುದರಿಂದ ಸರ್ಕಾರ ನಿರ್ಲಕ್ಷ್ಯ ಮಾಡದೇ ಅವರ ಸಂಕಷ್ಟಕ್ಕೆ ಸ್ಪಂದಿಸುವ ಕೆಲಸ ಮಾಡಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕೃಷಿ ಕ್ಷೇತ್ರದಲ್ಲಿ ಸಾಕಷ್ಟು ಉತ್ತಮ ಕಾರ್ಯಕ್ರಮಗಳನ್ನು ಮುಖ್ಯಮಂತ್ರಿಗಳು ಜಾರಿಗೊಳಿಸಿದ್ದು, ಮಣ್ಣಿನ ಆರೋಗ್ಯ, ಸಣ್ಣ ನೀರಾವರಿ, ಅಣೆಕಟ್ಟುಗಳ ನಿರ್ವಹಣೆ, ಸಾವಯುವ ಕೃಷಿ, ರೈತರ ಮಾರುಕಟ್ಟೆ ಹಾಗೂ ಆತ್ಮನಿರ್ಭರ ಭಾರತ ಕೃಷಿ ಸೇರಿದಂತೆ ಅನೇಕ ರೈತ ಪರ ಯೋಜನೆಗಳ ಬಗ್ಗೆ ರೈತರು ಮಾಹಿತಿ ಪಡೆದು ಯೋಜನೆ ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಈ ವೇಳೆ ಜಿಲ್ಲಾಧ್ಯಕ್ಷ ರಮೇಶ್ ಕುಮಾರ್, ಮಂಡಲ ಉಸ್ತುವಾರಿ ಸತೀಶ್, ಜಿಲ್ಲಾ ಉಪಾಧ್ಯಕ್ಷ ಎಸ್.ಬಿ.ಟಿ. ಸುರೇಶ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆಬ್ಬೇಹುಂಡಿ ಶಿವಕುಮಾರ್, ಮಂಡಲ ಅಧ್ಯಕ್ಷ ಗುರು ಪ್ರಸಾದ್, ಯುವ ಮೋರ್ಚಾ ಉಪಾಧ್ಯಕ್ಷ ರವೀಂದ್ರ ಬಾಬು, ರೈತ ಮೋರ್ಚಾ ಉಪಾಧ್ಯಕ್ಷ ನಿರಂಜನ್, ತಾಲೂಕು ಪ್ರಧಾನ ಕಾರ್ಯದರ್ಶಿ ಬಸಪ್ಪ ಪಟೇಲ್, ದೊಡ್ಡಪುರ ಸಿದ್ದರಾಜು, ಅಭಿ, ಕೆ.ಪಿ.ಬಸವರಾಜಪ್ಪ ಮತ್ತಿತರರಿದ್ದರು.

ಪದವೀಧರರ ಸಮಸ್ಯೆ ಬಗೆಹರಿಸದ ಅಭ್ಯರ್ಥಿಗಳಿಗೆ ಚುನಾವಣೆಯಲ್ಲಿ ಬಹಿಷ್ಕಾರ

ಹೆಚ್.ಡಿ.ಕೋಟೆ, ಸರಗೂರು ಖಾಸಗಿ ಶಾಲಾ-ಕಾಲೇಜು ಶಿಕ್ಷಕರ ಸಂಘದಿಂದ ಎಚ್ಚರಿಕೆ




ಹೆಚ್.ಡಿ.ಕೋಟೆ, ಮೇ 24(ಮಂಜು)– ಪದವೀಧರ ಮೂಲ ಸಮಸ್ಯೆಗಳನ್ನು ಬಗೆಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡದ ಅಭ್ಯರ್ಥಿಗಳಿಗೆ ಈ ಬಾರಿ ನಡೆಯುವ ದಕ್ಷಿಣ ಪದವೀಧರರ ಕ್ಷೇತ್ರದ ಚುನಾವಣೆಯಲ್ಲಿ ನಾವು ಮತದಾನ ಮಾಡದೆ ಬಹಿಷ್ಕಾರ ಮಾಡುತ್ತೇವೆ ಎಂದು ಹೆಚ್.ಡಿ.ಕೋಟೆ ಮತ್ತು ಸರಗೂರು ತಾಲೂಕು ಖಾಸಗಿ ಶಾಲಾ–ಕಾಲೇಜು ಶಿಕ್ಷಕರು ಹಾಗೂ ಉಪನ್ಯಾಸಕರ ಸಂಘದಿಂದ ಎಚ್ಚರಿಕೆ ನೀಡಲಾಯಿತು.

ಪಟ್ಟಣದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಸಂಘದ ಅಧ್ಯಕ್ಷ ಭರತ್‌ರಾಜ್ ಮಾತನಾಡಿ, ಹಲವು ವರ್ಷಗಳಿಂದ ನೆನೆಗುದಿಗೆ ಬಿದ್ದಿರುವ ಪದವೀಧರರ ಸಮಸ್ಯೆಗಳ ಬಗ್ಗೆ ಯಾವೊಬ್ಬ ವಿಧಾನಪರಿಷತ್ ಸದಸ್ಯರು ನಮ್ಮ ಪರವಾಗಿ ಧ್ವನಿಯೆತ್ತಿಲ್ಲ. ಕೊರೊನಾ ಸಂಕಷ್ಟದ ಸಮಯದಲ್ಲಿ ನಮ್ಮ ಸಹಾಯಕ್ಕೆ ಯಾರೂ ಬರಲಿಲ್ಲ. ಆ ಸಮಯದಲ್ಲಿ ನಮ್ಮನ್ನು ಕಾಪಾಡಿದ್ದು ಖಾಸಗಿ ಶಿಕ್ಷಣ ಸಂಸ್ಥೆಗಳು ಮಾತ್ರ. ಹೆಚ್.ಡಿ.ಕೋಟೆ ಮತ್ತು ಸರಗೂರು ತಾಲೂಕಿನಲ್ಲಿ 35 ಖಾಸಗಿ ಶಿಕ್ಷಣ ಸಂಸ್ಥೆಗಳಿದ್ದು, 330 ಶಿಕ್ಷಕರು ಮತ್ತು 120 ಉಪನ್ಯಾಸಕರು ಸೇವೆ ಸಲ್ಲಿಸುತ್ತಿದ್ದೇವೆ. ಇದುವರೆಗೂ ಯಾವ ಅಭ್ಯರ್ಥಿಗಳಿಂದಲೂ ನಮಗೆ ಯಾವುದೇ ಸೌಲಭ್ಯ ಸಿಕ್ಕಿಲ್ಲ ಎಂದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ರಾಜ್‌ಕುಮಾರ್, ಹಿರಿಯ ಸಲಹೆಗಾರ ಪಿ.ಕೆಂಡಗಣ್ಣ ಸ್ವಾಮಿ, ಸಂಘಟನಾ ಕಾರ್ಯದರ್ಶಿ ಚಲುವರಾಜ್, ಸಹ ಕಾರ್ಯದರ್ಶಿಗಳಾದ ರಾಮನಾಯಕ್, ಕುಮಾರ್, ಉಪನ್ಯಾಸಕರಾದ ಅಜಿತ್, ಚಲುವರಾಜು, ಮಹದೇವು, ನಾಗರಾಜು, ಪ್ರದೀಪ್, ಮಂಜು ಇದ್ದರು.

ಶ್ರೀಚೌಡೇಶ್ವರಿ ಅಮ್ಮನವರ ವರ್ಧಂತ್ಯೋತ್ಸವಕ್ಕೆ ಸಂಭ್ರಮದ ತೆರೆ



ಸರಗೂರು, ಮೇ 24(ನಾಗೇಶ್)– ಪಟ್ಟಣದ ಕಪಿಲಾ ನದಿಯಲ್ಲಿ ಕಳೆದ ಐದು ದಿನಗಳಿಂದ ನಡೆಯುತ್ತಿರುವ ಶ್ರೀಚೌಡೇಶ್ವರಿ ಅಮ್ಮವರ ವರ್ಧಂತ್ಯೋತ್ಸವಕ್ಕೆ ಮಂಗಳವಾರ ತೆರೆಬಿದ್ದಿತ್ತು.

ಕೊನೆಯ ದಿನವಾದ ಮಂಗಳವಾರ ತೊಗಟವೀರ ಕ್ಷತ್ರಿಯ ಸಮಾಜದಿಂದ ತೆಪ್ಪೋತ್ಸವ ಸೇವೆ ಅದ್ದೂರಿಯಾಗಿ ನಡೆಯಿತು. ಶ್ರೀಚೌಡೇಶ್ವರಿ ಅಮ್ಮನವರ ಉತ್ಸವ ಮೂರ್ತಿಯನ್ನು ದೇವಾಲಯದಿಂದ ಮೆರವಣಿಗೆ ಮೂಲಕ ಕಪಿಲಾ ನದಿಗೆ ತೆರಳಿ ಗಂಗೆ ಪೂಜೆ ನಡೆಸಿ ಅಮ್ಮನವರ ಉತ್ಸವ ಮೂರ್ತಿಯನ್ನು ದೋಣಿಯಲ್ಲಿ ಕೂರಿಸಿ ನದಿಯಲ್ಲಿ ತೆಪ್ಪೋತ್ಸವ ನಡೆಸಲಾಯಿತು. ನೂರಾರು ಭಕ್ತರು ತಾಯಿಯ ದರ್ಶನ ಪಡೆದರು. ಯುವಕರು ಓಕುಳಿ ನಡೆಸಿ ಸಂಭ್ರಮಿಸಿದರು. ನಂತರ ಪ್ರಸಾದ ವಿನಿಯೋಗ ಮಾಡಲಾಯಿತು.

ವರುಣಾ ಕ್ಷೇತ್ರದ ವಿವಿಧೆಡೆ ಮೈ.ವಿ.ರವಿಶಂಕರ್ ಪರ ಮತಯಾಚನೆ



ತಿ.ನರಸೀಪುರ, ಮೇ 24(ಎಸ್‌ಕೆ)– ತಾಲೂಕಿನ ವರುಣಾ ಕ್ಷೇತ್ರ ವ್ಯಾಪ್ತಿಯ ವಿವಿಧೆಡೆ ದಕ್ಷಿಣ ಪದವೀಧರರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಪರ ಬಿಜೆಪಿ ಮುಖಂಡ ಶರತ್ ಪುಟ್ಟಬುದ್ಧಿ ಪ್ರಚಾರ ನಡೆಸಿ ಮತಯಾಚಿಸಿದರು.

ಬಳಿಕ ವರುಣಾ ವಿಧಾನಸಭಾ ಕ್ಷೇತ್ರದ ಹಾರೋಹಳ್ಳಿ–ಮೆಲ್ಲಹಳ್ಳಿ ಜಿಪಂಗೆ ಸೇರಿದ ಕೀಳನಪುರ ಗ್ರಾಪಂ ವ್ಯಾಪ್ತಿಯ ಕೀಳನಪುರ ಸರ್ಕಾರಿ ಪ್ರೌಢಶಾಲೆ, ಎಂ.ಸಿ.ಹುಂಡಿ, ಪುಟ್ಟೇಗೌಡನ ಹುಂಡಿ ಗ್ರಾಮಗಳ ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ಹಾಗೂ ಪದವೀಧರರ ಮನೆಗೆ ಭೇಟಿ ನೀಡಿ ಮತಯಾಚಿಸಿ ನಂತರ, ವರಕೋಡು ಗ್ರಾಪಂ ವ್ಯಾಪ್ತಿಯ ಮೊರಾರ್ಜಿ ದೇಸಾಯಿ ಪ್ರೌಢಶಾಲಾ ಹಾಗೂ ಕಾಲೇಜಿಗೆ ತೆರಳಿ ಮೈ.ವಿ.ರವಿಶಂಕರ್‌ಗೆ ಮೊದಲ ಪ್ರಾಶಸ್ತ್ಯ ಮತ ನೀಡಿ ಅವರನ್ನು ಭಾರೀ ಅಂತರದಿಂದ ಗೆಲ್ಲಿಸುವಂತೆ ಮನವಿ ಮಾಡಿದರು.

ಕಾರ್ಯಕರ್ತರು ಪದವೀಧರರ ಮನವೊಲಿಸಿ ಬಿಜೆಪಿ ಅಭ್ಯರ್ಥಿ ರವಿಶಂಕರ್ ಗೆಲುವಿಗೆ ಶ್ರಮಿಸಬೇಕು ಎಂದು ಕರೆ ನೀಡಿದ ಅವರು, ಚುನಾವಣೆಯಲ್ಲಿ ನಮ್ಮ ಅಭ್ಯರ್ಥಿ ಗೆಲುವು ಖಚಿತ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಈ ವೇಳೆ ಪಿಎಲ್‌ಡಿ ಬ್ಯಾಂಕ್ ನಿರ್ದೇಶಕರಾದ ಡಿ.ಮಹೇಶ್, ಕುಪ್ಪೇಗಾಲ ಶಿವಬಸಪ್ಪ ಸ್ಥಾನೀಯ ಸಮಿತಿ ಅಧ್ಯಕ್ಷ ಕೀಳನಪುರ ಮೂರ್ತಿ, ಪಿ.ಜಿ.ಹುಂಡಿ ರಘು ಇನ್ನಿತರರಿದ್ದರು.

ಬಿ.ಎಂ.ಪ್ರಣತಿಗೆ ಅತ್ಯುನ್ನತ ಶ್ರೇಣಿ



ಪಿರಿಯಾಪಟ್ಟಣ ಮೇ 24– ತಾಲೂಕಿನ ಕೊಪ್ಪದಲ್ಲಿರುವ ಭಾರತ್ ಮಾತಾ ಆಂಗ್ಲ ಮಾಧ್ಯಮ ಶಾಲೆ ವಿದ್ಯಾರ್ಥಿನಿ ಬಿ.ಎಂ.ಪ್ರಣತಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 592 ಅಂಕ ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾಳೆ. ಕನ್ನಡ–124, ಇಂಗ್ಲಿಷ್–94, ಹಿಂದಿ–91, ಗಣಿತ–90, ವಿಜ್ಞಾನ–93, ಸಮಾಜದಲ್ಲಿ 100 ಅಂಕ ಪಡೆದಿದ್ದಾರೆ. ಈಕೆ ಭೂತನಹಳ್ಳಿ ಗ್ರಾಮದ ಬಿ.ಜೆ.ಮಂಜು ಮತ್ತು ಅಂಗನವಾಡಿ ಕಾರ್ಯಕರ್ತೆ ಎನ್.ಎಸ್.ಭಾಗ್ಯ ದಂಪತಿ ಪುತ್ರಿ

ಹಂಪಾಪುರದಲ್ಲಿ ಶ್ರೀ ಕಾರ್ನಾಡು ಮಾಲಮ್ಮ ದೇವಸ್ಥಾನ ಉದ್ಘಾಟನೆ





ಹಂಪಾಪುರ, ಮೇ 24– ನಂಜನಗೂಡು ತಾಲೂಕು ಕೌಲಂದೆ ಹೋಬಳಿ ಹಂಪಾಪುರ ಗ್ರಾಮದಲ್ಲಿ ಸಂಪೂರ್ಣವಾಗಿ ಜೀರ್ಣೋದ್ಧಾರಗೊಂಡ ಶ್ರೀ ಕಾರ್ನಾಡು ಮಾಲಮ್ಮ ದೇವಸ್ಥಾನವು ಸೋಮವಾರ ಸಾವಿರಾರು ಭಕ್ತರ ಸಮ್ಮುಖದಲ್ಲಿ ಉದ್ಘಾಟನೆಗೊಂಡಿತು.

ಬೆಳಗ್ಗೆ 6.20 ರಿಂದ 7.20ರೊಳಗೆ ಸಲ್ಲುವ ಶುಭಲಗ್ನದಲ್ಲಿ ಕುಂಭಾಭಿಷೇಕದೊಂದಿಗೆ ಕಳಶ ಹೊತ್ತ ಕಿಶೋರಿಯರು ಮತ್ತು ಹಂಪಾಪುರ ಬಸವ ದೇವಸ್ಥಾನ ಪ್ರವೇಶಿಸುವುದ ರೊಂದಿಗೆ ಉದ್ಘಾಟಿಸಲಾಯಿತು. ನಂತರ ಹಂಪಾಪುರದಲ್ಲಿ ನೆಲೆಸಿರುವ ಶ್ರೀ ಬೇಗೂರು ಮಾಲರಸಮ್ಮ, ಶ್ರೀ ಚಿಕ್ಕಮಾಲರಸಮ್ಮ, ಶ್ರೀ ಕಾರ್ನಾಡು ಮಾಲಮ್ಮ, ಶ್ರೀ ಹೊಳೆ ಮಸಣಮ್ಮ, ಶ್ರೀ ಪವಾಡ ಮಾಲಾರಸಮ್ಮ, ಶ್ರೀ ಸಿದ್ದರಾಮೇಶ್ವರ ಮತ್ತು ಶ್ರೀ ಹೊಳೆ ಚಿಕ್ಕಮ್ಮ ಚಿಕ್ಕದೇವಿಯರ ಉತ್ಸವ ಮೂರ್ತಿಯೊಂದಿಗೆ ಗ್ರಾಮದಲ್ಲಿ ಭವ್ಯ ಮೆರವಣಿಗೆ ನಡೆಸಿ ಆಯಾ ದೇವಸ್ಥಾನಗಳಲ್ಲಿ ಸಂದಿಸಿ ದೇವರು ದೇವಾಲಯವನ್ನು ಪ್ರವೇಶಿಸಿತು.

ಈ ವೇಳೆ ಭಕ್ತರ ಹರ್ಷೋದ್ಗಾರ ಮುಗಿಲುಮುಟ್ಟಿತು. ನಂತರ ಭಕ್ತರು ಎಲ್ಲಾ ದೇವಸ್ಥಾನಗಳಿಗೂ ತೆರಳಿ ತಾವು ಮನೆಯಿಂದ ತಂದಿದ್ದ ಕಜ್ಜಾಯದೊಂದಿಗೆ ಪೂಜೆ ಸಲ್ಲಿಸಿದರು. ಮೆರವಣಿಗೆಯಲ್ಲಿ ನಂದಿಧ್ವಜ ಕುಣಿತ ಎಲ್ಲರನ್ನು ಆಕರ್ಷಿಸಿತು. ಜೊತೆಗೆ ಇಡೀ ಊರಿನಲ್ಲಿ ಜಾತ್ರೆ ಮತ್ತು ಹಬ್ಬದ ವಾತಾವರಣ ನಿರ್ಮಾಣವಾಗಿತ್ತು. ನಂತರ ಸಾವಿರಾರು ಭಕ್ತರಿಗೂ ಮಹಾಪ್ರಸಾದದ ವ್ಯವಸ್ಥೆ ನಡೆಸಲಾಗಿತ್ತು.

ಇದಕ್ಕೂ ಮುನ್ನ ಶ್ರೀ ಕಾರ್ನಾಡು ಮಾಲಮ್ಮ ದೇವಸ್ಥಾನದ ಉದ್ಘಾಟನೆ ಹಿನ್ನೆಲೆಯಲ್ಲಿ ಶನಿವಾರ ಮತ್ತು ಭಾನುವಾರ ಗಂಗಾಪೂಜೆ, ಯಾಗಶಾಲಾ ಪ್ರವೇಶ, ಗಣಪತಿ ಹೋಮ ಸೇರಿದಂತೆ ಇನ್ನಿತರ ದೇವತಾ ಕಾರ್ಯಗಳು ನಡೆಯಿತು.

ಎಸ್‌ಎಸ್‌ಎಲ್‌ಸಿ: ಹುರ ಸರ್ಕಾರಿ ಶಾಲೆಗೆ ಶೇ 100 ಫಲಿತಾಂಶ



ಪ್ರೀತಿ



ಪ್ರತಾಪ್



ನಂದಿನಿ



ಲಾವಣ್ಯ

ಮಲ್ಕುಂಡಿ, ಮೇ 24(ಚನ್ನಪ್ಪ)– ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ನಂಜನಗೂಡು ತಾಲೂಕಿನ ಹುರ ಗ್ರಾಮದ ಸರ್ಕಾರಿ ಪ್ರೌಢಶಾಲೆಗೆ ಶೇ 100ರಷ್ಟು ಫಲಿತಾಂಶ ಬಂದಿದೆ.

ಶಾಲೆಯ ವಿದ್ಯಾರ್ಥಿಗಳಾದ ಪ್ರೀತಿ 573, ಬಿ.ಪ್ರತಾಪ್ 573, ನಂದಿನಿ 567, ಲಾವಣ್ಯ 559 ಅಂಕ ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಪರೀಕ್ಷೆಗೆ ಹಾಜರಾಗಿದ್ದ ಶಾಲೆಯ 22 ವಿದ್ಯಾರ್ಥಿಗಳು 18 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ ಎಂದು ಶಾಲೆಯ ಶಿಕ್ಷಕರು ತಿಳಿಸಿದ್ದಾರೆ.

ಪಡಿತರ ಅಕ್ಕಿ ಅಕ್ರಮ ಮಾರಾಟ ಆರೋಪ

ಬಸವರಾಜುಪುರ ನ್ಯಾಯಬೆಲೆ ಅಂಗಡಿಗೆ ಬೀಗ ಮುದ್ರೆ

- 24.90ಲಕ್ಷ ಮೌಲ್ಯದ 1,078 ಕ್ವಿಂಟಾಲ್ ಅಕ್ಕಿ
- 1.72 ಕೋಟಿ ಮೌಲ್ಯದ 8916 ಕ್ವಿಂಟಾಲ್ ಭತ್ತ ವಶ

ಹೆಬ್ಬಾಳು, ಮೇ 24(ಜಿಟಿಕೆಶಂಕರ್)– ಅನ್ನಭಾಗ್ಯ ಯೋಜನೆಯ ಪಡಿತರ ಅಕ್ಕಿ ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿರುವುದರ ಜೊತೆಗೆ ಅಕ್ರಮವಾಗಿ ದಾಸ್ತಾನು ಮಾಡಿದ್ದಾರೆಂಬ ಸಾರ್ವಜನಿಕರ ದೂರಿನ್ವಯ ಕೆ.ಆರ್.ನಗರ ತಾಲೂಕಿನ ಬಸವರಾಜುಪುರ ಗ್ರಾಮಕ್ಕೆ ತಹಸೀಲ್ದಾರ್ ಸಂತೋಷ್ ನೇತೃತ್ವದ ತಂಡ ಭೇಟಿ ನೀಡಿ, ಗ್ರಾಮದ ಶ್ರೀಭೈರವೇಶ್ವರ ಅಕ್ಕಿ ಗಿರಿಣಿ ಅಂಗಡಿಗೆ ಬೀಗ ಮುದ್ರೆ ಹಾಕಿದ್ದಾರೆ.

ಅಕ್ರಮವಾಗಿ ಪಡಿತರ ಅಕ್ಕಿ ದಾಸ್ತಾನು ಮಾಡಿರುವುದಾಗಿ ಬಂದ ಖಚಿತ ಮಾಹಿತಿಯ ಮೇರೆಗೆ ದಿಢೀರ್ ಭೇಟಿ ನೀಡಿದ ತಹಸೀಲ್ದಾರ್, ಆಹಾರ ನಿರೀಕ್ಷಕರು ಮತ್ತು ಪೊಲೀಸ್ ನಿರೀಕ್ಷಕರು ಸುಮಾರು 24.90 ಲಕ್ಷ ರೂ. ಮೌಲ್ಯದ 1078.50 ಕ್ವಿಂಟಾಲ್ ಪಡಿತರ ಅಕ್ಕಿಯನ್ನು ವಶಪಡಿಸಿಕೊಂಡಿದ್ದಾರೆ. ಅಕ್ಕಿ ಗಿರಣಿಯಲ್ಲಿದ್ದ ಸುಮಾರು 1.72 ಕೋಟಿ ಮೌಲ್ಯದ 8916.60 ಕ್ವಿಂಟಾಲ್ ಭತ್ತವನ್ನು ಸಹ ತಮ್ಮ ವಶಕ್ಕೆ ಪಡೆದಿದ್ದಾರೆ.

ಸದರಿ ರೈಸ್ ಮಿಲ್ ಮಾಲೀಕರು ಕರ್ನಾಟಕ ರಾಜ್ಯ ಸಹಕಾರ ಮಹಾ ಮಂಡಳಿಯೊಂದಿಗೆ ಸರ್ಕಾರಕ್ಕೆ ಅಕ್ಕಿ ನೀಡಲು 3 ಕೋಟಿ ರೂಗಳ ಠೇವಣಿ ಇರಿಸಿ ಒಪ್ಪಂದ ಮಾಡಿಕೊಂಡಿದ್ದಾರೆ. ಇದಕ್ಕಾಗಿ ರೈತರಿಂದ ಬೆಂಬಲ ಬೆಲೆ ಯೋಜನೆಯಡಿ ಭತ್ತವನ್ನು ಪಡೆದು ಹಲ್ಲಿಂಗ್ ಕಾರ್ಯ ಪ್ರಾರಂಭಿಸಿದ್ದಾರೆ. ಆದರೆ, ಸರ್ಕಾರಕ್ಕೆ ಅಕ್ಕಿ ನೀಡುವಾಗ ನ್ಯಾಯ ಬೆಲೆ ಅಂಗಡಿಯ ವರಿಂದ ಪಡೆಯಲಾದ ಅಕ್ಕಿಯನ್ನು ಮಿಶ್ರಣ ಮಾಡುತ್ತಿದ್ದಾರೆ ಎನ್ನಲಾಗಿದೆ. ಇಂತಹ ಆರೋಪ ಬಂದ ಹಿನ್ನೆಲೆಯಲ್ಲಿ ತಹಸೀಲ್ದಾರ್ ಅವರು ರೈಸ್‌ಮಿಲ್ ಸೀಜ್ ಮಾಡಿರುವುದಾಗಿ ತಿಳಿಸಿದ್ದಾರೆ.

ಈ ಸಂಬಂಧ ರೈಸ್ ಮಿಲ್ ಮಾಲೀಕ ಗಣೇಶ್ ಅವರ ವಿರುದ್ಧ ಕೆ.ಆರ್.ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ರೈಸ್ ಮಿಲ್ ಮಾಲೀಕ ಗಣೇಶ್ ತಲೆಮರಿಸಿಕೊಂಡಿದ್ದಾರೆ.

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಡಾಕ್ಟರ್ ಸ್ಟ್ರೇಂಜ್ (3ಡಿ)(ಇಂ): ಬೆ.11.15ಕ್ಕೆ, ದಿ ಬ್ಯಾಡ್ ಗಾಯ್ಸ್ (3ಡಿ)(ಇಂ): ಮ.1.45ಕ್ಕೆ, ರಾ.9.55ಕ್ಕೆ, ಕೆಜಿಎಫ್ 2 (ಕ): ಸಂ.4ಕ್ಕೆ, ಧಾಕಾಡ್(ಹಿಂ): ರಾ.7.20ಕ್ಕೆ.
ಸ್ಕ್ರೀನ್ 2	ಗರುಡ(ಕ): ಬೆ.10.20ಕ್ಕೆ, ಪ್ರಾರಂಭ (ಕ): ಮ.1.10ಕ್ಕೆ, ಸರ್ಕಾರು ವಾರಿ ಪಾಟ (ತೆ): ಸಂ.4.15ಕ್ಕೆ, ಸಕುಟುಂಬ ಸಮೇತ (ಕ): ರಾ.7.30ಕ್ಕೆ, ಜೊ & ಜೊ(ಮ): ರಾ.9.50ಕ್ಕೆ.
ಸ್ಕ್ರೀನ್ 3	ಅಂಗರ್ (ಕ): ಬೆ.10.45ಕ್ಕೆ, ನೆಂಜುಕು ನೀದಿ (ತ): ಮ.1.30ಕ್ಕೆ, ಅವತಾರ ಪುರುಷ (ಕ): ಸಂ.4.15ಕ್ಕೆ, ಕೆಜಿಎಫ್ 2(ಕ): ಸಂ.6.40ಕ್ಕೆ, ಧಾಕಾಡ್ (ಹಿಂ): ರಾ.10ಕ್ಕೆ.
ಸ್ಕ್ರೀನ್ 4	ಟ್ವೆಂಟಿ ಒನ್ ಅವರ್ಸ್ (ಕ): ಬೆ.10.45ಕ್ಕೆ, ಸಂ.4.35ಕ್ಕೆ, ಕೆಜಿಎಫ್ 2(ಕ): ಮ.1.10ಕ್ಕೆ, ಬೂಲ್ ಬುಲಾಯ್ಯ (ಹಿಂ): ರಾ.7ಕ್ಕೆ, ರಾ.9.50ಕ್ಕೆ

ಐನಾಕ್ಸ್ ಮೂವೀಸ್
LIVE THE MOVIE
ದೂ : 2533444 / 2433456

ಸ್ಕ್ರೀನ್ 1	ದಿ ಬ್ಯಾಡ್ ಗಾಯ್ಸ್ (3ಡಿ)(ಹಿಂ): ಬೆ.11ಕ್ಕೆ, ರಾ.7.30ಕ್ಕೆ, ಡಾಕ್ಟರ್ ಸ್ಟ್ರೇಂಜ್ (3ಡಿ)(ಇಂ): ಮ.1.15ಕ್ಕೆ, ಕೆಜಿಎಫ್ 2(ಕ): ಸಂ.4ಕ್ಕೆ, ಸರ್ಕಾರು ವಾರಿ ಪಾಟ (ತೆ): ರಾ.9.50ಕ್ಕೆ.
ಸ್ಕ್ರೀನ್ 2	ಬೂಲ್ ಬುಲಾಯ್ಯ 2(ಹಿಂ): ಬೆ.9.45ಕ್ಕೆ, ಮ.12.45, ಸಂ.6.35ಕ್ಕೆ, ರಾ.9.40ಕ್ಕೆ, ಧಾಕಾಡ್ (ಹಿಂ): ಮ.3.45ಕ್ಕೆ.
ಸ್ಕ್ರೀನ್ 3	ಸಾರ ವಜ್ರ (ಕ): ಬೆ.10.40ಕ್ಕೆ, ಗರುಡ (ಕ): ಮ.1.25ಕ್ಕೆ, ಪ್ರಾರಂಭ (ಕ): ಸಂ.4.25ಕ್ಕೆ, ಅವತಾರ ಪುರುಷ (ಕ): ರಾ.7.15ಕ್ಕೆ, ಧಾಕಾಡ್ (ಹಿಂ): ರಾ.10ಕ್ಕೆ.
ಸ್ಕ್ರೀನ್ 4	ಕೆಜಿಎಫ್ 2(ಕ): ಬೆ.10ಕ್ಕೆ, ಸಕುಟುಂಬ ಸಮೇತ (ಕ): ಮ.1.30ಕ್ಕೆ, ನೆಂಜುಕು ನೀದಿ (ತ): ಮ.3.55ಕ್ಕೆ, ಟ್ವೆಂಟಿ ಒನ್ ಅವರ್ಸ್ (ಕ): ಸಂ.6.55ಕ್ಕೆ, ಜೊ & ಜೊ (ಮ): ರಾ.9.30ಕ್ಕೆ,

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಕಟಿಂಗ್ ಶಾಪ್ (ಕ): ಬೆ.10.55ಕ್ಕೆ, ಪ್ರಾರಂಭ (ಕ): ಮ.1.25ಕ್ಕೆ, ಸಕುಟುಂಬ ಸಮೇತ (ಕ): ಸಂ.4.30ಕ್ಕೆ, ಟ್ವೆಂಟಿ ಒನ್ ಅವರ್ಸ್ (ಕ): ಸಂ.6.40ಕ್ಕೆ, ಧಾಕಾಡ್ (ಹಿಂ): ರಾ.9ಕ್ಕೆ.
ಸ್ಕ್ರೀನ್ 2	ಟ್ವೆಂಟಿ ಒನ್ ಅವರ್ಸ್ (ಕ): ಬೆ.10.45ಕ್ಕೆ, ಕಂಡ್ಹಿಡಿ ನೋಡನ (ಕ): ಮ.1.15ಕ್ಕೆ, ಕೆಜಿಎಫ್ 2 (ಕ): ಸಂ.4.30ಕ್ಕೆ, ರಾ.7.45ಕ್ಕೆ,
ಸ್ಕ್ರೀನ್ 3	ಸರ್ಕಾರು ವಾರಿ ಪಾಟ (ತೆ): ಸಂ.6.45ಕ್ಕೆ,
ಸ್ಕ್ರೀನ್ 4	ಅಂಗರ್ (ಕ): ಬೆ.10.30ಕ್ಕೆ, ಅವತಾರ ಪುರುಷ (ಕ): ಮ.1.10ಕ್ಕೆ, ಧಾಕಾಡ್ (ಹಿಂ): ಮ.3.50ಕ್ಕೆ, ನೆಂಜಕು ನೀದಿ (ತ): ಸಂ.6.20ಕ್ಕೆ, ಡಾನ್ (ತ): ರಾ.9ಕ್ಕೆ

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ಫೋರಂ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕೆಜಿಎಫ್ 2(ಕ): ಬೆ.8ಕ್ಕೆ, ಬೆ.9ಕ್ಕೆ, ಬೆ.10.30ಕ್ಕೆ, ಬೆ.11.15ಕ್ಕೆ, ಬೆ.11.30ಕ್ಕೆ, ಮ.12.30ಕ್ಕೆ, ಮ.2ಕ್ಕೆ, ಮ.2.45ಕ್ಕೆ, ಮ.3ಕ್ಕೆ, ಸಂ.4ಕ್ಕೆ, ಸಂ.5.30ಕ್ಕೆ, ಸಂ.6.15ಕ್ಕೆ, ಸಂ.6.30ಕ್ಕೆ, ರಾ.7.30ಕ್ಕೆ, ರಾ.9ಕ್ಕೆ, ರಾ.9.45ಕ್ಕೆ, ರಾ.10ಕ್ಕೆ, ಆರ್‌ಆರ್‌ಆರ್(ಕ): ರಾ.9.30ಕ್ಕೆ, ಕೆಜಿಎಫ್ 2 (ಹಿಂ): ಬೆ.10.45ಕ್ಕೆ, ಸಂ.6ಕ್ಕೆ, ಆರ್‌ಆರ್‌ಆರ್(ತೆ): ಮ.2.15ಕ್ಕೆ, ಬೀಸ್ಟ್ (ತ): ಬೆ.11.30ಕ್ಕೆ, ಮ.2.50ಕ್ಕೆ, ಸಂ.6.10ಕ್ಕೆ, ರಾ.9.30ಕ್ಕೆ.

ಗರುಡ ಮಾಲ್, 1ನೇ ಮಹಡಿ, ಮೊ.ನಂ: 9901373210

ಹರೀಶ ವಯಸ್ಸು 36 (ಕ): ಮ.3.30ಕ್ಕೆ, ಲವ್ ಮಾಕ್ಟೇಲ್ 2 (ಕ): ಮ.12.25ಕ್ಕೆ, ಮ.3.05ಕ್ಕೆ, ರಾಧೆಶ್ಯಾಮ್ (ತೆ): ಬೆ.9.15ಕ್ಕೆ, ಬೆ.10.20ಕ್ಕೆ, ಮ.12.10ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ಸಂ.6.05ಕ್ಕೆ, ರಾ.7.05ಕ್ಕೆ, ರಾ.9ಕ್ಕೆ, ರಾ.10ಕ್ಕೆ, ದಿ ಬ್ಯಾಟ್‌ಮ್ಯಾನ್ (ಇಂ): ಬೆ.11.55ಕ್ಕೆ, ಸಂ.5.55ಕ್ಕೆ, ಗಂಗೂಬಾಯ್ ಕಾಠಿಯಾವಾಡಿ (ಹಿಂ): ರಾ.9.30ಕ್ಕೆ, ಎದರ್ಕುಂ ತುನಿಂದವನ್ (ತ): ಬೆ.9.15ಕ್ಕೆ, ಮ.3.25ಕ್ಕೆ, ಸಂ.6.30ಕ್ಕೆ, ರಾ.9.45ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	**(ದೂ: 2521923)**
ಸರ್ಕಾರು ವಾರಿ ಪಾಠ (ತೆ)	3 ಪ್ರದರ್ಶನಗಳು
ಅಂಗಾರ್ (ಕ)	1 ಪ್ರದರ್ಶನ
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಕೆಜಿಎಫ್–2 (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	**(ದೂ: 2520009)**
ಇಲ್ಲಿಂದ ಆರಂಭವಾಗಿದೆ (ಕ)	1 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಬೂಲ್ ಬೂಲಯ್ಯ–2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
21 ಅವರ್ಸ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
21 ಅವರ್ಸ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ನೆಂಜುಕು ನೀದಿ (ತ)	4 ಪ್ರದರ್ಶನಗಳು
ಸಂಗಂ	
ಪ್ರಾರಂಭ (ಕ)	4 ಪ್ರದರ್ಶನಗಳು
ಲಿಡೋ	
ಸರ್ಕಾರು ವಾರಿ ಪಾಠ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ಪ್ರಾರಂಭ (ಕ)	4 ಪ್ರದರ್ಶನಗಳು
ಸ್ಟರ್ಲಿಂಗ್	
ಪ್ರಾರಂಭ (ಕ)	4 ಪ್ರದರ್ಶನಗಳು
ಸ್ಕೈಲೈನ್	
ದಾಕದ್ (ಹಿ)	4 ಪ್ರದರ್ಶನಗಳು

ಮೈಸೂರು ಬೇಸಿಗೆ ರೇಸುಗಳು

2 ನೇ ದಿನ, ಬುಧವಾರ 25–05–2022

ಇಂದಿನ ರೇಸಿಗೆ ನಮ್ಮ ಆಯ್ಕೆ

(ಮೊದಲನೇ ರೇಸ್ ಮಧ್ಯಾಹ್ನ 1.30 ಗಂಟೆಗೆ)

I. ಬಲಮುರಿ ಪ್ಲೇಟ್ ಡಿ2–1200 ಮೀ. ರೇಟೆಡ್ 00 ರಿಂದ 25. ಮ.1.30ಕ್ಕೆ
1. ಕಂಟ್ರೀಸ್ ಡಿಲೈಟ್ 2. ಕ್ಲೊವೀಸ್ 3. ಲೇಡಿ ಬ್ಲೂ

II. ರೆಡ್ ಸ್ಯಾಟಿನ್ ಪ್ಲೇಟ್– 1200 ಮೀ. ರೇಟೆಡ್ 20 ರಿಂದ 45. ಮ.2.00ಕ್ಕೆ
1. ವೈಲ್ಡ್‌ಸ್ಪೆಲ್ 2. ರಾಜ್‌ವೀರ್ 3. ಸಿಮ್ಮರ್ಸ್

III. ಬಲಮುರಿ ಪ್ಲೇಟ್ ಡಿ1–1200 ಮೀ. ರೇಟೆಡ್ 00 ರಿಂದ 25. ಮ.2.30ಕ್ಕೆ
1. ಡಾಲ್‌ಹೌಸಿ 2. ಶಿವಲಿಕ್ ಸ್ಟೈಲ್ 3. ದಿವಾ ಇನ್ ಗೋಲ್ಡ್

IV. ಪ್ರಿನ್ಸ್ ರಿಜೇಂಟ್ ಪ್ಲೇಟ್– 1400 ಮೀ. ರೇಟೆಡ್ 20 ರಿಂದ 45. ಮ.3.00ಕ್ಕೆ
1. ಸ್ಯೆಂಟ್ ಲುಸಿಕಾ 2. ಬ್ರೇಕ್‌ಅವೆ 3. ಸ್ಯಾಂಟೂರಿನಿ

V. ಮೈಸೂರು ಜ್ಯೂ ಪ್ಲೇಟ್–1400 ಮೀ. ರೇಟೆಡ್ 40 ರಿಂದ 65. ಮ.3.30ಕ್ಕೆ
1. ವಾಟ್ ಇಸ್ ದಿಸ್ 2. ಅಭಿನಂದನ್ 3. ಗಿನ್‌ಟೊಕಿ

VI. ಸ್ಟೀವರ್ಡ್ಸ್ ಟ್ರೋಫಿ –1100 ಮೀ. 3 ವರ್ಷದ (ಟರ್ಮ್ಸ್). ಸಂ.4.00ಕ್ಕೆ
1. ಗ್ಯಾಲರಿ ಕ್ವೀನ್ 2. ಮೆಲೋಸ್ 3. ಮೇಬರಿ

VII. ಮೈಸೂರು ಜುವೆಲಿನ್ ಮಿಲಿಯನ್ –1200 ಮೀ. 3 ವರ್ಷದ (ಟರ್ಮ್ಸ್). ಸಂ.4.30ಕ್ಕೆ
1. ಎಟರ್‌ನಲ್ ಪ್ರಿನ್ಸಸ್ 2. ಒ ಕನ್ನಯ್ಯ 3. ರಾಫ್

VIII. ನಾಗಮಂಗಲ ಪ್ಲೇಟ್–1100 ಮೀ. ರೇಟೆಡ್ 80 ಮತ್ತು ಮೇಲ್ಪಟ್ಟ. ಸಂ.5.00ಕ್ಕೆ
1. ವಚನ್ 2. ಮೇಕ್ ಮೈ ವೇ 3. ಗೋಲ್ಡ್ ಫೀಲ್ಡ್

IX. ಕೋಲಾರ ಪ್ಲೇಟ್–1100 ಮೀ. ರೇಟೆಡ್ 40 ರಿಂದ 65 ಸಂ.5.30ಕ್ಕೆ
1. ಮುಟಾಂಟ್ 2. ಲಾರ್ಡ್ ಕಮಾಂಡರ್ 3. ಮಾರಿಗೋಲ್ಡ್

ದಿನದ ಅತ್ಯುತ್ತಮ	: ಮುಟಾಂಟ್
ಡಬ್ಬಲ್	: ಎಟರ್‌ನಲ್ ಪ್ರಿನ್ಸಸ್, ವಚನ್
ಜಾಕ್‌ಪಾಟ್	: 5, 6, 7, 8 ಮತ್ತು 9
I ಟ್ರಿಬಲ್	: 1, 2 ಮತ್ತು 3
II ಟ್ರಿಬಲ್	: 4, 5 ಮತ್ತು 6
III ಟ್ರಿಬಲ್	: 7, 8 ಮತ್ತು 9
ಎಕ್ಸ್‌ಆಕ್ಸ್	: 8 ಮತ್ತು 9

ಟಿಪ್‌ಸ್ಟರ್ ಪಿಜಿಸಿ

IN THE COURT OF THE XI ADDL CIVIL JUDGE AND J.M.F.C AT MYSURU

O.S. No.1173/2019

Sri.S.M.Mallesha @ Gurumallappa S/o Late. Mallaiah @ Doddakusappa, Aged about 55 years, R/at Settynayakanahalli Village Yelawala Hobli, Mysore Taluk.
.... Plaintiff

And

1) Sri. N.L.Goutham S/o Late N.S. Lingappa, Aged about 63 years, 2) Sri. N.L. Suman S/o Late N.S. Lingappa, Aged about 50 years, 3) Smt. Komalamma W/o Late N.S.Lingappa, Aged about 85 years, 4) Smt. Alaka nandhini D/o Late N.S. Lingappa, Aged about 60 Years. 5) Smt. Shivamala D/o Late N.S.Lingappa Aged about 55 years. All are R/at No.1248, 3rd Cross, C and D Block, Kuvempunagar, Mysore.
.... Defendants

PAPER PUBLICATION

That the above plaintiff filed the above case against the Defendants suit for permanent injunction in O.S. No.1173/2021 and hearing date of the above case has been fixed on 30/06/2022 at 11-00 am Clock. The defendant no. 4 is hereby given notice by way of this paper publication in mysore mitra, mysore (daily news paper) to appear in person or through his counsel, on the above case date fixed for hearing otherwise honorable court will decide the case as exparte.

Given under my hand and seal of this court dated: 21/04/22.

Sri. M.Mahesha, M.Sc, LL.B.,
Komala.S, Advocates
No./9th, 5th A Cross, Near Ramanna Circle, Yadavagiri Mysore.

By order of the court
Sd/- Chief Ministerial Officer
XI addl civil judge & JMFC Mysore
Date: 22/4/22, Place: Mysore

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸ್ಥಾಪನೆ: 1916 ದೂರವಾಣಿ: 0821-2448947

ದಿ ಮೈಸೂರು ಸಿಟಿ ಕೋ-ಆಪರೇಟಿವ್ ಹೌಸಿಂಗ್ ಸೊಸೈಟಿ ಲಿ.,

ಚಾಮರಾಜ ಜೋಡಿ ರಸ್ತೆ, ಮೈಸೂರು -24

ಪ್ರಕಟಣೆ

ಸೊಸೈಟಿಗೆ ಸೇರಿದ ಸಮುದಾಯ ಭವನವನ್ನು ನವೀಕರಣಗೊಳಿಸಿ ಸಭೆ ಸಮಾರಂಭಗಳನ್ನು ನಡೆಸುವ ಸಲುವಾಗಿ ದಿನವೊಂದಕ್ಕೆ ರೂ.4,000-00 ಗಳ ಬಾಡಿಗೆಯನ್ನು ನಿಗದಿಪಡಿಸಿ ಅಪೇಕ್ಷಿ ಪಟ್ಟವರಿಗೆ ಬಾಡಿಗೆಗೆ ನೀಡಲಾಗುತ್ತದೆ.

ಹಾಗೂ

ಸೊಸೈಟಿಯಿಂದ ಈ ಕೆಳಕಂಡಂತೆ ಸ್ಥಿರಾಧಾರ ಸಾಲವನ್ನು ನೀಡಲಾಗುತ್ತಿದೆ.

1. ಮನೆ ಕಟ್ಟಿಸಲು, ಮನೆ ಖರೀದಿಸಲು, ಮನೆ ಆಧಾರ ಸಾಲ, ವಾಣಿಜ್ಯ ಕಟ್ಟಡ ಖರೀದಿಸಲು ರೂ. 1,00,00,000-00
2. ನಿವೇಶನವನ್ನು ಖರೀದಿಸಲು / ನಿವೇಶನಾಧಾರ ಸಾಲ ಗರಿಷ್ಠ ರೂ. 75,00,000-00
3. ಚಿನ್ನದಾಭರಣ ಸಾಲ ಗರಿಷ್ಠ ರೂ. 15,00,000-00

(ಒಂದು ಗ್ರಾಂ ಶುದ್ಧ ಚಿನ್ನಕ್ಕೆ ರೂ. 3,500-00 ಗಳ ನಗಾಧಾರ ಸಾಲವನ್ನು ಶೇಕಡ 8.00 ರ ಬಡ್ಡಿದರದ ರೀತ್ಯಾ)

ಮಾನ್ಯ ಸದಸ್ಯರು ಹಾಗೂ ಗ್ರಾಹಕರು ಈ ಯೋಜನೆಗಳ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ಕೋರಲಾಗಿದೆ.
ಹೆಚ್ಚಿನ ವಿವರಗಳಿಗಾಗಿ ಕಾರ್ಯದರ್ಶಿಯವರನ್ನು ಸಂಪರ್ಕಿಸಲು ಕೋರಿದೆ.

ಆಡಳಿತ ಮಂಡಳಿಯ ಅಪ್ಪಣೆಯ ಮೇರೆ,
ಸಹಿ/- ಜಿ.ಎಸ್.ಶ್ರೀನಾಥ್,
ಕಾರ್ಯದರ್ಶಿ

ಮೈಸೂರು
ದಿನಾಂಕ: 23/05/2022

REGIONAL INSTITUTE OF EDUCATION

National Council of Educational Research and Training, New Delhi
Ministry of Education, Government of India, MYSURU - 570006
Email: principal@riemysore.ac.in, website: www.riemysore.ac.in

WALK-IN-INTERVIEW

The Regional Institute of Education, Mysuru will conduct Walk-in-Interview on the dates as shown against each post purely on contractual basis for the Academic Session 2022-23.

Sl. No.	Name of the Posts	Date of Interviews
1	PGT, TGT, WET, PRT, Pre-Primary, Vocational Teacher & Semi-Professional Assistant	25th to 28th May, 2022
2	Professor, Assistant Professor, Producer Grade - I, Sound Recordist, Technician Grade - I & Laboratory Assistant	01st to 04th June, 2022

For more details please log on to www.riemysore.ac.in
Sd/- Principal

ವಿನಾಯಕ ಪ್ರೌಢಶಾಲೆ, ತರೀಪುರ, ಶ್ರೀರಂಗಪಟ್ಟಣ ತಾಲ್ಲೂಕು

2021-22 ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶಾಲೆಗೆ ಕೀರ್ತಿ ತಂದ ವಿದ್ಯಾರ್ಥಿಗಳಿಗೆ ಅಭಿನಂದನೆಗಳು

100% Result



ರೀತುಶ್ರೀ. ಆರ್ 623-99.68%; ಹೃತ್ವಿಕ್. ಕೆ 611-97.76%; ರಕ್ಷಿತ್ ಗೌಡ.ಎಂ.ಎಲ್ 610-97.6%; ಗಗನ.ಎ.ಎಲ್ 610-97.6%
ಚಿನ್ಮಯ ದೇವಿ.ಎಸ್.ಎನ್ 607-97.12%; ಮಧುಮಿತ.ಎಚ್.ಯು 602-96.32%; ಸಿಂಚನ.ಆರ್ 600-96%; ಕೃತಿಕ.ಎಸ್.ಕೆ 591-94.56%
ದಾಕ್ಷಾಯಿಣಿ.ಎಸ್.ವಿ 590-94.4%; ದುರ್ಗಾ ಪ್ರಸಾದ್ 589-94.24%; ಭವಾನಿ.ಎಂ.ಆರ್ 583-93.28%

ಶುಭಕೋರುವವರು: ಆಡಳಿತ ಮಂಡಳಿ,ಶಾಲಾ ಶಿಕ್ಷಕರು, ಶಾಲಾ ಸಿಬ್ಬಂದಿ ವರ್ಗ ಮತ್ತು ಪೋಷಕ ವರ್ಗ

ದಾಖಲಾತಿ ಪ್ರಾರಂಭವಾಗಿದೆ ಸಂಪರ್ಕಿಸಿ: 9480362100

MYSORE RACE CLUB CHARITABLE TRUST

P.B.No.11, Race Course Road, MYSORE 570 010
Tel.No.2521675, Email: secretary@mysoreraceclub.com

MYSORE RACE CLUB (MRC) EYE HOSPITAL REQUIRES

- GENERAL OPHTHALMOLOGIST (Freshly Graduated MS/DNB Candidates may Apply)
- CORNEA SPECIALIST
- RETINA SPECIALIST
- PEDIATRIC OPHTHALMOLOGIST

Doctors with fellowship in Cornea, Retina & Pediatric ophthalmology from reputed institutions, with surgical experience in SICS and phacoemulsification preferred. Candidates may apply within 7 days to secretary@mysoreraceclub.com with their detailed resume. Salary will be commensurate with qualification, surgical experience.


GSSS BANTWAL MADHAVA SHENOY HIGH SCHOOL

Geetha Shishu Shikshana Sangha (R)
Siddartha Nagar, Mysuru - 570 011.

GSSS Bantwal Madhava Shenoy High School Students have excelled in SSLC Examination, March-April 2022 with overall pass percentage of 98.

No. of Students Appeared	112	First Class	58
Distinction	37	Second Class	15

10th STANDARD TOPPERS 2021 - 22



Shravan C 620 A+ L1 Kan-125/125, L3 Hin-100/100 SCI 100/100; Bhyrava .A 619 A+ L1 Kan-125/125; Lalitha M N 613 A+ L1 Kan-125/125, L3 Hin-100/100, M-100/100, SS-100/100; Bhoomika B M 607 A+ L3 Hin- 100/100, SS- 100/100; Umme Arfain 607 A+ L1 Kan 125/125; Mahalakshmi. M 601 A+
Punith Shuka 595 A+; Nishanth M R 592 A+; Rahul G 592 A+ M-100/100, SIC-100/100; Jeevika B M 591 A+ Eng-100/100; Parinitha G 590 A+; Nanditha C 588 A+ L1 Kan 125/125
Ananya raj 585 A+; Prathiksha S 582 A+ L 1 San- 125/125; Akshatha V 580 A+; Hrudya L Aryan 578 A+; Nanda Kishore S 577 A+; Lochan Kumar G 576 A+
Anusha D 574 A+; Srinivas R 574 A+ SS- 100/100; Varsha MD 574 A+; Sanjana R 572 A+; Niharika HK 569 A+; Amrutha V 567 A+
Vikas Raj .S 565 A+; Huma Elahi 562 A; D C Jeevitha 563 A; Raksha S 556 A; Kushal C Raj 553 A; Sushanth Upadhya 553 A
Chandana S 549 A SS-100/100; Mohith Raj G S 549 A; Pradeep Nehra 549 A; Chandan M 544 A; Anjali Jain 537 A; Kusuma S 537 A
Rithika Sharma 535 A

Congratulations !
The Management of GSSS congratulates the staff and students for their achievement.

BADRIPRASADJI PRE-UNIVERSITY COLLEGE

Siddhartha Nagar, Mysuru - 570 011.

COURSES OFFERED

SCIENCE : 1. PHYSICS, CHEMISTRY, MATHS, BIOLOGY
2. PHYSICS, CHEMISTRY, MATHS, COMPUTER SCIENCE
COMMERCE : BUSINESS STUDIES, ACCOUNTANCY, STATISTICS, COMPUTER SCIENCE

Features:
- Excellent Infrastructure & disciplined academic ambience.
- Well qualified and experienced full time faculty.
- Fee concession for Meritorious students.
- Remedial classes for improved performance.
- Nearest PU College from city in Mysore South.

No Donation
Admissions Open

Contact: 0821-2472452, 9448482452 | Office Timings: 9.00 am to 4.30 pm